ಜನಶಕ್ತಿ
ದುಡಿಯುವ ಜನರ ಪ್ರಾಣ ಮಿತ್ರ
ಕನ್ನಡ ವಾರಪತ್ರಿಕೆ



ಸಂಪುಟ 11 | ಸಂಚಿಕೆ 43 | ಪುಟ 16 | ಅಕ್ಟೋಬರ್ 16-22, 2017 | ರೂ. 10/- web: www.janashakthi.co.in e-mail : js_weekly@yahoo.com

ಕೃಷಿ ಬಿಕ್ಕಟ್ಟು ಎದುರಿಸಲು ಐಕ್ಯ ಹೋರಾಟ

ಕಿಸಾನ್ ಸಭಾ 34ನೇ ಸಮ್ಮೇಳನ ಕರೆ



ಸಮಾಜವಾದ ಮತ್ತು ಸಾಹಿತ್ಯ







ಕಮ್ಯುನಿಸ್ಟರೆಂದರೆ ಬಿಜೆಪಿಗೆ ಏಕಿಷ್ಟು ಭಯ ?


ಚುನಾವಣಾ ಆಯೋಗದ ವಿವಾದಿತ ಘೋಷಣೆ

ಜಿ.ಎಸ್.ಟಿ. ಒಂದು ವರ್ಗ ಪ್ರಹಾರ: ಪ್ರಭಾತ್





ದೀಪಾವಳಿ ಉಡುಗೊರೆ:





ಸುಳ್ಳುಗಳನ್ನು ನಿಲ್ಲಿಸಿ–ಬಿಜೆಪಿ ಮುಖ್ಯ ಕಚೇರಿ ಎದುರೇ ಸಿಪಿಐ(ಎಂ) ಆಗ್ರಹ

ಕೇರಳದಲ್ಲಿ ಬಿಜೆಪಿ–ಆರೆಸ್ಸೆಸ್ ಸಿಪಿಐ(ಎಂ) ಹರಡಿಸುತ್ತಿರುವ ಸುಳ್ಳುಗಳನ್ನು ಮತ್ತು ಹಿಂಸಾಚಾರವನ್ನು ಪ್ರತಿಭಟಿಸಿ ಅಕ್ಟೋಬರ್ 9ರಂದು ದೇಶಾದ್ಯಂತ ಪ್ರತಿಭಟನೆಗಳು ನಡೆದಿವೆ.

ದೇಶದ ರಾಜಧಾನಿಯಲ್ಲಿ ಸಿಪಿಐ(ಎಂ) ದಿಲ್ಲಿ ರಾಜ್ಯಸಮಿತಿ ಕಚೇರಿಯಿಂದ ಬಿಜೆಪಿಯ ಮುಖ್ಯಕಚೇರಿಗೆ ನಡೆದ ಪ್ರತಿಭಟನಾ ಮೆರವಣಿಗೆಯಲ್ಲಿ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ, ಪೊಲಿಟ್‌ಬ್ಯುರೊ ಸದಸ್ಯರಾದ ಪ್ರಕಾಶ ಕಾರಟ್, ಬೃಂದಾ ಕಾರಟ್, ರಾಮಚಂದ್ರನ್ ಪಿಳ್ಳೈ, ಬಿ.ವಿ.ರಾಘವುಲು ಮತ್ತಿತರ ಹಿರಿಯ ಮುಖಂಡರೂ ಭಾಗವಹಿಸಿದ್ದರು.

ಮೆರಣಿಗೆಯಾದ್ಯಂತ ಆರೆಸ್ಸೆಸ್‌ನ ಭಯೋತ್ಪಾದನೆ, ದ್ವೇಷ ರಾಜಕೀಯ ಮತ್ತು ಕೊಲೆ ರಾಜಕೀಯವನ್ನು ಖಂಡಿಸಿ ಘೋಷಣೆಗಳು ಕೇಳಬಂದವು.

ಮೆರವಣಿಗೆ ಬಿಜೆಪಿ ಮುಖ್ಯ ಕಚೇರಿಯಿರುವ 11, ಅಶೋಕ ರಸ್ತೆ ತಲುಪಿದ ನಂತರ ಅಲ್ಲಿ ಪ್ರತಿಭಟನಾ ಸಭೆ ನಡೆಯಿತು. ಸಿಪಿಐ(ಎಂ) ಮುಖಂಡರು ಅದನ್ನುದ್ದೇಶಿಸಿ ಮಾತಾಡಿದರು.

"ಕೇರಳ ವಿಧಾನಸಭೆ ಚುನಾವಣೆಯ ಫಲಿತಾಂಶ ಪ್ರಕಟವಾದ ದಿನವೇ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಚುನಾವಣಾ ಕ್ಷೇತ್ರದಲ್ಲಿ ಬಾಂಬೆಸೆದು ಒಬ್ಬ ಸಿಪಿಐ(ಎಂ) ಕಾರ್ಯಕರ್ತನನ್ನು ಕೊಂದರು. ನಿನ್ನೆ ಸಂಜೆ ಕಣ್ಣೂರಿನಲ್ಲಿ ಸಿಪಿಐ(ಎಂ) ಮೆರವಣಿಗೆಯ ಮೇಲೆ ಬಾಂಬೆಸೆದು ನಮ್ಮ ನಾಲ್ಕು ಕಾರ್ಯಕರ್ತರನ್ನು ಮತ್ತು ನಾಲ್ಕು ಪೋಲೀಸ್ ಸಿಬ್ಬಂದಿಯನ್ನೂ ಗಾಯಗೊಳಿಸಿದರು. ಇಂತಹ ಆರೆಸ್ಸೆಸ್ ಸಿಪಿಐ(ಎಂ)ನ್ನು ದೂಷಿಸುತ್ತಿದೆ. ಇದು ಕಳ್ಳನೇ ಪೋಲಿಸನ್ನು ದೂರುವಂತಿದೆ" ಎಂದ ಸೀತಾರಾಮ್ ಯೆಚುರಿ "ನಮ್ಮ ರಕ್ತದಿಂದ ಬಣ್ಣ ಪಡೆದಿರುವ ಈ ಕೆಂಬಾವುಟ ಹೋರಾಡುತ್ತದೆ. ಈ ಕೆಂಬಾವುಟವನ್ನು ಸೋಲಿಸುವ ಶಕ್ತಿ ಯಾವುದೂ ಇಲ್ಲ" ಎಂದು ಹೇಳಿದರು.

"ಆರೆಸ್ಸೆಸ್ ಇದ್ದಲ್ಲಿ ಹಿಂಸಾಚಾರ, ವಿಭಜನೆ ಸೃಷ್ಟಿಯಾಗುತ್ತದೆ. ಅದು ಅವರ ರಕ್ತಗುಣ. ಕಮ್ಯುನಿಸ್ಟರು, ಎಡಪಂಥೀಯರು ಅವರ ವಿಷಮಯ ಅಜೆಂಡಾಕ್ಕೆ ಅಡ್ಡಿಯಾಗಿರುವುದರಿಂದಾಗಿ ಅವರು ನಮ್ಮ ಮೇಲೆ ಗುರಿಯಿಟ್ಟಿದ್ದಾರೆ. ಆದ್ದರಿಂದ ನಾವೀಗ ಜನರಿಗೆ ಸತ್ಯವನ್ನು ಹೇಳಲು ಬೀದಿಗಿಳಿದಿದ್ದೇವೆ" ಎಂದ ಬೃಂದಾಕಾರಟ್, ಬಿಜೆಪಿ ಜನರಕ್ಷಾ ಯಾತ್ರ ನಿಜವಾಗಿ ಆರೆಸ್ಸೆಸ್ ರಕ್ಷಾ ಯಾತ್ರ, ಅಮಿತ್‌ಷಾ ರಕ್ಷಾ ಯಾತ್ರಾ, ಏಕೆಂದರೆ ಅವರು ದೇಶದ ಗಮನವನ್ನು ತಮ್ಮ ಕುಕೃತ್ಯಗಳಿಂದ ಬೇರೆಡೆಗೆ ತಿರುಗಿಸಲು ಪ್ರಯತ್ನಿಸುತ್ತಿದ್ದಾರೆ ಎಂದರು.

"ಅಮಿತ್ ಷಾ ಅಕ್ಟೋಬರ್ 3 ರಂದು ಕೇರಳದಲ್ಲಿ ಯಾತ್ರೆ ಉದ್ಘಾಟಿಸಿದರು. ಅಕ್ಟೋಬರ್ 5 ರಂದು ಮುಖ್ಯಮಂತ್ರಿಗಳ ಹಳ್ಳಿ ಪಿಣರಾಯಿಯಲ್ಲಿ ತಾನೇ ಪಾದಯಾತ್ರೆಯ ನೇತೃತ್ವ ವಹಿಸುವುದಾಗಿ ಸಾರಿದರು. ಆದರೆ ಅಕ್ಟೋಬರ್ 5 ರಂದು ಯಾತ್ರೆಯಿಂದ ಮಾಯವಾದರು. ಏಕೆಂದರೆ ಕಣ್ಣೂರು ಜಿಲ್ಲೆಯ ಮೂಲಕ ಸಾಗುವಾಗ ಕಣ್ಣೂರಿನ ಮತ್ತು ಕೇರಳದ ಜನ ಯಾತ್ರೆಯನ್ನು ತಿರಸ್ಕರಿಸಿದ್ದಾರೆ ಎಂಬುದು ಸ್ಪಷ್ಟವಾಯಿತು" ಎಂದು ಪ್ರಕಾಶ ಕಾರಟ್ ಹೇಳಿದರು.

ಪ್ರತಿಭಟನಾ ಸಭೆಯ ಅಧ್ಯಕ್ಷತೆಯನ್ನು ಸಿಪಿಐ(ಎಂ) ದಿಲ್ಲಿ ರಾಜ್ಯ ಕಾರ್ಯದರ್ಶಿ ಕೆ.ಎಂ. ತಿವಾರಿ ವಹಿಸಿದ್ದರು.

ಅರ್ಚಕರ ನೇಮಕಾತಿಯಲ್ಲಿ ಸಂವಿಧಾನಿಕ ಮೀಸಲಾತಿ –ಕೇರಳ ಸರಕಾರಕ್ಕೆ ಡಿಎಸ್‌ಎಂಎಂ ಅಭಿನಂದನೆ

ರಾಷ್ಟ್ರೀಯ ಮಟ್ಟದಲ್ಲಿ ಈ ಪ್ರಶ್ನೆಯನ್ನು ಎತ್ತಿಕೊಳ್ಳುವ ಆಶಯ

ಕೇರಳದಲ್ಲಿ ತಿರುವಾಂಕೂರ್ ದೇವಸ್ಥಾನ ಮಂಡಳಿ ಆರು ದಲಿತರೂ ಸೇರಿದಂತೆ 36 ಬ್ರಾಹ್ಮಣೇತರರನ್ನು ತನ್ನ ವ್ಯಾಪ್ತಿಗೆ ಬರುವ ದೇವಸ್ಥಾನಗಳಿಗೆ ಅರ್ಚಕರುಗಳಾಗಿ ನೇಮಕ ಮಾಡಿದೆ. ಕೇರಳದಲ್ಲಿ ಮಾತ್ರವಲ್ಲ ದೇಶದಲ್ಲೇ ಮೊತ್ತಮೊದಲ ಬಾರಿಗೆ ಇಂತಹ ನೇಮಕ ನಡೆದಿದೆ. ಈ ಮೂಲಕ ಇದುವರೆಗೆ ಅರ್ಚಕ ಸ್ಥಾನವನ್ನು ಬ್ರಾಹ್ಮಣ ಜಾತಿಗೇ ಮೀಸಲಿಟ್ಟಿದ್ದ ಸಂಪ್ರದಾಯವನ್ನು ಬದಲಿಸಿ ಸಂವಿಧಾನ ವಿಧಿಸಿರುವಂತೆ ದಲಿತರೂ ಸೇರಿದಂತೆ ಎಲ್ಲ ಜಾತಿಗಳವರಿಗೆ ಇದನ್ನು ತೆರೆಯಲಾಗಿದೆ.

ಇದೊಂದು ಹೊಸ ಹಾದಿಯನ್ನು ತೆರೆದಿರುವ, ಇಡೀ ದೇಶಕ್ಕೆ ಮಾದರಿ ಹಾಕಿಕೊಟ್ಟಿರುವ ಕ್ರಮ ಎಂದು ದಲಿತ ಶೋಷಣ ಮುಕ್ತಿ ಮಂಚ್(ಡಿಎಸ್‌ಎಂಎಂ) ಕೇರಳ ಎಲ್‌ಡಿಎಫ್ ಸರಕಾರ ಮತ್ತು ಕೇರಳದ ಮುಖ್ಯಮಂತ್ರಿಗಳನ್ನು ಅಭಿನಂದಿಸಿದೆ.

ದೇಶದ ಬೇರೆಲ್ಲೂ ಜಾತಿ ಪದ್ಧತಿಯನ್ನು ನಿರ್ಮೂಲ ಮಾಡುವ ಮತ್ತು ದಲಿತರು ಎದುರಿಸುವ ಪಕ್ಷಪಾತವನ್ನು ಕಡಿಮೆ ಮಾಡುವ ಇಂತಹ ಒಂದು ತೀವ್ರಗಾಮೀ ಕ್ರಮವನ್ನು ಕೈಗೊಂಡಿಲ್ಲ. ಇದು ಖಂಡಿತವಾಗಿಯೂ ದೇಶದ ಸಮಸ್ತ ಪ್ರಜಾಪ್ರಭುತ್ವವಾದಿ ವಿಭಾಗಗಳಿಗೆ ಮತ್ತು ಜಾತಿ ತಾರತಮ್ಯದ ವಿರುದ್ಧ ಹೋರಾಡುತ್ತಿರುವ ಆಂದೋಲನಗಳಿಗೆ ಸ್ಫೂರ್ತಿ ತುಂಬಿದೆ ಎಂದಿರುವ ಡಿಎಸ್‌ಎಂಎಂ **ತಮ್ಮ ಸಂಘಟನೆ ಇದರಿಂದ ಸ್ಫೂರ್ತಿ ಪಡೆದು ಇತರ ಹಿಂದುಳಿದ ಜಾತಿಗಳು ಮತ್ತು ದಲಿತ ವಿಭಾಗಗಳಿಂದ ಅರ್ಚಕರುಗಳ ನೇಮಕದ ಪ್ರಶ್ನೆಯನ್ನು ರಾಷ್ಟ್ರೀಯ ಮಟ್ಟದಲ್ಲಿ ಎತ್ತಿಕೊಳ್ಳುತ್ತದೆ ಎಂದು ಹೇಳಿದೆ.**

1949ರಲ್ಲಿ ಸ್ಥಾಪನೆಗೊಂಡ ತಿರುವಾಂಕೂರು ದೇವಸ್ಥಾನ ಮಂಡಳಿ ಮಾಡುವ ನೇಮಕಾತಿಗಳಲ್ಲಿ ಮೀಸಲಾತಿಯನ್ನು ಜಾರಿಗೆ ತರಬೇಕೆಂದು ಬಹಳ ವರ್ಷಗಳಿಂದ ಆಗ್ರಹಗಳಿದ್ದವು. ಆದರೆ ಅದಕ್ಕೆ ಕೆಲವು ವಿಭಾಗಗಳಿಂದ ಬಲವಾದ ವಿರೋಧ ವ್ಯಕ್ತವಾಗಿತ್ತು. ಆದರೆ ನಾವೀಗ ಅದನು ಈಡೇರಿಸಿದ್ದೇವೆ ಎಂದು ದೇವಸ್ಥಾನ ಮಂಡಳಿಯ ಅಧ್ಯಕ್ಷ ರಾಜಗೋಪಾಲನ್ ನಾಯರ್ ಹೇಳಿದ್ದಾರೆ.

ಶಬರಿಮಲೈನ ಅಯ್ಯಪ್ಪ ದೇವಸ್ಥಾನವೂ ಈ ದೇವಸ್ಥಾನ ಮಂಡಳಿಯ ಅಡಿಯಲ್ಲಿ ಬರುತ್ತಿದ್ದರೂ ಅಲ್ಲಿ ಈಗಿರುವ ನಿಯಮಾವಳಿಗಳ ಪ್ರಕಾರ ಬ್ರಾಹ್ಮಣರು ಮಾತ್ರವೇ ಅರ್ಚಕರಾಗಲು ಸಾಧ್ಯ. ಇಲ್ಲಿಯೂ ದಲಿತರನ್ನು ನೇಮಿಸಬೇಕೆಂಬ ಅರ್ಜಿ ನ್ಯಾಯಾಲಯದಲ್ಲಿ ಇದ್ದು ನ್ಯಾಯಾಲಯದ ತೀರ್ಪಿನಂತೆ ನಡೆಯುವುದಾಗಿ ದೇವಸ್ಥಾನ ಮಂಡಳಿ ವಕ್ತಾರರು ಹೇಳಿದ್ದಾರೆ.

ಕೇರಳದಲ್ಲಿ ಸ್ವಾತಂತ್ರ್ಯ ಆಂದೋಲನದ ಭಾಗವಾಗಿ ಎಲ್ಲ ಕೀಳಜಾತಿಗಳವರಿಗೆ ದೇವಸ್ಥಾನ ಪ್ರವೇಶ ನಿಷೇಧದ ವಿರುದ್ಧ ಆಂದೋಲನವೂ ನಡೆದ ಪರಿಣಾಮವಾಗಿ 1936ರಲ್ಲಿ ಎಲ್ಲ ಹಿಂದುಗಳಿಗೆ ಎಲ್ಲ ದೇವಸ್ಥಾನಗಳನ್ನು ತೆರೆಯುವ ಕಾನೂನು ತರಲಾಯಿತು. ಆದರೆ ಅರ್ಚಕರ ಸ್ಥಾನ ಮಾತ್ರ ಬ್ರಾಹ್ಮಣರಿಗೇ ಮೀಸಲಾಗಿತ್ತು.

"ಭೇಷ್! ತಿರುವಾಂಕೂರು ದೇವಸ್ಥಾನ ಮಂಡಳಿ, ಕೇರಳ ಮುಖ್ಯಮಂತ್ರಿ ಶ್ರೀ ಪಿಣರಾಯಿ ವಿಜಯನ್‌ರರಿಗೆ ನಮನ.. ಪೆರಿಯಾರ್ ಕನಸು ಈಡೇರಿದೆ" ಎಂದು ಪ್ರಖ್ಯಾತ ಚಿತ್ರನಟ ಕಮಲ ಹಸನ್ ಫೇಸ್‌ಬುಕ್‌ನಲ್ಲಿ ಹೇಳಿದ್ದಾರೆ, ಡಿಎಂಕೆ ಮುಖಂಡ ಎಂ ಕೆ ಸ್ಟಾಲಿನ್ ಕೂಡ ಕೇರಳ ಮುಖ್ಯಮಂತ್ರಿಗಳನ್ನು ಇದಕ್ಕಾಗಿ ಅಭಿನಂದಿಸಿದ್ದಾರೆ.

ವಾರಾಣಸಿ ಕ್ಯಾಂಪಸ್ ಹಿಂಸಾಚಾರಕ್ಕೆ ಉಪಕುಲಪತಿಗಳು ಹೊಣೆ–ಇನ್ನೊಂದು ತನಿಖಾ ಸಮಿತಿಯ ಅಭಿಪ್ರಾಯ

ವಾರಾಣಸಿಯಲ್ಲಿರುವ ಕಾಶಿ ಹಿಂದೂ ವಿಶ್ವವಿದ್ಯಾಲಯ(ಬಿಹೆಚ್‌ಯು) ಕ್ಯಾಂಪಸ್‌ನಲ್ಲಿ ಹಿಂಸಾಚಾರಕ್ಕೆ ಅದರ ಉಪಕುಲಪತಿಗಳು ಕಾರಣ ಎಂದು ರಾಷ್ಟ್ರೀಯ ಮಹಿಳಾ ಆಯೋಗಕ್ಕೆ ಕಂಡು ಬಂದಿರುವುದಾಗಿ ವರದಿಯಾಗಿದೆ.

ವಿಶ್ವವಿದ್ಯಾಲಯ ಆಡಳಿತ ಲೈಂಗಿಕ ಹಗರಣದ ದೂರನ್ನು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ, ಉಪಕುಲಪತಿಗಳಾದ ಗಿರೀಶ್ ಚಂದ್ರ ತ್ರಿಪಾಠಿ ಪ್ರತಿಭಟನಾಕಾರರೊಂದಿಗೆ ಮಾತಾಡಲಿಲ್ಲ, ಮಾತಾಡಿದ್ದರೆ ಪರಿಸ್ತಿತಿ ತಿಳಿಯಾಗುತ್ತಿತ್ತು, ಬದಲಿಗೆ ಪುರುಷ ಪೋಲಿಸರು ಲಾಠೀ ಪ್ರಹಾರ ಮಾಡಿದರು ಎಂದು ಮೂವರು ಸದಸ್ಯರಿದ್ದ ಆಯೋಗದ ಸಮಿತಿ ಅಭಿಪ್ರಾಯ ಪಟ್ಟಿದೆ.

ಸಮಿತಿಯ ಸದಸ್ಯರೊಬ್ಬರು ಉಪಕುಲಪತಿಗಳಿಗೆ ಫೋನ್ ಕರೆ ಮಾಡಿದಾಗ ಅವರು ಉತ್ತರಿಸಲಿಲ್ಲ ಎಂದು ತಿಳಿಸಿದ್ದಾರೆ.

ಉತ್ತರಪ್ರದೇಶ ಸರಕಾರ ನೇಮಿಸಿದ್ದ ಸಮಿತಿ ಕೂಡ ವಿವಿ ಆಡಳಿತವನ್ನು ದೂಷಿಸಿದ್ದರೂ ರಾಜ್ಯದ ಮುಖ್ಯಮಂತ್ರಿಗಳಾಗಲೀ, ಕೇಂದ್ರದಲ್ಲಿಮಾನವ ಸಂಪನ್ಮೂಲ ಇಲಾಖೆಯ ಮಂತ್ರಿಗಳಾಗಲೀ, ಸ್ವತಃ ಪ್ರಧಾನ ಮಂತ್ರಿಗಳೂ ಈ ಬಗ್ಗೆ ಚಕಾರವೆತ್ತಿಲ್ಲ.



ತನ್ನನ್ನು ರಜಾ ಮೇಲೆ ಹೋಗಲು ಹೇಳಿದರೆ ರಾಜೀನಾಮೆ ನೀಡುವುದಾಗಿ ಹೇಳಿದ ಉಪಕುಲಪತಿಗಳು ಈಗ ದೀರ್ಘರಜೆಯಲ್ಲಿ ಹೋಗಿದ್ದಾರೆ ಎನ್ನಲಾಗಿದೆ. ಅವರ ಕಾರ್ಯಕಾಲ ಸದ್ಯಕ್ಕೆ ಮುಗಿಯಲಿರುವುದರಿಂದ ಬೇರೆ ಹೆಸರುಗಳನ್ನು ಪರಿಶೀಲಿಸಲಾಗುತ್ತಿದೆ ಎಂದಷ್ಟೇ ಹೇಳಲಾಗುತ್ತಿದೆ.

ಈ ನಡುವೆ ಅಕ್ಟೋಬರ್ 5ರಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರೂ, ಅಖಿಲ ಭಾರತ ಜನವಾದಿ ಮಹಿಳಾ ಸಂಘದ ಹಿರಿಯ ಮುಖಂಡರೂ ಆಗಿರುವ ಸುಭಾಷಿಣಿ ಅಲಿ ಮತ್ತು ಅದರ ಉತ್ತರಪ್ರದೇಶ ಘಟಕದ ಅಧ್ಯಕ್ಷರಾಗಿರುವ ಮಧು ಗರ್ಗ್ ಕಾಶಿ ವಿಶ್ವವಿದ್ಯಾಲಯದ ಹಾಸ್ಟೆಲ್‌ಗೆ ಭೇಟಿ ನೀಡಿ ಹೋರಾಟಕ್ಕಿಳಿದ ವಿದ್ಯಾರ್ಥಿನಿಯರನ್ನು ಭೇಟಿ ಮಾಡಿದರು. ಪೋಲೀಸ್ ಹಿಂಸಾಚಾರದಿಂದ ಅವರನ್ನು ರಕ್ಷಿಸುವ ಪ್ರಯತ್ನದಲ್ಲಿ ಸ್ವತಃ ತಲೆ ಮತ್ತು ಕೈಮೇಲೆ ಲಾಟಿಯೇಟುಗಳನ್ನು ಅನುಭವಿಸಿದ ಹಾಸ್ಟೆಲ್‌ನ ವಾರ್ಡನ್ ಪ್ರೊ. ಪ್ರತಿಮಾ ಗೊಂಡ್‌ರವರನ್ನೂ ಅವರು ಭೇಟಿ ಮಾಡಿದರು.

ಕಮ್ಯುನಿಸ್ಟರೆಂದರೆ ಬಿಜೆಪಿಗೆ ಏಕಿಷ್ಟು ಭಯ?

ಸಂಪಾದಕೀಯ

ಕಳೆದ ಕೆಲವು ದಿನಗಳಿಂದ ಕೇರಳದಿಂದ ಆರಂಭವಾಗಿ ದೇಶದಾದ್ಯಂತ "ಜನ ರಕ್ಷಾ" ಹೆಸರಲ್ಲಿ ಬಿಜೆಪಿ, ಸಿಪಿಐ(ಎಂ) ಕಚೇರಿಗಳ ಮೇಲೆ ಯಾತ್ರೆಗಳನ್ನು ದಾಳಿಗಳನ್ನು ಮುತ್ತಿಗೆಗಳನ್ನು ಸಂಘಟಿಸುತ್ತಿರುವುದು ನೋಡಿದರೆ ಆಶ್ಚರ್ಯ ಆಗುತ್ತದೆ. ಕಮ್ಯುನಿಸ್ಟರ ಬಗ್ಗೆ ಏಕಿಷ್ಟು ಭಯ? ಒಂದು ಕಡೆ ಜನ ಕಮ್ಯೂನಿಸ್ಟರನ್ನು ಭಾರತಾದ್ಯಂತ ಮತ್ತು ವಿಶ್ವಾದ್ಯಂತ ತಿರಸ್ಕರಿಸಿದ್ದಾರೆ, ಅವರು ಎಲ್ಲಿದ್ದಾರೆ? ಮಾರ್ಕ್ಸ್ ವಾದ ಅಪ್ರಸ್ತುತವಾಗಿದೆ. ಎಂಬ ಮಾತುಗಳು ಬಿಜೆಪಿಯ-ಸಂಘ ಪರಿವಾರದ ರಾಷ್ಟ್ರೀಯ ನಾಯಕರ ಬಾಯಿಂದ ಪದೇ ಪದೇ ಉದುರುತ್ತಿರುತ್ತವೆ. ಇನ್ನೊಂದು ಕಡೆ ಕೇರಳದುದ್ದಕ್ಕೂ "ಜನ ರಕ್ಷಾ" ಯಾತ್ರಾ, ದೆಹಲಿಯ ಎಕೆಜಿ ಭವನದ ಮುಂದೆ ಪ್ರತಿ ದಿನ ಪ್ರತಿಭಟನೆ ಮಾಡುವುದಲ್ಲದೆ ಆಂಧ್ರ ಪ್ರದೇಶ, ಆಸ್ಸಾಂ, ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳಲ್ಲಿ ಸಿಪಿಐ(ಎಂ) ಕಚೇರಿ ಮೇಲೆ ದಾಳಿ ಮಾಡಲು ಮುತ್ತಿಗೆ ಹಾಕಲು ಪ್ರಯತ್ನಿಸಿದ್ದಾರೆ. ಪೇಯ್ಡ್ ಟಿವಿ ಚಾನೆಲುಗಳ ಮೂಲಕ "ಕೇರಳದಲ್ಲಿ ಕಮ್ಯುನಿಸ್ಟರು ಹಿಂದೂಗಳ ಕೊಲೆ ಮಾಡುತ್ತಿದ್ದಾರೆ" ಎಂದು ಗುಲ್ಲೆಬ್ಬಿಸಲು ಪ್ರಯತ್ನಿಸಿದ್ದಾರೆ. ಸಿಪಿಐ(ಎಂ) ನಾಯಕರನ್ನು ಅಲ್ಲಿಗೆ ಹೋಗಲು ಬಿಡುವುದಿಲ್ಲ. ಇಲ್ಲಿಗೆ ಬರಲು ಬಿಡುವುದಿಲ್ಲ. ಭಾಷಣ ಮಾಡಲು ಬಿಡುವುದಿಲ್ಲ. ಕೆಂಬಾವುಟವನ್ನು ತುಳಿಯುವ, ಸುಡುವ ಕಡು ದ್ವೇಷ ನೀಚತನ ತೋರಿದ್ದಾರೆ. ಏಕೆ?

ಕರ್ನಾಟಕದಲ್ಲಿಯೂ ಬಿಜೆಪಿ ಅಕ್ಟೋಬರ್ 8 ರಂದು ಪಾದಯಾತ್ರೆ ನಡೆಸಿ ಸಿಪಿಐ(ಎಂ) ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ ಕಚೇರಿ ಇರುವ ಬಸವನಗುಡಿಯಲ್ಲಿರುವ "ಜ್ಯೋತಿ ಬಸು ಭವನ"ಕ್ಕೆ ಮುತ್ತಿಗೆ ಹಾಕುವುದಾಗಿ ಘೋಷಿಸಿತ್ತು. ಅದಕ್ಕಾಗಿ ಅಕ್ಟೋಬರ್ 9ರಂದು 'ಜ್ಯೋತಿಬಸು ಭವನ'ದತ್ತ ಬಿಜೆಪಿ ಮಾಜಿ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ, ಸಂಸದೆ ಶೋಭಾ ಕರಂದ್ಲಾಜೆ, ಮಾಜಿ ಉಪಮುಖ್ಯಮಂತ್ರಿ ಆರ್. ಅಶೋಕ್ ನೇತೃತ್ವದಲ್ಲಿ ಬಿಜೆಪಿ ಕಾರ್ಯಕರ್ತರ ಪಡೆ ಲಾಲ್ ಬಾಗ್ ವೆಸ್ಟ್ ಗೇಟ್ ನಿಂದ ಹೊರಟಿತ್ತು. ಪೊಲೀಸರು ಈ ಯಾತ್ರೆಯನ್ನು ತಡೆದು ಮುಖಂಡರನ್ನು ವಶಕ್ಕೆ ಪಡೆದಿದ್ದು, ಬಿಜೆಪಿಯ ಮುತ್ತಿಗೆ ಯೋಜನೆ ವಿಫಲಗೊಂಡಿದೆ.

ಸಂಸತ್ತಿನಲ್ಲಿ ಸಿಪಿಐ(ಎಂ) ಸಂಸದರು ಕೇವಲ 12. ಎರಡು ರಾಜ್ಯಗಳಲ್ಲಿಯಷ್ಟೇ ಸಿಪಿಐ(ಎಂ) ನಾಯಕತ್ವದ ಸರ್ಕಾರ ಆಡಳಿತದಲ್ಲಿರುವುದು. ಇಷ್ಟಕ್ಕೇ ಬಿಜೆಪಿ ಯಾಕೆ ಹೆದರುತ್ತಿದೆ? ಯಾವಾಗಲೂ ವಿಧಾನಸಭಾ/ಪಾರ್ಲಿಮೆಂಟರಿ ಸೀಟುಗಳ ಲೆಕ್ಕಾಚಾರದಲ್ಲಿ ಮುಳುಗಿರುವ ಬಿಜೆಪಿಗೆ ಚುನಾವಣಾ ರಾಜಕಾರಣದಲ್ಲಿ ಕರ್ನಾಟಕ ಸೇರಿದಂತೆ ಹಲವು ರಾಜ್ಯಗಳಲ್ಲಿ ಸಿಪಿಐ(ಎಂ) ಅಪಾಯಕಾರಿಯೇನಲ್ಲ. ಆದರೂ ಯಾಕೆ ಈ ಭಯ ? ಬಿಜೆಪಿಯ ಈ ಭಯ ಸಿಪಿಐ(ಎಂ) ಮತ್ತು ಅದರ ಬೆಂಬಲಿಗರ ಸೃಷ್ಟಿ ಏನಲ್ಲ. ಕೇಂದ್ರ ಹಣಕಾಸು ಮಂತ್ರಿ ಮತ್ತು ಹಿರಿಯ ಬಿಜೆಪಿ ನಾಯಕ ಅರುಣ್ ಜೇಟ್ಲಿ ರಾಜ್ಯ ಸಭೆಯಲ್ಲೇ ಈ ಮಾತನ್ನು ಹೇಳಿದ್ದಾರೆ. "ನಾವು ಕಾಂಗ್ರೆಸ್ಸಿಗಾಗಲೀ ಪ್ರಾದೇಶಿಕ ಪಕ್ಷಗಳಿಗಾಗಲೀ ಹೆದರೋದಿಲ್ಲ. ಸಿಪಿಐ(ಎಂ) ನಮಗೆ ಸಮಸ್ಯೆ ಉಂಟುಮಾಡಬಲ್ಲ ಪಕ್ಷ. ಅದರ ಕುರಿತು ನಮಗೆ ಆತಂಕವಿದೆ" ಎಂದಿದ್ದಾರೆ.

ಹೆಚ್ಚು ಕಡಿಮೆ ಒಂದೇ ಸಮಯದಲ್ಲಿ – 1920ರ ದಶಕದಲ್ಲಿ – ಆರಂಭವಾದ ಕಮ್ಯುನಿಸ್ಟ್ ಮತ್ತು ಹಿಂದುತ್ವವಾದಿ ಸಂಘ ಪರಿವಾರದ ಚಳುವಳಿಗಳ ಸ್ವರೂಪದ ಬಗ್ಗೆ ಕಮ್ಯುನಿಸ್ಟರಿಗೆ ಚೆನ್ನಾಗಿ ಗೊತ್ತಿದೆಯೆಂದು ಸಂಘಿಗಳಿಗೆ ಗೊತ್ತಿದೆ. ಸ್ವಾತಂತ್ರ್ಯ ಚಳುವಳಿಯಲ್ಲಿ ನಗುನಗುತ್ತ ನೇಣಿಗೆ ಕೊರಳೊಡ್ಡಿದ ಕ್ರಾಂತಿಕಾರಿ ಹೋರಾಟಗಾರರ ಧಾರೆಯ ಭಾಗವಾಗಿದ್ದ ಭಗತ್ ಸಿಂಗ್ ಸಂಗಡಿಗರು, ಚಿತ್ತಗಾಂಗ್ ದಂಗೆ ನಡೆಸಿದ ಅನುಶೀಲನ ಸಮಿತಿ ಮುಂತಾದ ಕ್ರಾಂತಿಕಾರಿ ರಾಷ್ಟ್ರೀಯವಾದಿ ಗುಂಪುಗಳಿಂದ ಬಂದವರು ಸೇರಿ ಕಟ್ಟಿದ ಕಮ್ಯುನಿಸ್ಟ್ ಚಳುವಳಿಯ ವಾರಸುದಾರಿಕೆ ಸಿಪಿಐ(ಎಂ)ನದ್ದು. ಬ್ರಿಟಿಶರ ವಿರುದ್ಧ ಯಾವುದೇ ಚಟುವಟಿಕೆ ನಡೆಸುವುದಿಲ್ಲವೆಂದು ಮುಚ್ಚಳಿಕೆ ಬರೆದು ಕೊಟ್ಟು ಅಂಡಮಾನ್ ಜೈಲಿನಲ್ಲಿ ಹೊರ ಬಂದ ಹೇಡಿ ಸಾವರ್ಕರ್ ಮತ್ತು "ನಾನು ಸ್ವಾತಂತ್ರ್ಯ ಹೋರಾಟಗಾರನಲ್ಲ"ವೆಂದು ಬರೆದು ಕೊಟ್ಟ ಮಾಜಿ ಪ್ರಧಾನಿ ವಾಜಪೇಯಿ ಅವರ ವಾರಸುದಾರಿಕೆ ಹಿಂದುತ್ವ-ವಾದಿ ಸಂಘ ಪರಿವಾರದ್ದು. ಧ್ವಜ, ರಾಷ್ಟ್ರಗೀತೆ ಹೆಸರಲ್ಲಿ ಎಷ್ಟೇ ಸರ್ಕಸ್ ಮಾಡಿದರೂ ಅಳಿಸಲಾರದ ದೇಶದ್ರೋಹದ ಕಲೆಗಳು ತಮ್ಮದು. ಮತ್ತು ಅದನ್ನು ಕಮ್ಯುನಿಸ್ಟರಷ್ಟು ನಿರ್ಭೀಡೆಯಿಂದ ಬೇರೆ ಯಾರೂ ಬಯಲು ಮಾಡುವುದಿಲ್ಲವೆಂದು ಗೊತ್ತಿದೆ ಅವರಿಗೆ. ಅದಕ್ಕೆ ಅವರಿಗೆ ಕಮ್ಯುನಿಸ್ಟರು ಕಂಡರೆ ಅಷ್ಟು ಭಯ, ತಮ್ಮ ದೇಶಪ್ರೇಮ ಎಂದೂ ಬಯಲಾಗುತ್ತದೋ ಅಂತ.

ದೇಶದ ದುಡಿಯುವ ಜನರ ಐಕ್ಯತೆಯನ್ನು ಜಾತಿ-ಧರ್ಮ-ಭಾಷೆಗಳ ನ್ನು ಬಳಸಿ ವಿಚ್ಛಿದ್ರಗೊಳಿಸುವ ಸಂಘಿ ಹುನ್ನಾರಕ್ಕೆ ಪ್ರತಿರೋಧ ಒಡ್ಡಬಲ್ಲವರು, ಅದನ್ನು ಸೋಲಿಸಬಲ್ಲವರು ಕಮ್ಯುನಿಸ್ಟರು. ಜನ-ವಿರೋಧಿ ನವ-ಉದಾರವಾದಿ ನೀತಿಗಳನ್ನು ಜನತೆಯ ಮೇಲೆ ಹೇರಿ ಅದರ ವಿರುದ್ಧ ಆಕ್ರೋಶ ಹೆಚ್ಚಾದಾಗ ಅದರ ವಿರುದ್ಧ ಜನತೆಯನ್ನು ಅಣಿ ನೆರೆಸಬಲ್ಲವರು ಇದಕ್ಕಾಗಿ ಚುನಾವಣಾ ರಾಜಕಾರಣವನ್ನು ಮೀರಿ ಎಡ-ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಒಗ್ಗೂಡಿಸಬಲ್ಲವರು ಕಮ್ಯುನಿಸ್ಟರು ಅಂತ ಅವರಿಗೆ ಗೊತ್ತು. ಸೆಪ್ಟೆಂಬರ್ 18ರಂದು ನೂರಾರು ಜನ ಸಂಘಟನೆಗಳು ಸೇರಿ ಸ್ಥಾಪಿಸಿದ ಜನ ಏಕತಾ ಜನ ಅಧಿಕಾರ ಆಂದೋಲನ, ನವೆಂಬರ್ 9-11 ರಂದು ಬಿಜೆಪಿಯ ಬಿ.ಎಂ.ಎಸ್. ಬಿಟ್ಟು ಎಲ್ಲಾ ಕಾರ್ಮಿಕ ಸಂಘಟನೆಗಳು ಭಾಗವಹಿಸಲಿರುವ ಮಹಾ ಪಡಾವ್, ನವೆಂಬರ್ 20ರಂದು ನಡೆಯಲಿರುವ ಎಲ್ಲಾ ರೈತ ಸಂಘಟನೆಗಳ "ಕಿಸಾನ್ ಸಂಸತ್ ಚಲೋ" ಗಳು – ಇದು ಬರಿಯ ತಾರ್ಕಿಕ ಸಾಧ್ಯತೆ ಮಾತ್ರವಲ್ಲ. ನಿಜವಾಗಲಾರಂಭಿಸಿದೆ ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತಿದೆ. ವಿದ್ಯಾರ್ಥಿ-ಯುವಜನರು ಎಡದತ್ತ ವಾಲಲಾರಂಭಿಸಿದ್ದು, ಹಲವು ವಿ.ವಿ. ವಿದ್ಯಾರ್ಥಿ ಚುನಾವಣೆಗಳಲ್ಲಿ ಬಿಜೆಪಿಯ ವಿದ್ಯಾರ್ಥಿ ಸಂಘಟನೆ ಎಬಿವಿಪಿ ಯನ್ನು ಎಡ ವಿದ್ಯಾರ್ಥಿ ಸಂಘಟನೆಗಳು ಪರಾಭವಗೊಳಿಸಿವೆ. ಇಡೀ ಭಾರತದಲ್ಲಿ ಅಂತಿಮ ಹೋರಾಟ ನಡೆಯುವುದು ಕಮ್ಯುನಿಸ್ಟರಿಗೆ ಮತ್ತು ಸಂಘ ಪರಿವಾರದ ನಡುವೆ, ಸಿಪಿಐ(ಎಂ) ಮತ್ತು ಬಿಜೆಪಿ ನಡುವೆ. ಬಿಜೆಪಿಯ ಹಿಂದುತ್ವ ಸಿದ್ಧಾಂತಕ್ಕೂ ಸಿಪಿಐಎಂ ನ ಸಮಾಜವಾದಿ ಸಿದ್ಧಾಂತಕ್ಕೂ ನಡೆಯುವ ಹೋರಾಟ ಭಾರತದ ಅಂತಿಮ ಹೋರಾಟವಾಗಲಿದೆ. ಎಂಬುದು ಅವರಿಗೆ ಗೊತ್ತು. ಆದ್ದರಿಂದ ಅವರಿಗೆ ಕಮ್ಯುನಿಸ್ಟರ ಬಗ್ಗೆ ಭಯ.

ಇಷ್ಟು ಕಾಲ ಬಿಜೆಪಿ ತನ್ನ ರಾಜಕೀಯ ವಿರೋಧಿ ಕಾಂಗ್ರೆಸ್ಸನ್ನು ಗುರಿಯಾಗಿಸಿಕೊಂಡು ಬೀದಿಗೆ ಇಳಿಯುತ್ತಿತ್ತು. ಜೊತೆಗೆ ಹಿಂದುತ್ವ ಪ್ರತಿಪಾದಕ ಪಕ್ಷವಾಗಿದ್ದುಕೊಂಡು ಮುಸ್ಲಿಂ ವಿರೋಧಿಯಾಗಿ ತನ್ನ ಬೇಳೆ ಬೇಯಿಸಿಕೊಳ್ಳುತ್ತಿತ್ತು. ಅವೆರಡು ಕಾರ್ಯತಂತ್ರಗಳನ್ನೂ ಜನಸಾಮಾನ್ಯರು ಅರಿಯತೊಡಗಿದಮೇಲೆ ಸೈದ್ಧಾಂತಿಕ ಎದುರಾಳಿ ಕಮ್ಯುನಿಸ್ಟರ ಕಡೆಗೆ ಅವರ ಗಮನ ತಿರುಗಿದೆ. ಸ್ವತಃ ಹಿಂದಿನ ಏಕಾಧಿಕಾರದ ಕಾಲದ ಕಾಂಗ್ರೆಸಿನಂತೆ ಕಾಣುತ್ತಿರುವ ಬಿಜೆಪಿಯ "ಕಾಂಗ್ರೆಸ್-ಮುಕ್ತ" ಭಾರತದ ಘೋಷಣೆ ಜಾ-ರಿಯಾದರೂ ಆಗದಿದ್ದರೂ, ಕಮ್ಯುನಿಸ್ಟರು ಇರುವವರೆಗೆ ಅದು ನೆಮ್ಮದಿಯಿಂದ ಇರಲು ಸಾಧ್ಯವೆಂದು ಅದಕ್ಕೆ ತಿಳಿದಿದೆ.

ಕೇಂದ್ರದಲ್ಲಿ ಮತ್ತು ದೇಶದ ವಿವಿದ ರಾಜ್ಯಗಳಲ್ಲಿ ಆಡಳಿತ ವೈಫಲ್ಯದಿಂದ ಸೊರಗಿದ, ಹಣದ ಮತ್ತು ಅಧಿಕಾರದ ಮದದಿಂದ ಕೊಬ್ಬಿದ ಬಿಜೆಪಿ ಮತ್ತು ಸಂಘ ಪರಿವಾರಕ್ಕೆ ತಮ್ಮ ಸುಳ್ಳು ಆಶ್ವಾಸನೆಗಳ ಭ್ರಷ್ಟ ಆಡಳಿತ ಮುಚ್ಚಿಕೊಳ್ಳಲು, ಜನತೆಯನ್ನು ದಾರಿ ತಪ್ಪಿಸಬೇಕಾಗಿದೆ. ಇಂತಹ ಪ್ರತಿಕೂಲ ಸನ್ನಿವೇಶದಲ್ಲೂ ಎರಡು ಸಿಪಿಐ(ಎಂ) ನಾಯಕತ್ವದ ಸರಕಾರಗಳು ಜನ-ಪರ ಪರ್ಯಾಯ ನೀತಿಗಳನ್ನು ಜಾರಿ ಮಾಡುತ್ತಾ ಅವರಿಗೆ ಕಂಟಕದಂತೆ ಕಾಣುತ್ತಿದೆ. ಕೇರಳ ಸರಕಾರವನ್ನು ಏನ ಕೇನ ಪ್ರಕಾರೇಣ ವಜಾ ಮಾಡಬೇಕಾಗಿದೆ. ತ್ರಿಪುರಾದಲ್ಲೂ ಸಿಪಿಐ(ಎಂ) ನಾಯಕತ್ವದ ಸರಕಾರ ಪುನಃ ಆಯ್ಕೆ ಆಗದಂತೆ ಅಭದ್ರತೆಯ ಸನ್ನಿವೇಶ ಸೃಷ್ಟಿಸದೆ ಅದಕ್ಕೆ ಬೇರೆ ದಾರಿಯಿಲ್ಲ.

ಇದನ್ನು ಸಾಧಿಸಲು ಬಿಜೆಪಿ ತನ್ನ ಪರಿವಾರದ ಮೂಲ ಪುರುಷರ ದುರ್ಭೋಧನೆಯನ್ನು ನೆನಪು ಮಾಡಿಕೊಂಡಿದೆ. ಸಂಘ ಪರಿವಾರದ ಮೂಲಸ್ಫೂರ್ತಿಗಳಾಗಿದ್ದ ಹಿಟ್ಲರ್ ಅಧಿಕಾರಕ್ಕೆ ಬರುತ್ತಿದ್ದಂತೆ ಟ್ರೇಡ್ ಯೂನಿಯನ್ ಮತ್ತು ಕಮ್ಯುನಿಸ್ಟ್ ಪಕ್ಷದ ಆಫೀಸುಗಳ ಮೇಲೆ ದಾಳಿ ಮಾಡಿ ಹಲವು ಕಡೆ ಅವನ್ನು ಸುಟ್ಟು ಹಾಕಿದ್ದರು. ಲೂಟಿ ಹೊಡೆದು ನಾಶ ಮಾಡಿದ್ದರು. ಜರ್ಮನಿಯ ಪಾರ್ಲಿಮೆಂಟ್ ಕಟ್ಟಡ "ರೇಸ್ಟಾಗ್" ನ್ನು ತಾವೇ ಸುಟ್ಟು ಹಾಕಿ ಅದು ಕಮ್ಯುನಿಸ್ಟರ ದುಷ್ಕೃತ್ಯವೆಂದು ಅವರ ಮೇಲೆ ದೇಶದ್ರೋಹದ ಕೇಸು ದಾಖಲಿಸಿ ಬಂಧಿಸಿದ್ದರು. ಕಾರ್ಮಿಕರ ಮುಷ್ಕರ ಹಕ್ಕು ರದ್ದು ಪಡಿಸಿ, ವೇತನ ಸ್ತಂಭನ ಹೇರಿದ್ದರು. ದೇಶಕ್ಕೆ ಅಪಾಯದ ಹೆಸರಲ್ಲಿ ತುರ್ತು ರಕ್ಷಣಾ ಸಾಮಗ್ರಿಗಳ ಉತ್ಪಾದನೆಗೆ ಕಾರ್ಮಿಕರ ದುಡಿತದ ಮೇಲಿದ್ದ 8 ಗಂಟೆ ಗರಿಷ್ಠ ದುಡಿಮೆ ಮುಂತಾದ ಕಾನೂನುಗಳನ್ನು ರದ್ದು ಮಾಡಿದ್ದರು. ಆ ಮೇಲೆ ದೇಶಪ್ರೇಮ ಯುದ್ಧ-ತಯಾರಿ ಯುದ್ಧ-ಸಮಯದ ಹೆಸರುಗಳಲ್ಲಿ ಸರಕಾರದ ನೀತಿಗಳನ್ನು ವಿರೋಧಿಸಿದವರನ್ನೆಲ್ಲಾ ದೇಶದ್ರೋಹಿಗಳು ಅಂತ ಬ್ರಾಂಡ್ ಮಾಡಿ ಜೈಲಿಗೆ ಹಾಕಲಾಯಿತು ಅಥವಾ ಬೀದಿಗಳಲ್ಲಿ ಗೂಂಡಾಗಳಿಂದ ಹೊಡೆದು ಸಾಯಿಸಲಾಯಿತು. ಮುಸೊಲಿನಿ ಸಹ ಇದೇ ವಿಧಾನ ಅನುಸರಿಸಿದ್ದರು. ಗುರು ಗೊಲ್ವಾಲಕರ್ ಅವರೂ ಮುಸ್ಲಿಮರು, ಕ್ರೈಸ್ತರು, ಕಮ್ಯುನಿಸ್ಟರು ದೇಶದ ಶತ್ರುಗಳು. ನಮ್ಮ ಮೊದಲ ಹೋರಾಟ ಅವರ ವಿರುದ್ಧ ಎಂದಿದ್ದರು. ಇದನ್ನೇ ಅಕ್ಷರಶಃ ಜಾರಿ ಮಾಡಲು ಈಗ ಹೊರಟಿದೆ ಬಿಜೆಪಿ-ಸಂಘ ಪರಿವಾರ.

ಆಡಳಿತ ವೈಫಲ್ಯದಿಂದ ಸೊರಗಿದ, ಹಣದ ಮತ್ತು ಅಧಿಕಾರದ ಮದದಿಂದ ಕೊಬ್ಬಿದ ಬಿಜೆಪಿ ಮತ್ತು ಸಂಘ ಪರಿವಾರಕ್ಕೆ ತಮ್ಮ ಸುಳ್ಳು ಆಶ್ವಾಸನೆಗಳ ಭ್ರಷ್ಟ ಆಡಳಿತ ಮುಚ್ಚಿಕೊಳ್ಳಲು, ಹಿಂಸೆಯ ಮಾರ್ಗವಲ್ಲದೇ ಬೇರೇನೂ ದಾರಿ ಇಲ್ಲ. ಅದಕ್ಕಾಗಿ ಕೇರಳದಲ್ಲಿ ಸರಕಾರ ಉರುಳಿಸಲು ಗಲಭೆಗಳನ್ನು ಸೃಷ್ಟಿಸಿ ಕಾನೂನು-ಸುವ್ಯವಸ್ಥೆ ಹದಗೆಟ್ಟಿದೆ ಎಂಬ ನೆಪ ಹುಡುಕಲು ಪ್ರಯತ್ನಿಸುತ್ತಿದೆ . ಅದೇ ತಂತ್ರವನ್ನು ಚುನಾವಣೆಗೆ ಹೋಗಲಿರುವ ತ್ರಿಪುರಾದಲ್ಲೂ ಬಳಸುತ್ತಾ ಪ್ರತ್ಯೇಕತಾವಾದಿ ಐ.ಪಿ.ಎಫ್.ಟಿ.ಗೆ ವ್ಯಾಪಕ ಹಿಂಸಾಚಾರಕ್ಕೆ ಕುಮ್ಮಕ್ಕು ಕೊಡಲು ಹೇಸಿಲ್ಲ. ಒಂದು ಕಡೆ ಕಮ್ಯುನಿಸ್ಟ್ ಕಾರ್ಯಕರ್ತರನ್ನು ಹಿಂಸಾಚಾರದಿಂದ ಬೆದರಿಸುವ, ಇನ್ನೊಂದು ಕಡೆ ಅವರನ್ನು ಪ್ರತಿ-ಹಿಂಸಾಚಾರವನ್ನು ಪ್ರಚೋದಿಸುವ ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಅದ್ಯಾವುದಕ್ಕೂ ಹೆದರದೆ, ಪ್ರಚೋದನೆಗೆ ಒಳಗಾಗದೆ ಸಿಪಿಐ(ಎಂ) ಬಿಜೆಪಿಯನ್ನು ಅದರ ಹಿಂಸಾಚಾರದ ಅಪಪ್ರಚಾರದ ಹಿಂದಿರುವ ಹುನ್ನಾರವನ್ನೂ ಬಯಲು ಮಾಡುತ್ತಾ ಅದರ ಭಯವನ್ನು ಇನ್ನಷ್ಟು ಹೆಚ್ಚಿಸಿದೆ.



ಕೃಪೆ: ಸತೀಶ್ ಆಚಾರ್ಯ

ಗಾಂಜಾ ವಿರುದ್ಧ ಧ್ವನಿ ಎತ್ತಿದ ಜುಬೈರ್ ಹತ್ಯೆ ಖಂಡಿಸಿ ಡಿವೈಎಫ್ಐ ಪ್ರತಿಭಟನೆ:



ಗಾಂಜಾ ವಿರುದ್ಧ ಧ್ವನಿ ಎತ್ತಿದ ಸಾಮಾಜಿಕ ಕಾರ್ಯಕರ್ತ ಉಳ್ಳಾಲದ ಜುಬೈರ್‌ನನ್ನು, ಗಾಂಜಾ ವ್ಯವಹಾರದ ಗುಂಪೊಂದು ಹತ್ಯೆ ನಡೆಸಿದ್ದು, ಸದ್ರಿ ಹತ್ಯೆಯನ್ನು ಗಾಂಜಾ ಪ್ರಕರಣವಾಗಿ ದಾಖಲಿಸಬೇಕೆಂದು ಆಗ್ರಹಿಸಿ ಡಿವೈಎಫ್ಐ ನೇತೃತ್ವದಲ್ಲಿ ಅಕ್ಟೋಬರ್ 6 ರಂದು ಉಳ್ಳಾಲದ ಮುಕ್ಕಚೇರಿಯಲ್ಲಿ ಪ್ರತಿಭಟನೆ ನಡೆಸಲಾಯಿತು.

ಈ ಪ್ರಕರಣದ ಸಂದರ್ಭದಲ್ಲಿ ಉಳ್ಳಾಲ ಶಾಸಕರಾದ ಸಚಿವ ಯು.ಟಿ.ಖಾದರ್ ಅವರು ಮೃತನ ಮನೆಗೆ ಭೇಟಿ ನೀಡಲು ಮುಂದಾದಾಗ ಜನರೇ ಅವರನ್ನು ಹಿಂದಕ್ಕಟ್ಟಿದ ಪ್ರಕರಣವೂ ನಡೆದಿದೆ. ಗಾಂಜಾ ವ್ಯವಹಾರಿಗರ ವಿರುದ್ಧ ಸಚಿವ ಖಾದರ್ ಅವರು ಕಠಿಣ ಕ್ರಮ ಕೈಗೊಳ್ಳಲು ಮುಂದಾಗುತ್ತಿಲ್ಲ ಅವರನ್ನು ವಿಧಾನಸಭೆಯಿಂದಲೇ ಹೊರಕಳುಹಿಸಿ ಎಂಬುದಾಗಿ ಡಿವೈಎಫ್ಐ ಪ್ರತಿಭಟನಾಕಾರರು ಆಗ್ರಹಿಸಿದರು. ಈ ಹತ್ಯಾ ಪ್ರಕಟರಣವು ಮಾದಕ ದ್ರವ್ಯ ವ್ಯವಹಾರದ ಗುಂಪೊಂದರ ಭಾಗವಾಗಿದ್ದು, 18 ಬಾರಿ ಜೈಲುಪಾಲಾದವನ ನೇತೃತ್ವದಲ್ಲಿಯೇ ನಡೆದಿದ್ದು, ಅದು ಸಚಿವರ ಕ್ಷೇತ್ರದಲ್ಲಿಯೇ ನಡೆದಿರುವುದು ಪೋಲೀಸ್ ಇಲಾಖೆಯ ವೈಫಲ್ಯವನ್ನು ತೋರುತ್ತಿದೆ–ಯೆಂದು ಪ್ರತಿಭಟನಾಕಾರರು ಟೀಕಿಸಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಡಿವೈಎಫ್ಐ ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್ ಮಾತನಾಡಿದರು. ಸಿಪಿಐ(ಎಂ) ಮುಖಂಡರಾದ ಕೃಷ್ಣಪ್ಪ ಸಾಲಿಯಾನ್, ಡಿವೈಎಫ್ಐ ಉಳ್ಳಾಲ ವಲಯ ಅಧ್ಯಕ್ಷ ಜೀವನ್‌ರಾಜ್ ಕುತ್ತಾರ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಬಳಿಕ ಸಿಪಿಐ(ಎಂ) ಮತ್ತು ಡಿವೈಎಫ್ಐ ನಿಯೋಗ ಜುಬೈರ್ ಮನೆಗೆ ಭೇಟಿ ನೀಡಿ ಸಾಂತ್ವನ ಹೇಳಿತು.



ಬೈಂದೂರು : ಸಿಪಿಐ(ಎಂ) ರಾಜಕೀಯ ಸಮಾವೇಶ

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಬೈಂದೂರು ವಲಯ ಸಮಿತಿ ನೇತೃತ್ವದಲ್ಲಿ, ಬೈಂದೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಕಾರ್ಮಿಕ ಸಂಘಟನೆಗಳ ಸದಸ್ಯರ ಬೃಹತ್ ರಾಜಕೀಯ ಸಮಾವೇಶವು ಅಕ್ಟೋಬರ್ 8ರಂದು ಯಶಸ್ವಿಯಾಗಿ ಜರಗಿತು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ನಿತ್ಯಾನಂದ ಸ್ವಾಮಿ ರಾಜಕೀಯ ಸಮಾವೇಶ ಉದ್ಘಾಟಿಸಿ ಮಾತನಾಡುತ್ತ 2014 ರ ಚುನಾವಣಾ ಪ್ರಚಾರದ ಅಬ್ಬರದ ಮತ್ತು ಬಣ್ಣ ಬಣ್ಣದ ಆಶ್ವಾಸನೆಯೊಂದಿಗೆ ಬಿಜೆಪಿ ಅಧಿಕಾರಕ್ಕೆ ಬಂತು. ದೇಶದ ಯುವಜನಾಂಗ ನಿರುದ್ಯೋಗ ಹೋಗಲಾಡುತ್ತದೆ ಎಂಬ ಭ್ರಮೆಯಲ್ಲಿ ಮತ ಹಾಕಿದರು. ನಿರುದ್ಯೋಗ ತಾಂಡವಾಡುತ್ತಿದೆ, ವರ್ಷಕ್ಕೆ 2 ಕೋಟಿಯಂತೆ ಮುಂದಿನ ಚುನಾವಣಾ ವೇಳೆಗೆ 10 ಕೋಟಿ ಉದ್ಯೋಗಗಳ ನಿರ್ಮಾಣಕ್ಕೆ ಆದ್ಯತೆ ನೀಡಲಾಗುವುದು, ಮೋದಿಯವರ ಈ ಭರವಸೆ ಕೇವಲ ಚುನಾವಣಾ ಪೊಳ್ಳು ಮಾತು ಎಂಬುವುದು 3 ವರ್ಷ ಕಳೆಯುವ ವೇಳೆಗೆ ದೃಢಪಟ್ಟಿದೆ ಎಂದು ನಿತ್ಯಾನಂದ ಸ್ವಾಮಿ ಆರೋಪ ಮಾಡಿದರು.

8 ಕೃಷಿಯೇತರ ಉತ್ಪಾದನಾ ವಲಯಗಳಲ್ಲಿ ಮೋದಿ ಸರ್ಕಾರದ 2ನೇ ವರ್ಷದ ಅಚಿತ್ಯದಲ್ಲಿ ಇದ್ದದ್ದು, 2.5 ಕೋಟಿ ಉದ್ಯೋಗಗಳಷ್ಟೆ, ಈ ಒಂದು ವರ್ಷದಲ್ಲಿ ಅದಕ್ಕೆ ಸೇರಿಸಿದ ಕೇವಲ 2 ಲಕ್ಷ ಮೂವತ್ತು ಸಾವಿರ ಮಾತ್ರ ಅದರಲ್ಲಿ 1 ಲಕ್ಷ 10 ಸಾವಿರದಷ್ಟು ಶಿಕ್ಷಣ ಮತ್ತು ಆರೋಗ್ಯ ಈ ಎರಡು ಕ್ಷೇತ್ರದಿಂದಲೇ ಎಂದು ನಿತ್ಯಾನಂದ ಸ್ವಾಮಿ ಕಳವಳ ವ್ಯಕ್ತಪಡಿಸಿದರು.

ಸಿಪಿಐ(ಎಂ) ಪಕ್ಷದ ಉಡುಪಿ ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ಸಮಾವೇಶವನ್ನು ಉದ್ದೇಶಿಸಿ ಮಾತನಾಡುತ್ತಾ ಶಿರೂರಿನ ವಿದ್ಯಾರ್ಥಿನಿ ರತ್ನಾ ಕೊಠಾರಿ ನಿಗೂಢ ಸಾವಿನ ತನಿಖೆಗೆ ಒತ್ತಾಯಿಸಿ ಹಾಗೂ ಸರ್ಕಾರದ ವತಿಯಿಂದ ಮೃತಳ ಕುಟುಂಬಕ್ಕೆ ಪರಿಹಾರ ವರ್ಷ ಕಳೆದರೂ ಪರಿಹಾರ ದೊರಕದ ಕಾರಣ ಬೀದಿಗಿಳಿದು ಹಣ ಬಿಡುಗಡೆ ಮಾಡಲು ಹೋರಾಟ ಮಾಡಿದ ಗೌರವ ಸಿಪಿಐ(ಎಂ) ಪಕ್ಷ–ಕ್ಕೆ ಸಲ್ಲುತ್ತದೆ ಎಂದು ಅವರು ಹೇಳಿದರು. ಈ ಹೋರಾಟದಲ್ಲಿ ಪಾಲ್ಗೊಂಡ ಬೈಂದೂರಿನ ಕಾರ್ಮಿಕ ಸಂಘಗಳ ಸದಸ್ಯರನ್ನು ಅವರು ಅಭಿನಂದಿಸಿದರು.

ಸಿಪಿಐ(ಎಂ) ಪಕ್ಷದ ಬೈಂದೂರು ವಲಯ ರಾಜಕೀಯ ಸಮ್ಮೇಳನದಲ್ಲಿ ಮುಖಂಡರಾದ ಕೆ. ಶಂಕರ, ಎಚ್. ನರಸಿಂಹ, ಸುರೇಶಕಲ್ಲಾಗರ, ರಾಜೀವ ಪಡುಕೋಣೆ, ನಾಗರತ್ನ ನಾಡ, ಸಂತೋಷ ಹೆಮ್ಮಾಡಿ, ಮಹಾಬಲ ವಡೇರ ಹೋಬಳಿ, ಯು. ದಾಸಭಂಡಾರಿ, ದಿನೇಶ ಮೊಗವೀರ, ಜಯಶ್ರೀ, ಉಪಸ್ಥಿತರಿದ್ದರು.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಜಿಲ್ಲಾ ಮುಖಂಡ ವೆಂಕಟೇಶ ಕೋಣಿ ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು. ಗಣೇಶ ತೊಂಡೆಮಕ್ಕಿ ವಂದಿಸಿದರು.

ವರದಿ : ವೆಂಕಟೇಶ ಕೋಣಿ



ಜೆಸಿಟಿಯು ಸಮಾವೇಶ





ಅಕ್ಟೋಬರ್ 10ರಂದು ಕೇಂದ್ರ ಕಾರ್ಮಿಕ ಸಂಘಗಳ ಜಂಟಿ ಸಮಿತಿ(JCTU) ನೇತೃತ್ವದಲ್ಲಿ ಮೋದಿ ನೇತೃತ್ವದ ಕೇಂದ್ರ ಸರಕಾರದ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ರಾಜ್ಯ ಸಮಾವೇಶ ಬೆಂಗಳೂರಿನ ಕೊಂಡಜ್ಜಿ ಬಸಪ್ಪ ಸ್ಕೌಟ್ ಮತ್ತು ಗೈಡ್ ಸಭಾಂಗಣದಲ್ಲಿ ನಡೆಯಿತು.



HMS-AITUC-CITU-AIUTUC-AICCTU-AITUCC–JAF ರಾಜ್ಯ ನಾಯಕರು ಇಂದಿನ ಸಮಾವೇಶದಲ್ಲಿ ಭಾಗವಹಿಸಿ ಮಾತನಾಡಿದರು ನವೆಂಬರ್ 9–11 ರಂದು ನವದೆಹಲಿಯಲ್ಲಿ 12 ಪ್ರಮುಖ ಬೇಡಿಕೆಗಳಿಗಾಗಿ ನಡೆಯುವ “ಮಹಾಧರಣಿ” ಯಶಸ್ವಿಗೆ ಸಮಾವೇಶದಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ಬಿಜೆಪಿ ರಥಯಾತ್ರೆ : ಜನದ್ರೋಹ ಮುಚ್ಚಿಕೊಳ್ಳುವ ಹವಣಿಕೆಗಳು

ಎಸ್.ವೈ. ಗುರುಶಾಂತ್

2018 ರಲ್ಲಿ ಮುಂಬರುವ ವಿಧಾನಸಭಾ ಚುನಾವಣೆಯ ಪೂರ್ವ ಸಿದ್ಧತೆಯ ಪೈಪೋಟಿ ಹಿಂದಿಗಿಂತ ಮೊದಲೇ ಆರಂಭವಾಗಿದೆ. ಶತಾಯ ಗತಾಯ ಕರ್ನಾಟಕ ರಾಜ್ಯದ ಅಧಿಕಾರ ಉಳಿಸಿಕೊಳ್ಳಬೇಕೆಂಬ ಬಿಜೆಪಿ. ಇರುವ ಅಧಿಕಾರ ಉಳಿಸಿಕೊಳ್ಳಬೇಕೆಂಬ ಕಾಂಗ್ರೆಸ್ ಪಕ್ಷಗಳ ನಡುವೆ ವಿವಿಧ ರೀತಿಯ ಸಮರಗಳು ನಡೆದಿವೆ. ಕಾಂಗ್ರೆಸ್ ಹಲವು 'ಜನಪ್ರಿಯ'ಗೊಳಿಸುವ ಯೋಜನೆ, ಕಾರ್ಯಕ್ರಮಗಳನ್ನು ಪ್ರಕಟಿಸುತ್ತಿದೆ. ಮತ್ತೊಂದೆಡೆ 'ಸಾಮಾಜಿಕ ನ್ಯಾಯ'ದ ಘೋಷಣೆಯಲ್ಲಿ ವಿವಿಧ ಜಾತಿ, ಸಮುದಾಯಗಳನ್ನು ಸೆಳೆಯುವ ಕಾರ್ಯಕ್ರಮಗಳು ಹಾಗೂ ತಂತ್ರಗಾರಿಕೆಯನ್ನು ಮಾಡುತ್ತಿದೆ. ಲಿಂಗಾಯತ ಪ್ರತ್ಯೇಕ ಧರ್ಮದ ವಿಷಯದಲ್ಲಿ ಅದರ ರಾಜಕೀಯ ಲಾಭವನ್ನು ಕಾಂಗ್ರೆಸ್ ಪಡೆಯಲಿದೆ ಎಂದೇ ಭಾವಿಸಿದ ಬಿಜೆಪಿ ದಿಗಿಲಾಗಿ ಪ್ರತಿತಂತ್ರಗಳನ್ನೂ ಹೆಣೆಯುತ್ತಿದೆ. ಕೇಂದ್ರದ ಅಧಿಕಾರದಿಂದ "ಧಾಳಿ'ಗಳನ್ನು ನಡೆಸುತ್ತಿದೆ. ಇತ್ತೀಚೆಗೆ ಬಿಜೆಪಿ ಅಧ್ಯಕ್ಷ ಅಮಿತ್ ಶಾ ಕರ್ನಾಟಕಕ್ಕೆ ಬಂದು ಹೋದ ಮೇಲೆ ಬಿಜೆಪಿಯ ಚಟುವಟಿಕೆಗಳು ಗರಿಗೆದರಿವೆ. ಆಗ 'ಕರ್ನಾಟಕದ ಬಿಜೆಪಿ ಒಂದು ರಾಜಕೀಯ ಪಕ್ಷದಂತೆ ಇಲ್ಲ. ಬದಲಾಗಿ ಸ್ವಯಂ ಸೇವಾ ಸಂಸ್ಥೆ, ಎನ್.ಜಿ.ಓ. ರೀತಿಯಲ್ಲಿ ಕೆಲಸ ಮಾಡುತ್ತಿದೆ ಎಂದು ಟೀಕಿಸಿ ಮುಂದಿನ ಆಕ್ರಮಣಕಾರಿ ದಾರಿಯನ್ನು ಸೂಚಿಸಿದ್ದರು. ಮಾತ್ರವಲ್ಲ ಬಿ.ಎಸ್. ಯಡಿಯೂರಪ್ಪನವರು ಬಿಜೆಪಿ ಅಧ್ಯಕ್ಷರಾಗಿ ಪ್ರತಿಷ್ಠಾಪಿಸಲ್ಪಟ್ಟ ಮೇಲೆ ಆರೆಸ್ಸೆಸ್ ಹಿಡಿತಕ್ಕೆ ಸಿಗುತ್ತಿಲ್ಲ. ಸ್ವತಂತ್ರವಾಗಿ ವರ್ತಿಸುತ್ತಿದೆ ಎಂಬ ಆರೋಪ – ವಿವಾದಗಳನ್ನು ಇತ್ಯಾರ್ಥಗೊಳಿಸಿ, ಬಿಜೆಪಿ ಪಕ್ಷವನ್ನು ಆರ್‌ಎಸ್‌ಎಸ್ ನಿಯಂತ್ರಣದಲ್ಲಿ ಒಪ್ಪಿಸಲು ಅಗತ್ಯವಾದ ಬಿಜೆಪಿ – ಆರ್‌ಎಸ್‌ಎಸ್ ನಾಯಕರ ಸಮಾಲೋಚನಾ ಸಭೆ ನಡೆಸಿದ್ದರು. ಆ ಬಳಿಕ ಕೇಂದ್ರ ಸರ್ಕಾರದ ಬಲದಿಂದ ಕಾಂಗ್ರೆಸ್ ಮುಖಂಡರು, ಬೆಂಬಲಿಗರ ಮೇಲೆ ಐಟಿ ಧಾಳಿಗಳು, ಅಕ್ರಮ – ಹಗರಣಗಳ ಆರೋಪಗಳೂ ಪುಂಖಾನುಪುಖವಾಗಿ ನಡೆದಿವೆ. ಇದಕ್ಕೆ ಎದುರಾಗಿ ಪ್ರತಿತಂತ್ರವೆಂದು ಕರ್ನಾಟಕ ಕಾಂಗ್ರೆಸ್ ಸರ್ಕಾರವು ತನ್ನ ಶಕ್ತ್ಯಾನುಸಾರ ಬಿಜೆಪಿ ನಾಯಕರ ಮೇಲೂ ತನಿಖಾ ಸಂಸ್ಥೆಗಳ ಅಧಿಕಾರವನ್ನು ಪ್ರಯೋಗಿಸುತ್ತಿದೆ. ಈ ನಿಟ್ಟಿನಲ್ಲಿ ಯಡಿಯೂರಪ್ಪ ಮತ್ತು ಅನಂತ ಕುಮಾರ್ ನಡುವೆ ನಡೆದಿದೆ ಎನ್ನಲಾದ ಹೈಕಮಾಂಡಿಗೆ ಕಪ್ಪ ಕೊಡುವ ಬಗ್ಗೆ ಸಿಡಿಯಲ್ಲಿರುವ ಧ್ವನಿ ಅವರದೇ ಎಂಬ ವರದಿ ಬಂದಿದ್ದು ಬಿಜೆಪಿಗೆ ತೀವ್ರ ಸಮಸ್ಯೆಯಾಗಲಿದೆ. ಇದರ ಬಗ್ಗೆ ತನಿಖೆ ನಡೆಯಬೇಕು ಎಂದು ಒತ್ತಾಯಿಸಬೇಕಾಗಿದೆ.

ಬಿಜೆಪಿಯ ಬಹುತೇಕ ದಾಳಿಗಳಲ್ಲಿ ಕೇವಲ ಆರೋಪ, ಅಧಿಕಾರದ ದುರುಪಯೋಗಗಳ ಮಟ್ಟದ ವಿಷಯಗಳೇ ಪ್ರಾಧಾನ್ಯತೆ ಪಡೆದಿದೆ. ಹೊರತು ಜನತೆಯ ಪ್ರಶ್ನೆಗಳ ಪ್ರಸ್ತಾಪವಿಲ್ಲ. ಮೇಲಾಗಿ ಅದು ಮೋದಿ ಸರ್ಕಾರದ ಜನವಿರೋಧಿ ಧಾಳಿಗಳನ್ನು ಮರೆಸುವ ಆಟವನ್ನು ಆಡುತ್ತಿದೆ.

ಎಷ್ಟೆಲ್ಲಾ ಹೆಣಗಿದರೂ ಬಿಜೆಪಿ ಪಕ್ಷ ಕರ್ನಾಟಕದಲ್ಲಿ ತೃಪ್ತಿ ಪಟ್ಟುಕೊಳ್ಳುವ ಸ್ಥಿತಿಯಲ್ಲಿ ಇಲ್ಲ. ಮೇಲಾಗಿ ಅದು ದೊಡ್ಡ ಧ್ವನಿಯಲ್ಲಿ ಹೇಳಿದ್ದು 150 ಸ್ಥಾನಗಳನ್ನು ಗಳಿಸುವ ವಿಶ್ವಾಸವೂ ಇಲ್ಲ. ಹೀಗಾಗಿಯೇ ಮತ್ತಷ್ಟು ಏನನ್ನಾದರೂ ಮಾಡಲೇಬೇಕೆಂಬ ಧಾವಂತದಲ್ಲಿದೆ. ಅದು ಕಾಂಗ್ರೆಸದ ವಿರುದ್ಧ, ಕಮ್ಯೂನಿಸ್ಟ್‌ರ ವಿರುದ್ಧ ಪ್ರಚಾರದ ಭಾರೀ ಧಾಳಿ ನಡೆಸುವಾಗಲೇ, ಅಂತಿಮವಾಗಿ ಕೋಮುಗಲಭೆಗಳ ಮೂಲಕ ವಿಭಜನೆ ತಂದು ಅದನ್ನು ಮತಗಳಾಗಿ ಪರಿವರ್ತಿಸಿಕೊಳ್ಳುವುದು ಮತ್ತೊಂದು ಮುಖ್ಯತಂತ್ರ. 'ಜಾತಿ' ಆಧಾರಿತ ರಾಜಕೀಯ ದೃವೀಕರಣ ವಿಪರೀತ ಸ್ವರೂಪ ಪಡೆದುಕೊಳ್ಳುತ್ತಿರುವ ಕರ್ನಾಟಕದಲ್ಲಿ ಅದರಿಂದ ಹೆಚ್ಚಿನ ಲಾಭವನ್ನು ನಿರೀಕ್ಷಿಸದ ಬಿಜೆಪಿ ಮತಧರ್ಮದ ಆಧಾರಿತ ಕೋಮು ವಿಭಜನೆಗೆ ಜೋತು ಬೀಳಲಿದೆ ಎಂಬ ವಿಶ್ಲೇಷಣೆಗಳೂ ಇವೆ. ಜಾತಿ ಸಮೀಕರಣವನ್ನೇ ಆಧರಿಸಿದರೆ ಯಡಿಯೂರಪ್ಪನಂತಹವರನ್ನು ಮೂಲೆಗಟ್ಟಿ, ಆರೆಸ್ಸೆಸ್ ನಿಷ್ಠರಾಗಿರುವ ಕಾರ್ಯಕರ್ತ ಬಿ.ಎಲ್. ಸಂತೋಷ್‌ರವರನ್ನು ಮುಂದೆ ತರುವುದು ಕಷ್ಟವೆಂಬ ಅಂಶವೂ ಈ ಕೋಮು ವಿಭಜನೆ ಲೆಕ್ಕಚಾರದಲ್ಲಿದೆ ಎಂದೂ ಹೇಳಲಾಗುತ್ತದೆ.

ಇವುಗಳ ನಡುವೆಯೇ ಅದು ಜನರನ್ನು ತಲುಪುವ ಕಾರ್ಯಕ್ರಮ ಹಮ್ಮಿಕೊಂಡಿದೆ. ಇಲ್ಲೂ ಕ್ರಮ–ಪ್ರತಿಕ್ರಮಗಳ ರೀತಿಯಲ್ಲಿ ಕಾರ್ಯಕ್ರಮಗಳು ಇವೆ. 'ಕಾಂಗ್ರೆಸ್ಸ್‌ನ ಮನೆ ಮನೆಗೆ ನಡೆ – ನವಕರ್ನಾಟಕ ನಿರ್ಮಾಣ' (ಮೋದಿಯ ನವಭಾರತ) ಘೋಷಣೆಗೆ ಪ್ರತಿಯಾಗಿ ಬಿಜೆಪಿ ಈಗ 'ನವಕರ್ನಾಟಕ ಪರಿವರ್ತನಾ' ಘೋಷಣೆ ಪ್ರಕಟಿಸಿದೆ. ಮಾತ್ರವಲ್ಲ ಅದಕ್ಕಾಗಿ ಇದೇ ನವೆಂಬರ್ 2 ರಿಂದ ರಾಜ್ಯಾದಾದ್ಯಂತ ರಥಯಾತ್ರೆಯನ್ನು ನಡೆಸಲು ನಿರ್ಧರಿಸಿದೆ.

ಈ 'ರಥಯಾತ್ರೆ' ಎಂಬ ಶಬ್ಧವೇ ಎಲ್ಲರನ್ನೂ ಆತಂಕಿತರನ್ನಾಗಿಸುತ್ತದೆ. ಹಿಂದೆ 1990 ರ ಸೆಪ್ಟೆಂಬರ್‌ನಲ್ಲಿ ಎಲ್.ಕೆ. ಅದ್ವಾನಿಯವರು ನಡೆಸಿದ ರಥಯಾತ್ರೆ, ರಕ್ತಯಾತ್ರೆಯಾಗಿ ಮಾರ್ಪಟ್ಟು ಭಾರತವನ್ನು ಕೋಮುಹಿಂಸೆಯ ದಳ್ಳುರಿಯಿಂದ ದಹಿಸಿತ್ತು.

ಅದೇ ಹೆಸರನ್ನು ಮುಂದೆ ಮಾಡುವ ಮೂಲಕ ಬಿಜೆಪಿ ಏನನ್ನೂ ಸಾಧಿಸಲು ಬಯಸಿದೆ ಎಂಬುದ ತಿಳಿಯದ ಗುಪ್ತ ಅಜೆಂಡಾ ಏನಲ್ಲ.

ಹಿಂದೆ ಕರ್ನಾಟಕದಲ್ಲಿ ಬಿಜೆಪಿ ಅಧಿಕಾರದಲ್ಲಿದ್ದಾಗ ನಡೆಸಿದ ದುರಾಚಾರ, ದುರಾಡಳಿತ ಹಾಗು ಭ್ರಷ್ಟ ಹಗರಣಗಳ ಆಡಳಿತವನ್ನು ಕರಾಳ ನೆನಪುಗಳನ್ನು 'ನವಕರ್ನಾಟಕ ಪರಿವರ್ತನಾ' ಭ್ರಮೆ ಬಿತ್ತಿ ಅಳಿಸುವ ತಂತ್ರ ಒಂದೆಡೆ ಇದೆ. ಅಲ್ಲದೇ ಈ ರಥಯಾತ್ರೆಯನ್ನು ಬಿಜೆಪಿಯಿಂದ ದೂರ ಸರಿಯುಬಹುದಾದ ಲಿಂಗಾಯತರನ್ನು ಓಲೈಸಲು ಬೇಕಾಗುವ ಹಾಗೇ ಡಿಸೈನ್ ಮಾಡಲಾಗಿದೆ. ಎರಡು ರಥಗಳ ವಿನ್ಯಾಸ ಇತ್ಯಾದಿಗಳನ್ನು ಖಾಸಗಿ ಸಂಸ್ಥೆಯೊಂದಕ್ಕೆ ಗುತ್ತಿಗೆ ನೀಡಲಾಗಿದೆಯಂತೆ. ಅದರ ರೂಪ ಅದ್ವಾನಿಯವರ ರಥದಂತೆಯೇ ಇರಲಿದೆ. ಮುಖ್ಯವಾಗಿ, ಈ ರಥಯಾತ್ರೆ ಆರಂಭವಾಗುವ ಮೊದಲು ತುಮಕೂರಿನ ಸಿದ್ಧಗಂಗ ಮಠದ ಸ್ವಾಮೀಜಿಯವರಿಂದ ಆಶೀರ್ವಾದ ಪಡೆದು ರಾಜ್ಯದಲ್ಲಿ ಸುತ್ತಾಡಿ ಬೆಂಗಳೂರಿನಲ್ಲಿ ಸಮಾರೋಪಗೊಳ್ಳುವ ಯೋಜನೆ ಇದೆ. ಇದಕ್ಕೆ ಮೋದಿ, ಅಮಿತ್ ಶಾ ರವರೂ ಬರುವರಂತೆ.

ಅಂದರೆ ಶಿವಕುಮಾರಸ್ವಾಮೀಜಿಯವರ ಅಶೀರ್ವಾದ ಎಂಬುದನ್ನೇ ರಾಜಕೀಯವಾಗಿ ದುರುಪಯೋಗ ಪಡಿಸಿಕೊಳ್ಳಲು ಬಿಜೆಪಿ ಹೇಸುತ್ತಿಲ್ಲ. ರಾಜಕೀಯ ದುಷ್ಟ ಅಜೆಂಡಾ ಹಿಡಿದು ಸಾಗುವ ಇಂತಹ ಯಾತ್ರೆಗಳಿಗೆ ಅಭಯವಿದೆ ಎಂಬ ಸಂಕೇತಿಸುವ ಕಾರ್ಯಕ್ರಮದಿಂದ ಸ್ವಾಮೀಜಿಯವರುದೂ ಉಳಿಯುವರೇ? ನೋಡಬೇಕು.

ಇದರೊಂದಿಗೆ ಬಿಜೆಪಿಯ ರಾಷ್ಟ್ರಾಧ್ಯಕ್ಷರು ಪ್ರಚಾರ ಕಾರ್ಯ ನಡೆಸಲು ಮೂರು ಉಪ ಸಮಿತಿಗಳನ್ನು ಸೂಚಿಸಿದ್ದರು. ಅದರ ನಾಯಕತ್ವ ವಹಿಸುವ ಕರಡು ಪ್ರಕಟನೆಯೂ ಆಗಿತ್ತು. ಆದರೆ ಇದೀಗ ಹಿಂದಿನ ಸೂಚನೆಗಳನ್ನು ಕೈ ಬಿಟ್ಟು ಹೊಸ ಹೆಸರುಗಳು ಬಂದಿರುವುದು ಆ ಪಕ್ಷದೊಳಗೆ ತೀವ್ರ ಕಲಹ ಸೃಷ್ಟಿಸಿದೆ. ಸದಾನಂದಗೌಡರನ್ನು ಬದಲಾಯಿಸಿ ಶೋಭಾ ಕರಂದ್ಲಾಜೆ ಮುಂತಾದ ಯಡಿಯೂರಪ್ಪ ನಿಷ್ಠರ ಹೆಸರುಗಳು ಬಂದಿರುವುದು ಅಂತಃಕಲಹ ತೀವ್ರಗೊಳಿಸಲಿದೆ. ಒಂದು ರೀತಿಯಲ್ಲಿ ಸಂಘಪರಿವಾರದ ಹಿಡಿತ ಸಾಧನೆಯ ಯತ್ನಕ್ಕೆ ವಿರೋಧ ಎಂಬಂತೆ ಕಾಣುತ್ತಿರುವುದು ಆಂತರಿಕ ಜಗಳ ಮುಂದುವರಿಕೆಯಾಗಿದೆ. ಇಂತಹ ಸ್ಥಿತಿಯಲ್ಲಿ ಬಿಜೆಪಿಯ ರಥಯಾತ್ರೆ. ಅದರಲ್ಲಿ ನಾಯಕರ ಕೈ ಮೇಲಾಟದ ಸ್ಪರ್ಧೆ, ಆರ್‌ಎಸ್‌ಎಸ್ ವಹಿಸಬಹುದಾದ ಪಾತ್ರಗಳು ನಿಜಕ್ಕೂ ಕರ್ನಾಟಕದ ಜನತೆಗೆ ಆತಂಕಕಾರಿಯಾಗಿದೆ.

ಇಂತಹ ಸ್ಥಿತಿಯಲ್ಲಿ ಮುಂದಿರುವ ಜನವರಿ 30ರ ಮಹಾತ್ಮಾಗಾಂಧಿಯವರ ಹುತಾತ್ಮ ದಿನದಂದು ಇಡೀ ಕರ್ನಾಟಕದಲ್ಲಿ ಯೋಜಿತವಾಗಿರುವ ಸೌಹಾರ್ದ ಕರ್ನಾಟಕ ಬೃಹತ್ ಮಾನವ ಸರಪಳಿ ಹಾಗೇ ಅಕ್ಟೋಬರ್ 30 ರಂದು ವಿವಿಧ ಜನ ಸಂಘಟನೆಗಳ ಪಂಜಿನ ಮೆರವಣಿಗೆ ಇತ್ಯಾದಿ ಕಾರ್ಯಕ್ರಮಗಳು ಜನತೆಯನ್ನು ಜಾಗೃತಿಗೊಳಿಸುವ ದೇಶ ರಕ್ಷಣೆಯ ಮಹತ್ವದ ಮುತುವರ್ಜಿಗಳಾಗಿವೆ.

ರೈತ ಸಂಘದ ಅಹೋರಾತ್ರಿ ಧರಣಿ


ರಾಯಚೂರು


ಹರಪ್ಪನಹಳ್ಳಿ


ಹಗರಿಬೊಮ್ಮನಹಳ್ಳಿ

ಕರ್ನಾಟಕ ಪ್ರಾಂತ ರೈತ ಸಂಘದ ಕರೆಯ ಮೇರೆಗೆ ಅಕ್ಟೋಬರ್ 10ರಿಂದ ಬಗರ್ ಹುಕುಂ ಸಾಗುವಳಿ ಅರ್ಜಿಗಳನ್ನು ಇತ್ಯರ್ಥ ಮಾಡುವಂತೆ ರಾಜ್ಯದ ಹಲವು ಕಡೆ ರೈತರು ತಾಲೂಕು ಕಚೇರಿಗಳ ಎದುರು ಅಹೋರಾತ್ರಿ ಧರಣಿ ನಡೆಸಿದರು. ರಾಜ್ಯದಲ್ಲಿ ಲಕ್ಷಾಂತರ ರೈತರು ಬಗರ್ ಹುಕುಂ ಸಾಗುವಳಿಯನ್ನು ಮಾಡಿಕೊಂಡು ಜೀವನ ಸಾಗಿಸುತ್ತಿದ್ದು, ಅದನ್ನು ಸಕ್ರಮಗೊಳಿಸುವ 12 ಲಕ್ಷ ಅರ್ಜಿಗಳು ನಾನಾ ಕಾರಣದಿಂದ ವಜಾಗೊಂಡಿವೆ. 3 ಲಕ್ಷ ಅರ್ಜಿಗಳು ವಿಲೇವಾರಿಯಾಗದೆ ಬಾಕಿ ಉಳಿದಿವೆ. ಇದಕ್ಕೆ ಪ್ರಮುಖವಾಗಿ ಕಾನೂನಾತ್ಮಕ ತೊಡಕುಗಳಿವೆ. ಅಗತ್ಯ ಕಾನೂನು ತಿದ್ದುಪಡಿಗಳನ್ನು ಮಾಡಿ ಸಚಿವ ಕಾಗೋಡು ತಿಮ್ಮಪ್ಪ 2016 ನವೆಂಬರ್ 17ರ ಜೈಲುಭರೋ ಸಮಯದಲ್ಲಿ ಆಶ್ವಾಸನೆ ಇತ್ತಿದ್ದು ಅದು ಹುಸಿಯಾಗಿದೆ. ಅದನ್ನು ಮುಂದಿನ ಅಧಿವೇಶನದಲ್ಲಿ ಎತ್ತಿಕೊಂಡು ಸಕ್ರಮಗೊಳಿಸುವಂತೆ ಒತ್ತಾಯಿಸಲು ಈ ಅಹೋರಾತ್ರಿ ಧರಣಿಗೆ ಕರೆ ಕೊಡಲಾಗಿತ್ತು.


ಸುರಪುರ

ರಾಜ್ಯದ ಹಲವು ಕಡೆ ಅಕ್ಟೋಬರ್ 10ರಿಂದ 30ರವರೆಗೆ ಬೇರೆ ಬೇರೆ ದಿನಾಂಕಗಳಲ್ಲಿ ನಡೆಯುತ್ತಿದೆ. ಈ ವರೆಗೆ ಹಗರಿಬೊಮ್ಮನ ಹಳ್ಳಿ. ಸುರಪುರ, ರಾಯಚೂರು, ಕಲಬುರ್ಗಿ, ಹರಪನಹಳ್ಳಿ, ಮಾಲೂರು, ಶ್ರೀನಿವಾಸಪುರ, ಕೋಲಾರಗಳಲ್ಲಿ ನೂರಾರು ಬಗರ ಹುಕುಂ ರೈತರ ಪಾಲುಗೊಳ್ಳುವಿಕೆಯೊಂದಿಗೆ ಅಹೋ ರಾತ್ರಿ ಧರಣಿ ನಡೆದ ವರದಿಗಳು ಬಂದಿವೆ.


ಹಗರಿಬೊಮ್ಮನಹಳ್ಳಿ


ಶ್ರೀನಿವಾಸಪುರ

ಅತಿಥಿ ಅಂಕಣ



ಪ್ರೊ. ಟಿ. ಆರ್. ಚಂದ್ರಶೇಖರ

ಅಸ್ಥಿರ ಆರ್ಥಿಕತೆ ಮತ್ತು ಜಿಡಿಪಿ ಕುಸಿತ

ಇಲ್ಲಿ ಸ್ವಚ್ಛತೆಗೆ ದೊರಕಿರುವಷ್ಟು ಆದ್ಯತೆಯು ಉದ್ಯೋಗ ಸೃಷ್ಟಿಗೆ ದೊರೆತಿಲ್ಲ. ಹಸಿವಿನ ನಿವಾರಣೆಗೆ ಕಾರ್ಯಕ್ರಮಗಳಿಲ್ಲ. ಸ್ವಚ್ಛತೆಯು ಏಕೆ ಇಂದು ಅತಿ ಮುಖ್ಯ ಸಂಗತಿಯಾಗಿದೆ? ಬಡತನ, ಹಸಿವು, ಅಪೌಷ್ಟಿಕತೆ, ಅಸ್ವಸ್ಥತೆ ಮುಂತಾದವುಗಳ ನಿವಾರಣೆಯು ಒಂದು ರೀತಿಯಲ್ಲಿ ಸ್ವಚ್ಛತೆಯಲ್ಲವೆ? ಪರಿಶುದ್ಧತೆಯನ್ನು ಇಂದಿನ ಸರ್ಕಾರವು ವ್ಯಸನದಂತೆ ಹಚ್ಚಿಕೊಂಡಿದೆ. ಅದೊಂದು ಧಾರ್ಮಿಕ ಶ್ರದ್ಧೆಯಾಗಿ ಬಿಟ್ಟಿದೆ. ಅಲ್ಪಸಂಖ್ಯಾತರಿಗೆ ಹೆಚ್ಚಿನ ಅನುಕೂಲಗಳನ್ನು ನೀಡುವ ಮೂಲಕ, ದಲಿತರಿಗೆ ವಿಶೇಷ ಕಾರ್ಯಕ್ರಮಗಳನ್ನು ನೀಡುವ ಮೂಲಕ ಸಮಾಜದಲ್ಲಿ ಮಾಲಿನ್ಯವನ್ನು ಹರಡಲಾಗಿದೆ ಎಂಬುದು ಇಲ್ಲಿನ ಪ್ರಚ್ಛನ್ನ ಸಂಗತಿಯಾಗಿರಬಹುದು. ಸಮಾಜಕ್ಕೆ ಅಂಟಿರುವ ಮೈಲಿಗೆಯನ್ನು ನಿವಾರಿಸುವ ಕೆಲಸದಲ್ಲಿ ಅದು ನಿರತವಾಗಿರುವಂತೆ ಕಾಣುತ್ತದೆ. ಈ ಬಗೆಯ ಉಳ್ಳವರ ಹಿತಾಸಕ್ತಿಗಳನ್ನು ಆದ್ಯತೆಯನ್ನಾಗಿ ಮಾಡಿಕೊಂಡಿರುವುದಕ್ಕೂ ಮತ್ತು ಆರ್ಥಿಕ ಅಸ್ಥಿರತೆಗೂ ನಡುವೆ ಸಂಬಂಧವಿದೆ. ಅಸ್ಥಿರ ಆರ್ಥಿಕತೆಯಲ್ಲಿ ಜಿಡಿಪಿಯ ಕುಸಿತವು ಅನಿವಾರ್ಯವಾಗುತ್ತದೆ.

ಇಂದು ದೇಶದಲ್ಲಿ ಜಿಡಿಪಿಯ ಕುಸಿತವನ್ನು ಕುರಿತಂತೆ ಬಿಸಿ ಬಿಸಿ ಚರ್ಚೆಗಳು ನಡೆಯುತ್ತಿವೆ. ಅದರ ಬಗ್ಗೆ ವಾದ-ವಿವಾದಗಳು ಪ್ರಕಟವಾಗುತ್ತಿವೆ. ಈ ಬಗ್ಗೆ ಆಳುವ ಪಕ್ಷದೊಳಗೆ ಭಿನ್ನ ಸ್ವರ ಕೇಳಿ ಬರುತ್ತಿದೆ. ಆದರೆ ಇಂದು ಕಂಡು ಬರುತ್ತಿರುವ ಕುಸಿತವು ತಾತ್ಕಾಲಿಕವೆಂದು, ಅದು ಗಂಭಿರವಾದುದಲ್ಲವೆಂದು ಆಡಳಿತಾರೂಢ ಪಕ್ಷ ಮತ್ತು ಅದರ ಅನುಯಾಯಿಗಳು ಹೇಳುತ್ತಿದ್ದಾರೆ. ಕೇಂದ್ರ ಸರ್ಕಾರದ ಆರ್ಥಿಕ ಸಲಹಾ ಮಂಡಳಿಯ ಮುಖ್ಯಸ್ಥರಾಗಿ ನೇಮಕಗೊಂಡಿರುವ ವಿವೇಕ್ ದೆಬ್‌ರಾಯ್ ಪ್ರಕಾರ ಆರ್ಥಿಕತೆ-ಯು ಕೇವಲ ಸಾಮಾನ್ಯ ಶೀತದಿಂದ ನೋವು ಅನುಭವಿಸುತ್ತಿದೆ ವಿನಾ ಅದು ಗಂಭಿರ ರೋಗದಿಂದ ಜರ್ಜರಿತವಾಗಿಲ್ಲವೆಂದು ಹೇಳುತ್ತಿದ್ದಾರೆ. ಆದರೆ ಸತ್ಯವೇನೆಂದರೆ ಸಾಮಾನ್ಯ ಶೀತವನ್ನು ಗುಣಪಡಿಸಲು ಸರಿಯಾದ ಕ್ರಮ ತೆಗೆದುಕೊಳ್ಳದಿದ್ದರೆ ಅದು ಗಂಭೀರ ನ್ಯೂಮೋನಿಯಾ ಆಗುವ ಸಾಧ್ಯತೆಯಿದೆ ಎಂಬುದನ್ನು ಯಶವಂತ್ ಸಿನ್ಹಾ ಮುಂತಾದವರು ಹೇಳುತ್ತಿದ್ದಾರೆ. ಇಲ್ಲಿ ನಾವು ಗಮನಿಸಬೇಕಾದ ಸಂಗತಿಯೆಂದರೆ ಆರ್ಥಿಕ ಕುಸಿತ ಅಂದರೆ ಕೇವಲ ಜಿಡಿಪಿ ಬೆಳವಣಿಗೆಯಲ್ಲಿನ ಮಂದಗತಿ ಮಾತ್ರವಲ್ಲ. ಬಡತನ, ಅಸಮಾನತೆ, ನಿರುದ್ಯೋಗ, ಹಣದುಬ್ಬರ, ಹಸಿವು ಮುಂತಾದವುಗಳ ಒಟ್ಟು ಪ್ರವೃತ್ತಿಯನ್ನು ಜಿಡಿಪಿಯ ಕುಸಿತ ಸೂಚಿಸುತ್ತದೆ. ಜಿಡಿಪಿಯನ್ನು ಉತ್ತಮ ಪಡಿಸುವುದು ಸರ್ಕಾರದ ಆದ್ಯತೆಯಾಗಿ ಉಳಿದಿಲ್ಲ. ಅದರ ಆದ್ಯತೆಗಳು ಭಿನ್ನವಾಗಿವೆ. ಕಳೆದ ಮೂರು-ನಾಲ್ಕು ವರ್ಷಗಳ ಆರ್ಥಿಕ ನೀತಿಗಳಾದ "ಸಬ್ ಕಾ ಸಾತ್, ಸಬ್ ಕಾ ವಿಕಾಸ್", "ಮಿನಿಮಮ್ ಗೌರ್ವನಮೆಂಟ್, ಮ್ಯಾಕ್ಸಿಮಮ್ ಗೌರ್ವನೆನ್ಸ್", "ಉತ್ಪಾದನೆ ಮೊದಲು, ವಿತರಣೆ ನಂತರ" ಮುಂತಾದವು ಉಳ್ಳವರ, ಉದ್ದಿಮೆಗಾರರ, ಉನ್ನತ ಜಾತಿವರ್ಗಗಳ ಹಿತಾಸಕ್ತಿಗಳನ್ನು ಕಾಯುವ ಉದ್ದೇಶ ಹೊಂದಿದ್ದಾವೆ ವಿನಾ ಉಳಿದವರ ಜೀವನೋಪಾಯ ಇಲ್ಲಿ ನಗಣ್ಯವಾಗಿ ಬಿಟ್ಟಿದೆ.

ಸ್ವಚ್ಛತೆಯ ವ್ಯಸನ

ಇಂದು ಉದ್ಯೋಗ ಸ್ಥಿತಿಯು ನೆಲಕಚ್ಚಿದೆ. ಆಹಾರ ಭದ್ರತೆ ಇಂದು ಆದ್ಯತೆಯ ಕಾರ್ಯಕ್ರಮವಾಗಿ ಉಳಿದಿಲ್ಲ. ಕಳೆದ ನಾಲ್ಕು ವರ್ಷಗಳಲ್ಲಿ ಉದ್ಯೋಗಗಳನ್ನು, ಅದರಲ್ಲೂ ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗಗಳನ್ನು ಸೃಷ್ಟಿಸುವ ಒಂದೇ ಒಂದು ಕಾರ್ಯಕ್ರಮ ಜಾರಿಯಾಗಿಲ್ಲ. ತಜ್ಞರ ಪ್ರಕಾರ ನಮ್ಮ ಆರ್ಥಿಕತೆಯಲ್ಲಿ ಉದ್ಯೋಗದ ಬೆಳವಣಿಗೆಯ ಸ್ಥಿತಿಸ್ಥಾಪಕತ್ವವು 0.5ರಷ್ಟಿದೆಯೆಂದು ಕೆಲವರು ಹೇಳಿದರೆ ಮತ್ತೆ ಕೆಲವರು ಅದು ಶೂನ್ಯವಾಗಿದೆ ಎಂದು ಹೇಳುತ್ತಿದ್ದಾರೆ. ಆರೋಗ್ಯ ಮತ್ತು ಶಿಕ್ಷಣಗಳ ಬಗ್ಗೆ ದಿವ್ಯ ನಿರ್ಲಕ್ಷ್ಯ ಎದ್ದು ಕಾಣುತ್ತಿದೆ. ಯುಪಿಎ ಅಧಿಕಾರಾವಧಿಯಲ್ಲಿ ಏನೆಲ್ಲ ಹಗರಣಗಳು ನಡೆದಿದ್ದರೂ ಅಲ್ಲಿ ಎಮ್‌ಜಿಎನ್‌ಆರ್‌ಈಜಿಎ (ಮನರೇಗಾ-ಗ್ರಾಮೀಣ ಉದ್ಯೋಗ)ಇತ್ತು, ಎನ್‌ಆರ್‌ಎಚ್‌ಎಮ್ (ಗ್ರಾಮೀಣ ಆರೋಗ್ಯ)ಇತ್ತು, ಎಸ್‌ಎಸ್‌ಎ (ಪ್ರಾಥಮಿಕ ಶಿಕ್ಷಣ) ಇತ್ತು, ಎನ್‌ಎಲ್‌ಆರ್‌ಎಮ್(ಜೀವನೋಪಾಯ)ಇತ್ತು. ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿಗೆ ಐಸಿಡಿಎಸ್ ಇತ್ತು. ಪ.ಜಾ.ಯವರಿಗೆ ಎಸ್‌ಸಿಎಸ್‌ಪಿ ಇತ್ತು, ಪ.ಪಂದವರಿಗೆ ಟಿಎಸ್‌ಪಿ ಇತ್ತು. ಇವು ಬಡವರ, ಅಂಚಿನಲ್ಲಿರುವವರ, ಅಲ್ಪಸಂಖ್ಯಾತರ ಬದುಕನ್ನು ಉತ್ತಮ ಪಡಿಸದಿದ್ದರೂ ಅವು ಅಲ್ಲಿ ಬಡತನವನ್ನು ಸಹ್ಯವನ್ನಾಗಿ ಮಾಡಿದ್ದವು. ಇಂದು ಬಡವರ ಬಗ್ಗೆ ಒಂದು ರೀತಿಯ ಅಸೂಯೆ, ಔದಾಸೀನ್ಯ, ತಿರಸ್ಕಾರದ ಮನೋಭಾವ ಅಧಿಕಾರೂಢರಲ್ಲಿ ಕಂಡು ಬರುತ್ತಿದೆ. ಯುಪಿಎಯು ಮೇಲ್ಕಂಡ ಕಾರ್ಯಕ್ರಮಗಳನ್ನು ಜಾರಿಗೊಳಿಸಿದ್ದರೆ ಇಂದು ಎನ್‌ಡಿಎ ಯಾವ ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ? ಅವು ಯಾರ ಹಿತಾಸಕ್ತಿಯನ್ನು ಕಾಪಿಡುತ್ತಿವೆ? ಮೇಕ್ ಇನ್ ಇಂಡಿಯ, ಸ್ಮಾರ್ಟ್ ಸಿಟಿ, ಸ್ಟಾಂಡ್ ಅಪ್, ಸ್ಟಾರ್ಟ್ ಅಪ್, ಡಿಜಿಟೈಸೇಶನ್, ಸ್ವಚ್ಛ ಭಾರತ ಮಿಷನ್, ನಮಾಮಿ ಗಂಗಾ, ಸರ್ಜಿಕಲ್ ಸ್ಟ್ರೈಕ್, ಅಮಾನ್ಯೀಕರಣ ಮುಂತಾದವು ಅನುಷ್ಠಾನಗೊಂಡಿವೆ. ಇವುಗಳು ಯಾವುವು ಬಡವರನ್ನು ಗುರಿಯನ್ನಾಗಿ ಹೊಂದಿಲ್ಲ. ಇಲ್ಲಿ ಸ್ವಚ್ಛತೆಗೆ ದೊರಕಿರುವಷ್ಟು ಆದ್ಯತೆ-ಯು ಉದ್ಯೋಗ ಸೃಷ್ಟಿಗೆ ದೊರೆತಿಲ್ಲ. ಹಸಿವಿನ ನಿವಾರಣೆಗೆ ಕಾರ್ಯಕ್ರಮಗಳಿಲ್ಲ. ಸ್ವಚ್ಛತೆಯು ಏಕೆ ಇಂದು ಅತಿ ಮುಖ್ಯ ಸಂಗತಿಯಾಗಿದೆ? ಬಡತನ, ಹಸಿವು, ಅಪೌಷ್ಟಿಕತೆ, ಅಸ್ವಸ್ಥತೆ ಮುಂತಾದವುಗಳ ನಿವಾರಣೆಯು ಒಂದು ರೀತಿಯಲ್ಲಿ ಸ್ವಚ್ಛತೆಯಲ್ಲವೆ? ಪರಿಶುದ್ಧತೆಯನ್ನು ಇಂದಿನ ಸರ್ಕಾರವು ವ್ಯಸನದಂತೆ ಹಚ್ಚಿಕೊಂಡಿದೆ. ಅದೊಂದು ಧಾರ್ಮಿಕ ಶ್ರದ್ಧೆಯಾಗಿ ಬಿಟ್ಟಿದೆ. ಇದನ್ನು ಅರ್ಥ ಮಾಡಿಕೊಳ್ಳುವುದು ನಮಗೆ ಕಷ್ಟವಾಗಬಾರದು. ಶುದ್ಧತೆ, ಪರಿಶುದ್ಧತೆ ಬಗ್ಗೆ ಸರ್ಕಾರವು ಹೆಚ್ಚು ಕಾಳಜಿ ವಹಿಸುತ್ತಿದೆ. ಅದರಲ್ಲಿನ ಸಾಧು-ಸಂತರು ಇದನ್ನು ಒತ್ತಾಯ ಮಾಡುತ್ತಿರುವ ಸಾಧ್ಯತೆಯಿದೆ. ಈ ಸಮಾಜವನ್ನು ಅಶುದ್ಧ-ಅಪವಿತ್ರ-ಮೈಲಿಗೆಗೊಳಿಸಲಾಗಿದೆ ಎಂಬುದು ಇಂದಿನ ಆಳುವ ಪಕ್ಷದ, ಅದರ ಅನುಯಾಯಿಗಳ ಮತ್ತು ಅವುಗಳ ಬಗ್ಗೆ ಸಹಾನುಭೂತಿವುಳ್ಳವರ ಅಭಿಪ್ರಾಯವಿರುವಂತೆ ಕಾಣುತ್ತದೆ. ಅಲ್ಪಸಂಖ್ಯಾತರಿಗೆ ಹೆಚ್ಚಿನ ಅನುಕೂಲಗಳನ್ನು ನೀಡುವ ಮೂಲಕ, ದಲಿತರಿಗೆ ವಿಶೇಷ ಕಾರ್ಯಕ್ರಮಗಳನ್ನು ನೀಡುವ ಮೂಲಕ ಸಮಾಜದಲ್ಲಿ ಮಾಲಿನ್ಯವನ್ನು ಹರಡಲಾಗಿದೆ ಎಂಬುದು ಇಲ್ಲಿನ ಪ್ರಚ್ಛನ್ನ ಸಂಗತಿಯಾಗಿರಬಹುದು. ಸಮಾಜಕ್ಕೆ ಅಂಟಿರುವ ಮೈಲಿಗೆಯನ್ನು ನಿವಾರಿಸುವ ಕೆಲಸದಲ್ಲಿ ಅದು ನಿರತವಾಗಿರುವಂತೆ ಕಾಣುತ್ತದೆ. ಈ ಕಾರಣಕ್ಕೆ ದಲಿತರಿಗೆ ಸ್ವಚ್ಛ ಭಾರತ ಮಿಷನ್ನಿನಲ್ಲಿ ಅವಕಾಶ ನೀಡಿಲ್ಲವೆಂದು ಕಾಣುತ್ತದೆ!1. ಈ ಬಗೆ-ಯ ಉಳ್ಳವರ ಹಿತಾಸಕ್ತಿಗಳನ್ನು ಆದ್ಯತೆಯನ್ನಾಗಿ ಮಾಡಿಕೊಂಡಿರುವುದಕ್ಕೂ ಮತ್ತು ಆರ್ಥಿಕ ಅಸ್ಥಿರತೆಗೂ ನಡುವೆ ಸಂಬಂಧವಿದೆ. ಅಸ್ಥಿರ ಆರ್ಥಿಕತೆಯಲ್ಲಿ ಜಿಡಿಪಿಯ ಕುಸಿತವು ಅನಿವಾರ್ಯವಾಗುತ್ತದೆ. ಅಸ್ಥಿರತೆಯನ್ನು ಉಳ್ಳವರು ಸಹಿಸಿಕೊಂಡಾರು. ಆದರೆ ಇದು ಬಡವರಿಗೆ ಮೃತ್ಯುಪಾಯವಾಗಿ ಬಿಡುತ್ತದೆ.

ನೋಟು ಅಮಾನ್ಯೀಕರಣದಿಂದಾದ ನಷ್ಟ

ನೋಟು ಅಮಾನ್ಯೀಕರಣದಿಂದ ಆರ್ಥಿಕತೆಗೆ ಉಂಟಾದ ನಷ್ಟ ಎಷ್ಟು ಎಂಬುದರ ಒಂದು ಲೆಕ್ಕಾಚಾರದ ವಿವರ ಇಲ್ಲಿದೆ:

ರಿಸರ್ವ್ ಬ್ಯಾಂಕು ಕೇಂದ್ರ ಸರ್ಕಾರಕ್ಕೆ ನೀಡಿದ್ದ ಲಾಭಾಂಶ 2015-16ರಲ್ಲಿ ರೂ 65,880 ಕೋಟಿ. ಆದರೆ ಇದು 2016-17ರಲ್ಲಿ ರೂ.30,659ಕ್ಕೆ ಕುಸಿದಿದೆ. ಇಲ್ಲಿನ ನಿವ್ವಳ ನಷ್ಟ ರೂ35,221 ಕೋಟಿ.

ರಿಸರ್ವ್ ಬ್ಯಾಂಕಿನ ವಾರ್ಷಿಕ ಸಾದಿಲ್ವಾರು ರೂ.1000 ಕೋಟಿಯಷ್ಟಿರುತ್ತಿದ್ದುದು 2016-17ರಲ್ಲಿ ಅದು ರೂ 13140 ಕೋಟಿಗೇರಿದೆ. ಇಲ್ಲಿನ ನಿವ್ವಳನಷ್ಟ ರೂ.12140 ಕೋಟಿ.

ರಿಸರ್ವ್ ಬ್ಯಾಂಕಿಗೆ ನೋಟು ಮುದ್ರಣಕ್ಕೆ 2015-16ರಲ್ಲಿ ಅಗತ್ಯವಾಗಿದ್ದ ಹಣ ರೂ.3420 ಕೋಟಿ. ಆದರೆ 2016-17ರಲ್ಲಿ ಅದಕ್ಕೆ ಖರ್ಚಾದ ಹಣ ರೂ. 7965 ಕೋಟಿ. ಇಲ್ಲಿನ ನಿವ್ವಳ ನಷ್ಟ ರೂ.4545 ಕೋಟಿ.

ಒಟ್ಟು ರಿಸರ್ವ್ ಬ್ಯಾಂಕಿಗೆ ಉಂಟಾದ ನಷ್ಟ ರೂ.51,906 ಕೋಟಿ.

ರಿಸರ್ವ್ ಬ್ಯಾಂಕಿನ ಪ್ರಕಾರ ರದ್ದಾದ ರೂ.15.44 ಲಕ್ಷ ಕೋಟಿ ನಗದಿನಲ್ಲಿ ವಾಪಸ್ಸು ಬಂದ ನಗದು ರೂ15.28 ಲಕ್ಷ ಕೋಟಿ. ಅಂದರೆ ರೂ.16000 ಕೋಟಿ ಅಕ್ರಮ ವರಮಾನವನ್ನು ಹಿಡಿಯುವುದಕ್ಕೆ ಸರ್ಕಾರ ಮಾಡಿದ ಖರ್ಚು ರೂ. 51906 ಕೋಟಿ. ನಮ್ಮ ಹಳ್ಳಿಗರ ಭಾಷೆಯಲ್ಲಿ ಹೇಳುವುದಾದರೆ ಇದು 'ಬೆಟ್ಟ ಅಗೆದು ಇಲಿಯನ್ನು ಹಿಡಿದ' ಹಾಗಾಗಿದೆ. ಉರ್ಜಿತ್ ಪಟೇಲ್, ಅರವಿಂದ್ ಸುಬ್ರಮಣ್ಯಮ್, ಪ್ರೊಫೆಸರ್‌ಗಿರಿಗೆ ವಾಪಸ್ಸಾದ ಅರವಿಂದ್ ಪಣಗಾ-ರಿಯ ವಿವೇಕ್ ದೆಬರಾಯ್, ಅರುಣ್ ಜೈಟ್ಲಿ ಇದಕ್ಕೆ ಉತ್ತರ ನೀಡಬೇಕು. ಆದರೆ ಅವರ ಬಳಿ ಉತ್ತರವಿಲ್ಲ.

ನೋಟು ಅಮಾನ್ಯೀಕರಣದಿಂದ ಆರ್ಥಿಕ ಅಸ್ಥಿರತೆಯು ಬಿಡಗಾಯಿಸಿದೆ. ಇದಕ್ಕೆ ಈಗ ಜಿಎಸ್‌ಟಿಯು ತುಪ್ಪ ಸುರಿಯುತ್ತಿದೆ. ಜಿಎಸ್‌ಟಿ ಸಹ ಉಳ್ಳವರನ್ನು ಪೋಷಿಸುವ ಬಡವರನ್ನು ಶೋಷಿಸುವ ಒಂದು ಪ್ರತಿಗಾಮಿ ಅಪ್ರತ್ಯಕ್ಷ ತೆರಿಗೆ-ಯಾಗಿದೆ. ಇದು ಬಡವರಿಗೆ ಹೆಚ್ಚು ಬಾರವಾಗುತ್ತದೆ ವಿನಾ ಶ್ರೀಮಂತರಿಗಲ್ಲ. ಏಕೆಂದರೆ ಇಲ್ಲಿ ತೆರಿಗೆ ದರವು ಎಲ್ಲರಿಗೂ ಸಮನಾಗಿರುತ್ತದೆ. ಜಿಡಿಪಿಯ ಬೆಳವಣಿಗೆ ದರ ಕುಸಿಯುತ್ತಿದೆ. ಅದರೂ ಅದರ ಬೆಳವಣಿಗೆ ದರ ಶೇ.5.7ರಷ್ಟಿದೆ. ಈ ಪ್ರಮಾಣದ ವರಮಾನದ ಬೆಳವಣಿಗೆಯಿದ್ದರೂ ಆರ್ಥಿಕತೆಯಲ್ಲಿ ಉದ್ಯೋಗದ ಬೆಳವಣಿಗೆ ದರ ಮಾತ್ರ ಶೇ.0.5 ಕ್ಕಿಂತ ಕಡಿಮೆಯಿದೆ. ಕೆಲವರು ಅದು ಶೂನ್ಯವಾಗಿದೆ ಎಂದು ಅಂದಾಜು ಮಾಡುತ್ತಿದ್ದಾರೆ. ಅಮಾನ್ಯೀಕರಣವಾಗಲಿ, ಜಿಎಸ್‌ಟಿಯಾಗಲಿ, ಜಿಡಿಪಿಯ ಕುಸಿತವಾಗಲಿ, ಜಾನುವಾರು ಹತ್ಯೆ ನಿಷೇಧ ಕಾಯಿದೆಯಾಗಲಿ-ಇವು ಯಾವುವು ಸಮಾಜದಲ್ಲಿನ ಬಲಾಢ್ಯರನ್ನು ಅಲುಗಾಡಿಸುವುದಿಲ್ಲ. ಆದರೆ ಇದರಿಂದ ಕೆಳಸ್ತರದ ಕೂಲಿಕಾರರು, ದಲಿತರು, ಅಲ್ಪಸಂಖ್ಯಾತರ ಬದುಕು ಮೂರಾಬಟ್ಟೆಯಾಗುತ್ತಿದೆ. ಉದಾರವಾದಿ ನೀತಿ ಆಚರಣೆಗೆ ಬಂದ ನಂತರ ನಮ್ಮದು 'ಉದ್ಯೋಗ ರಹಿತ' ಬೆಳವಣಿಗೆಯಾಗಿದೆ. ಅಂ-ದರೆ ವರಮಾನದಲ್ಲಿ ಬೆಳವಣಿಗೆಯಾಗುತ್ತಿದೆ. ಆದರೆ ಅಲ್ಲಿ ಉದ್ಯೋಗಗಳ ಬೆಳವಣಿಗೆಯಾಗುತ್ತಿಲ್ಲ. ಏರಿಕೆಯಾದ ವರಮಾನ ಉಳ್ಳವರ ಪಾಲಾಗುತ್ತಿದೆ, ಕುಸಿಯುತ್ತಿರುವ ಉದ್ಯೋಗಗಳು ಉಳಿದವರ ಬದುಕನ್ನು ಹೈರಾಣ ಮಾಡುತ್ತಿವೆ.

ಜಿಡಿಪಿ ಕುಸಿತವು ತಾತ್ಕಾಲಿಕವೋ ಅಥವಾ ತಾಂತ್ರಿಕವೋ?

ಆಳುವ ಪಕ್ಷದ ವಕ್ತಾರರು ಜಿಡಿಪಿಯಲ್ಲಿನ ಕುಸಿತವು ತಾಂತ್ರಿಕ ಕಾರಣಗಳಿಂದ ಉಂಟಾಗಿದೆ ಮತ್ತು ಅದು ತಾತ್ಪೂರ್ತಿಕವೆಂದು ಹೇಳುತ್ತಿದ್ದಾರೆ. ಆದರೆ ಭಾರತೀಯ ಸ್ಟೇಟ್ ಬ್ಯಾಂಕು ತನ್ನ ವರದಿಯಲ್ಲಿ ಇದು ತಾತ್ಕಾಲಿಕವೂ ಅಲ್ಲ ಮತ್ತು ಅದು ತಾಂತ್ರಿಕ ಕಾರಣಗಳಿಂದಾಗಿ ಸಂಭವಿಸಿರುವ ಅಬಿರೇಶನ್ ಅಲ್ಲ ಎಂದು ಹೇಳಿದೆ. ಈ ವರದಿಯ ಪ್ರಕಾರ ಸರ್ಕಾರಿ ಮತ್ತು ಖಾಸಗಿ ವಲಯಗಳಲ್ಲಿನ ಸಾರ್ವಜನಿಕ ವೆಚ್ಚದ ಪ್ರಮಾಣವು ಕನಿಷ್ಟಮಟ್ಟಕ್ಕಿಳಿದಿರುವುದು ಕಾರಣವಾಗಿದೆ. ಇದನ್ನು ಹೆಚ್ಚಿಸುವ ಬಗ್ಗೆ ಸರ್ಕಾರ ಗಮನ ನೀಡುತ್ತಿಲ್ಲ. ವಿತ್ತೀಯ ಕೊರತೆಯನ್ನು ಒಂದು ಪವಿತ್ರ ಮಾನದಂಡವೆಂದು ಭಾವಿಸಿ ಅದನ್ನು ಕೆಳಮಟ್ಟದಲ್ಲಿಡಲು ಪ್ರಯತ್ನ ನಡೆಯುತ್ತಿದೆ. ಇದು ಆರ್ಥಿಕ ಬೆಳವಣಿಗೆಗೆ ಅಪಾಯವಾಗುವ ಸಾಧ್ಯತೆಯಿದೆ. ಅದರ ಪ್ರಕಾರ ಅಮಾನ್ಯೀಕರಣದ ದುಷ್ಪರಿಣಾಮಗಳು ಇನ್ನೂ ಮುಂದುವರಿಯಲಿವೆ. ರಫ್ತು ಬೆಳವಣಿಗೆಯು ಅತ್ಯಂತ ಮಂದಗತಿಯಲ್ಲಿ ಬೆಳೆಯುತ್ತಿದೆ.

ಅಸಮಾನತೆಯ ವಿರಾಟ ರೂಪ

ಸಮಾಜದಲ್ಲಿ ಅಸಮಾನತೆಯು ಅಕರಾಳ ವಿಕರಾಳ ರೂಪದಲ್ಲಿ ಬೆಳೆಯುತ್ತಿದೆ. ಜಿಡಿಪಿಯಲ್ಲಿನ ಕುಸಿತವು ಬಡವರಿಗೆ ಹೆಚ್ಚು ಹಾನಿಯುಂಟು ಮಾಡುತ್ತದೆ. ಥಾಮಸ್ ಪಿಕೆಟ್ಟಿ ಅನ್ನುವ ಪ್ರೆಂಚ್ ಅರ್ಥಶಾಸ್ತ್ರಜ್ಞ 2013ರಲ್ಲಿ ಪ್ರಕಟಿಸಿದ 'ಕ್ಯಾಪಿಟಲ್ ಇನ್ ದಿ ಟ್ವೆಂಟಿ ಫಸ್ಟ್ ಸೆಂಚುರಿ' ಎಂಬ ಕೃತಿಯಲ್ಲಿ ಜಗತ್ತಿನಲ್ಲಿ ಅಸಮಾನತೆ ಹೇಗೆ ಉಲ್ಬಣಗೊಳ್ಳುತ್ತಾ ನಡೆದಿದೆ ಎಂಬುದನ್ನು ತೋರಿಸಿದ್ದ. ಅವರು ಈಗ ಲುಕಾಸ್ ಚಾನ್ಸೆಲ್ ಜೊತೆ ಸೇರಿಕೊಂಡು ಪ್ರಕಟಿಸಿರುವ 'ಇಂಡಿಯನ್ ಇನ್‌ಕಮ್ ಇನಿಕ್ವಾಲಿಟಿ 1922-2014: ಕಲೋನಿಯಲ್ ರಾಜ್ ಟು ಬಿಲಿನಿಯರ್ಸ್ ರಾಜ್' ಎಂಬ ಪ್ರಬಂಧದಲ್ಲಿ ನಮ್ಮ ಆರ್ಥಿಕತೆಯಲ್ಲಿ ಅಸಮಾನತೆಯ ಪ್ರಮಾಣವನ್ನು ಕುರಿತಂತೆ ಚರ್ಚೆ ಮಾಡಿದ್ದಾರೆ. ಅವರ ಅಧ್ಯಯನದ ಪ್ರಕಾರ 1951 ರಿಂದ 1980ರ ಮೂರು ದಶಕಗಳಲ್ಲಿ ವರಮಾನದ ಉನ್ನತ ಶ್ರೇಣಿಯಲ್ಲಿನ ಶೇ 1ರಷ್ಟು ಜನರು ದೇಶದ ವರಮಾನದಲ್ಲಿ ಶೇ 6 ರಷ್ಟು ಪಾಲು ಪಡೆದಿದ್ದರು. ಆದರೆ 1980 ರಿಂದ 2014ರ ಉದಾರವಾದಿ ಪರ್ವದಲ್ಲಿ ಶೇ 1 ರಷ್ಟು ಬಿಲಿಯನರುಗಳು ದೇಶದ ವರಮಾನದಲ್ಲಿ ಶೇ22 ರಷ್ಟು ಪಾಲು ಬಾಚಿ-ಕೊಂಡಿದ್ದಾರೆ. ನಮ್ಮ ದೇಶದ ಇಂದಿನ ಜಿಡಿಪಿ (ಸ್ಥಿರಬೆಲೆ) ರೂ. 121.65 ಲಕ್ಷ ಕೋಟಿ. ಇದರಲ್ಲಿ ಶೇಕಡ ಒಂದರಷ್ಟು ಜನರು ಅಂದರೆ 1.21 ಕೋಟಿ ಜನರು ಸರಿಸುಮಾರು ರೂ26.76 ಲಕ್ಷ ಕೋಟಿ ವರಮಾನದ ಒಡೆಯರಾಗಿದ್ದಾರೆ. ಈ ವರ್ಗದ ತಲಾ ವರಮಾನ ರೂ. 22.12 ಕೋಟಿ. ಆದರೆ ಸರಾಸರಿ ಭಾರತೀಯರ ತಲಾ ವರಮಾನ 2016-17ರಲ್ಲಿ ರೂ1.03 ಲಕ್ಷ. ಇಲ್ಲಿನ ಅಸಮಾನತೆಯು ಅಳತೆ ಮಿರಿದ್ದಾಗಿದೆ.

ಮೂಲಭೂತವಾಗಿ ನಮ್ಮದು ಅಸಮಾನತೆಯ ಸಮಾಜ. ಈ ಸಾಮಾಜಿಕ ಅಸಮಾನತೆಯ ಜೊತೆ ಆರ್ಥಿಕ ಅಸಮಾನತೆಯು ಸೇರಿಕೊಂಡು ಜನರ ಬದುಕನ್ನು ದುಸ್ಥಿತಿಗೆ ತಳ್ಳುತ್ತಿದೆ. ಅತ್ಯಂತ ದುರದೃಷ್ಟದ ಸಂಗತಿಯೆಂದರೆ ಇಂದು ಸರ್ಕಾರವು ಅಸಮಾನತೆಯ ಕುರಿತಂತೆ, ಬಡತನವನ್ನು ಕುರಿತಂತೆ, ಹಸಿವಿನ ಬಗ್ಗೆ ಮಾತನಾಡುತ್ತಿಲ್ಲ. ಇಂದು ಎದೆಯುಬ್ಬಿಸಿ, ತೋಳೇರಿಸಿ ತೊಡೆತಟ್ಟಿ ಉಗ್ರ ಭಾಷಣ ಮಾಡುವುದೇ ಆರ್ಥಿಕ ನೀತಿಯಾಗಿ ಬಿಟ್ಟಿದೆ. ಜಿಡಿಪಿಯ ಕುಸಿತದ ಬಗೆಗಿನ ಯಶವಂತ್ ಸಿನ್ಹಾ ಟೀಕೆಗೆ ಉತ್ತರ ನೀಡುತ್ತಾ ಹಣಕಾಸು ಮಂತ್ರಿ ಅರುಣ್ ಜೇಟ್ಲಿ

ಪುಟ 11 ಕ್ಕೆ



ಕೃಪೆ: ಸತೀಶ್ ಆಚಾರ್ಯ

ಬಿಜೆಪಿ ಅಧ್ಯಕ್ಷರ ಮಗ ಪರೀಕ್ಷಾತೀತನೇ?

ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿ ತಾವು ಹಿಂದಿನ ಯುಪಿಎ ಸರಕಾರದಂತಲ್ಲದೆ ತಮ್ಮ ಆಡಳಿತದಲ್ಲಿ ಯಾವುದೇ ಭ್ರಷ್ಟಾಚಾರ ನಡೆದಿಲ್ಲ ಎಂದು ಬಡಾಯಿ ಕೊಚ್ಚಿಕೊಳ್ಳುತ್ತಲೇ ಬಂದಿದ್ದಾರೆ. ಈಗ ಬಯಲಾಗುತ್ತಿರುವ ಜಯ್ ಷಾ ಪ್ರಕರಣವು ಬಿಜೆಪಿ ಒಳಗೊಂಡಿರುವ ಭ್ರಷ್ಟಾಚಾರ ಮತ್ತು ಲಂಚ ಪ್ರಕರಣಗಳ ಬೆಳೆಯುತ್ತಿರುವ ಪಟ್ಟಿಯಲ್ಲಿ ಒಂದಾಗಿದೆ ಅಷ್ಟೆ.



ಆತನ ಕಂಪನಿಗಳ ವ್ಯವಹಾರಗಳ ಬಗ್ಗೆ ಮೋದಿ ಸರಕಾರ ತನಿಖೆ ನಡೆಸಬೇಕು. ಸಿಬಿಐ ಮತ್ತು ಇ.ಡಿ.ಗಳನ್ನು ಕೆಲವೇ ಆಯ್ದ ಆರ್ಥಿಕ ಅಪರಾಧಿಗಳನ್ನು ಹಿಡಿದು ಹಾಕಲಷ್ಟೇ ಬಳಸಲಾಗುತ್ತಿಲ್ಲ ಎನ್ನುವುದನ್ನು ಸಾಬೀತು ಪಡಿಸಲಾದರೂ ಈ ಸಂಸ್ಥೆಗಳನ್ನು ಈ ಪ್ರಕರಣದಲ್ಲಿ ಕಾರ್ಯಾಚರಣೆಗೆ ಇಳಿಸಬೇಕು.

*** ಪ್ರಕಾಶ್ ಕಾರಟ್**


ಬಿಜೆಪಿ ಅಧ್ಯಕ್ಷ ಅಮಿತ್ ಷಾ ಪುತ್ರ ಜಯ್ ಷಾ ಚಮಚಾ ಬಂಡವಾಳಶಾಹಿಯ ಒಂದು ಪ್ರಕರಣದ ಕೇಂದ್ರ ಬಿಂದುವಾಗಿ ಬಿಟ್ಟಿದ್ದಾರೆ ಮತ್ತು ವ್ಯಾಪಾರೀ ಅಕೃತ್ಯಗಳ ಬಗ್ಗೆ ಪ್ರಶ್ನೆಗಳು ಹುಟ್ಟಲು ಆರಂಭವಾಗಿದೆ.

ಆನ್‌ಲೈನ್ ಸುದ್ದಿ ತಾಣವಾಗಿರುವ 'ದಿ ವೈರ್' ತುಂಬಾ ಸಂಶೋಧನೆ ನಡೆಸಿ ಪ್ರಕಟಿಸಿರುವ ಒಂದು ವರದಿಯ ಪ್ರಕಾರ ಜಯ್ ಷಾ 'ಟೆಂಪಲ್ ಎಂಟರ್‌ಪ್ರೈಸ್ ಪ್ರೈವೇಟ್ ಲಿಮಿಟೆಡ್' ಎನ್ನುವ ಖಾಸಗಿ ಕಂಪೆನಿಯ ಮಾಲಿಕನಾಗಿದ್ದರು. ಈ ಕಂಪೆನಿಯ ವರಮಾನ 2014–15ರಲ್ಲಿ ಕೇವಲ 50,000 ರೂಪಾಯಿ ಇದ್ದದ್ದು 2015–16ರಲ್ಲಿ ಅದರ ವಹಿವಾಟು 80.5 ಕೋಟಿ ರೂಪಾಯಿಗೇರಿತು, ಅಂದರೆ 16,000 ಪಟ್ಟು ಏರಿಕೆ. ಈ ಕಂಪೆನಿ ಒಂದು ಹಣಕಾಸು ಸೇವಾ ಸಂಸ್ಥೆಯಿಂದ 16.78 ಕೋಟಿ ರೂಪಾಯಿ ಭದ್ರತೆಯಿಲ್ಲದ (ಅನ್‌ಸೆಕ್ಯೂರ್ಡ್) ಸಾಲ ಪಡೆಯಿತು. ಆದರೆ 2016 ಅಕ್ಟೋಬರ್‌ನಲ್ಲಿ ಈ ಕಂಪೆನಿ ಇದ್ದಕ್ಕಿದ್ದಂತೆ ಮುಚ್ಚಿಹೋಯಿತು.

2015ರ ಜುಲೈನಲ್ಲಿ ಕುಸುಮ್ ಫಿನ್‌ಸರ್ವ್ ಪ್ರೈವೇಟ್ ಲಿಮಿಟೆಡ್ ಎಂಬ ಇನ್ನೊಂದು ಕಂಪೆನಿಯನ್ನು ಹುಟ್ಟು ಹಾಕಲಾಯಿತು, ಸ್ಟಾಕ್ ಮತ್ತು ಶೇರುಗಳು ಹಾಗೂ ಆಮದು–ರಫ್ತು ವ್ಯವಹಾರಕ್ಕೆಂದು. ಆದರೆ, ಪವನ ವಿದ್ಯುತ್ ಕ್ಷೇತ್ರದಲ್ಲಿ ವ್ಯವಹಾರ ನಡೆಸಲು ಈ ಕಂಪೆನಿ ನಂತರ ನಿರ್ಧರಿಸಿತು. ಈ ಕಂಪೆನಿ 7 ಕೋಟಿ ರೂಪಾಯಿ ಮೌಲ್ಯದ ಆಸ್ತಿಯನ್ನು ಜತೆಯೀಡು ಖಾತರಿ ಕೊಟ್ಟು ಒಂದು ಸಹಕಾರಿ ಬ್ಯಾಂಕ್‌ನಿಂದ 25 ಕೋಟಿ ರೂಪಾಯಿ ಸಾಲ ಪಡೆಯಿತು. ಹಾಗೆ ಅಡವಿಟ್ಟ ಆಸ್ತಿ ಪೈಕಿ ಬಿಜೆಪಿ ಅಧ್ಯಕ್ಷ ಅಮಿತ್ ಷಾರ ಐದು ಕೋಟಿ ರೂಪಾಯಿ ಮೌಲ್ಯದ ಒಂದು ಆಸ್ತಿಯೂ ಇದೆ. ಸಾರ್ವಜನಿಕ ಕ್ಷೇತ್ರದ ಸಂಸ್ಥೆಯಾದ 'ಭಾರತೀಯ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ಸಂಸ್ಥೆ'ಯಿಂದ ಈ ಕಂಪೆನಿ 2.1 ಮೆಗಾವ್ಯಾಟ್ ಪವನ ಚಕ್ರ ಯಂತ್ರ (ವಿಂಡ್‌ಮಿಲ್) ಸ್ಥಾಪನೆಗಾಗಿ 10.35 ಕೋಟಿ ರೂಪಾಯಿ ಸಾಲವನ್ನೂ ಪಡೆದಿದೆ.

ಖಾತರಿಯಿಲ್ಲದ ಸಾಲಗಳನ್ನು ಪಡೆದಿರುವುದು, ವಹಿವಾಟಿನಲ್ಲಿ ಹಠಾತ್ ಹಾಗೂ ನಾಟಕೀಯ ಹೆಚ್ಚಳ, ಅದರಲ್ಲೂ ಕೃಷಿ ಉತ್ಪನ್ನಗಳ ರಫ್ತು ವ್ಯವಹಾರದಲ್ಲಿ ಎಂದು ಹೇಳಿಕೊಂಡು, ಕಂಪೆನಿ ಹಠಾತ್ತನೆ ಮುಚ್ಚಿದ್ದು, ತೀರಾ ಹೊಸ ಕ್ಷೇತ್ರದಲ್ಲಿ ವ್ಯವಹಾರವನ್ನು ಹೊಸದಾಗಿ ಆರಂಭಿಸಿದ್ದು, ಅಲ್ಲದೆ ಸಾರ್ವಜನಿಕ ಕ್ಷೇತ್ರದ ಒಂದು ಸಂಸ್ಥೆಯಿಂದ ಹಣಕಾಸು ಸಾಲ ಪಡೆದಿದ್ದು– ಈ ರೀತಿಯಾಗಿ ಜಯ್ ಷಾ ವ್ಯಾಪಾರ ಚಟುವಟಿಕೆಗಳ ಬಗ್ಗೆ ಹತ್ತು ಹಲವು ಪ್ರಶ್ನೆಗಳು ಉದ್ಭವಿಸಿವೆ.

ಯಾರೂ ಈ ಸಂಗತಿಗಳನ್ನು ಇದುವರೆಗೆ ಪ್ರಶ್ನಿಸಿಲ್ಲವಾದ್ದರಿಂದ ರಫ್ತಿನ ಮೌಲ್ಯವನ್ನು ಹಿಗ್ಗಿಸಿ ಲೆಕ್ಕ ಹಾಕುವುದು (ಓವರ್ ಇನ್‌ವಾಯ್ಸಿಂಗ್), ಕಪ್ಪು ಹಣದ ಸೃಷ್ಟಿ ಮತ್ತು ಸರಕಾರಿ ಕೃಪಾಶೀರ್ವಾದಗಳ ಅನುಮಾನಗಳು ಹುಟ್ಟಿಕೊಂಡಿವೆ.



ವ್ಯಂಗ್ಯಚಿತ್ರ: ಅಧ್ವರ್ಯು, ಟೈಂಸ್ ಆಫ್ ಇಂಡಿಯ

ಇವುಗಳಲ್ಲಿ ವಿಶ್ಲೇಷಕರು ರಾಬರ್ಟ್ ವಾದ್ರಾ ವ್ಯವಹಾರಗಳ ಕೆಲವು ಅಂಶಗಳೊಂದಿಗೆ ಸಾಮ್ಯತೆಗಳಿರುವುದನ್ನು ಗಮನಿಸಿದ್ದಾರೆ. ಅಲ್ಲಿ ಕೂಡ ಅನ್‌ಸೆಕ್ಯೂರ್ಡ್ ಸಾಲ ಮತ್ತು ಸರಕಾರಿ ಕೃಪೆಯ ವಾಸನೆಯಿತ್ತು.

ಇದಕ್ಕೆ ಬಿಜೆಪಿ ಮತ್ತು ಮೋದಿ ಸರಕಾರ ನೀಡಿರುವ ಪ್ರತಿಕ್ರಿಯೆ ಕೂಡ ಯುಪಿಎ ಸರಕಾರ ಹಾಗೂ ಕಾಂಗ್ರೆಸ್ ಪಕ್ಷ ನೀಡಿದ್ದ ಪ್ರತಿಕ್ರಿಯೆಯಂತೇ ಇದೆ. ಜಯ್ ಷಾ ಒಬ್ಬ ಖಾಸಗಿ ವ್ಯಕ್ತಿಯಾದರೂ ಆತನನ್ನು ಸಮರ್ಥಿಸಲೆಂದೇ ರೇಲ್ವೆ ಸಚಿವ ಪಿಯೂಷ್ ಗೋಯಲ್ ಪತ್ರಿಕಾಗೋಷ್ಠಿ ನಡೆಸಿದ್ದಾರೆ! ತನ್ನ ಅಧ್ಯಕ್ಷನ ಪುತ್ರ ಯಾವುದೇ ತಪ್ಪು ಮಾಡಿಲ್ಲ ಎಂದು ಸಮರ್ಥಿಸಿಕೊಳ್ಳಲು ಬಿಜೆಪಿ ನಾಯಕತ್ವ ತನ್ನ ಪೂರ್ಣ ಬಲದೊಂದಿಗೆ ಕಣಕ್ಕಿಳಿದಿದೆ.

ಮೋದಿ ಸರಕಾರ ಸಿಬಿಐ, ಜಾರಿ ನಿರ್ದೇಶನಾಲಯ (ಇ.ಡಿ.) ಮತ್ತು ಆದಾಯ ತೆರಿಗೆ ಇಲಾಖೆಗಳಿಂದ ತನಿಖೆಗಳನ್ನು ನಡೆಸುವ ಮೂಲಕ ವಿವಿಧ ವಾಣಿಜ್ಯೋದ್ಯಮಿಗಳು ಹಾಗೂ ಪ್ರತಿಪಕ್ಷ ರಾಜಕಾರಣಿಗಳನ್ನು ಭ್ರಷ್ಟಾಚಾರ ಮತ್ತು ಕಪ್ಪುಹಣದ ಆರೋಪಗಳೊಂದಿಗೆ ಬೆನ್ನಟ್ಟುತ್ತಿರುವಾಗ ಜಯ್ ಷಾ ಪ್ರಕರಣದಲ್ಲಿ ಅದು ನಡೆದುಕೊಳ್ಳುತ್ತಿರುವ ರೀತಿ ತೀರಾ ತದ್ವಿರುದ್ಧವಾಗಿರುವುದು ಕಣ್ಣಿಗೆ ರಾಚುವಂತಿದೆ. ಸಚಿವರು ಮತ್ತು ಬಿಜೆಪಿ ನಾಯಕರು ಮಾತ್ರವೇ ಅಮಿತ್ ಷಾ ಪುತ್ರನ ರಕ್ಷಣೆಗೆ ಧಾವಿಸಿರುವುದಲ್ಲ, 'ದಿ ವೈರ್' ವಿರುದ್ಧ ಜಯ್ ಷಾ ಹೂಡಿರುವ ಮಾನನಷ್ಟ ಮೊಕದ್ದಮೆಯಲ್ಲಿ ಆತನ ಪರವಾಗಿ ವಾದಿಸಲು ಹೆಚ್ಚುವರಿ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾಗೆ ಸರಕಾರ ಅನುಮತಿ ನೀಡಿದೆ. ಈ ರೀತಿ ಎಲ್ಲ ನಿಯಮಗಳನ್ನು ಬಾಗಿಸಿ ಅನುಮತಿ ನೀಡಿರುವುದೇ ಕಾನೂನುಬಾಹಿರ. ಅದರಲ್ಲೂ 'ದಿ ವೈರ್' ವರದಿಯನ್ನು ಪ್ರಸಾರ ಮಾಡುವ ಎರಡು ದಿನಗಳ ಮುಂಚೆಯೇ ಈ ಅನುಮತಿ ನೀಡಲಾಗಿತ್ತು ಎನ್ನುವುದು ಗಮನಾರ್ಹ ಸಂಗತಿ.

ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿ ತಾವು ಹಿಂದಿನ ಯುಪಿಎ ಸರಕಾರದಂತಲ್ಲದೆ ತಮ್ಮ ಆಡಳಿತದಲ್ಲಿ ಯಾವುದೇ ಭ್ರಷ್ಟಾಚಾರ ನಡೆದಿಲ್ಲ ಎಂದು ಬಡಾಯಿ ಕೊಚ್ಚಿಕೊಳ್ಳುತ್ತಲೇ ಬಂದಿದ್ದಾರೆ. ಆದರೆ, ಜಯ್ ಷಾ ಪ್ರಕರಣವು ಬಿಜೆಪಿ ಒಳಗೊಂಡಿರುವ ಭ್ರಷ್ಟಾಚಾರ ಮತ್ತು ಲಂಚ ಪ್ರಕರಣಗಳ ಬೆಳೆಯುತ್ತಿರುವ ಪಟ್ಟಿಯಲ್ಲಿ ಒಂದಾಗಿದೆ ಅಷ್ಟೆ.

ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ಅನೇಕ ಭ್ರಷ್ಟಾಚಾರ ಹಗರಣಗಳು ನಡೆದಿವೆ. ಅತ್ಯಂತ ದೊಡ್ಡ ಹಾಗೂ ಸಾಂಸ್ಥೀಕೃತ ಹಗರಣವೆಂದರೆ ವ್ಯಾಪಂ ಹಗರಣ. ನೇಮಕಾತಿಗಾಗಿ ನಡೆದ ಪರೀಕ್ಷೆಗಳಲ್ಲಿ ಅನೇಕ ಬಿಜೆಪಿ ಮತ್ತು ಆರ್‌ಎಸ್‌ಎಸ್ ನಾಯಕರು ಒಳಗೊಂಡಿರುವುದು ಕಂಡುಬಂದಿದೆ ಹಾಗೂ ಸ್ವತಃ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರತ್ತವೇ ಆರೋಪದ ಬೆರಳು ತೋರಿಸಲಾಗುತ್ತಿದೆ.

ರಾಜಸ್ತಾನದಲ್ಲಿ 2015ರಲ್ಲಿ ಕಲ್ಲಿದ್ದಲು ಹಗರಣ ಬಯಲಿಗೆ ಬಂತು. ಕಲ್ಲಿದ್ದಲು ಗಣಿಗಾರಿಕೆಯ 653 ಲೀಸ್‌ಗಳನ್ನು ಅಕ್ರಮವಾಗಿ ಮಂಜೂರು ಮಾಡಿದ್ದರಿಂದ ರಾಜ್ಯದ ಬೊಕ್ಕಸಕ್ಕೆ 45ಸಾವಿರ ಕೋಟಿ ರೂಪಾಯಿ ನಷ್ಟವಾಗಿದೆ. ಈ ಹಗರಣದ ಪ್ರಮುಖ ಆರೋಪಿಯಾದ ರಾಜಸ್ತಾನ ಸರಕಾರದ ಗಣಿ ಖಾತೆಯ ಪ್ರಮುಖ ಕಾರ್ಯದರ್ಶಿ ಅಶೋಕ್ ಸಿಂಘ್ವಿಯನ್ನು ಬಂಧಿಸಲಾಗಿದೆ. ಆದರೆ ಹಗರಣದಲ್ಲಿ ಭಾಗಿಯಾದ ರಾಜಕಾರಣಿಗಳನ್ನು ರಕ್ಷಿಸಲಾಗಿದೆ.

ಮಹಾರಾಷ್ಟ್ರದ ಬಿಜೆಪಿ ಸರಕಾರದಲ್ಲಿ ಎರಡನೇ ಸ್ಥಾನದಲ್ಲಿದ್ದ ಏಕನಾಥ ಖಡ್ಸೆ ಒಂದು ಭ್ರಷ್ಟ ಭೂವ್ಯವಹಾರ ಬಯಲಾಗಿ ರಾಜಿನಾಮೆ ನೀಡಬೇಕಾಗಿ ಬಂದಿದೆ. ಇನ್ನೊಬ್ಬರು ಮಂತ್ರಿ, ಪಂಕಜಾ ಮೂಂಡೆ 206 ಕೋಟಿ ರೂ.ಗಳ ಅಕ್ರಮ ಕಾಂಟ್ರಾಕ್ಟುಗಳನ್ನು ಕೊಟ್ಟಿದ್ದಾರೆಂಬ ಗಂಭೀರ ಆರೋಪಗಳನ್ನು ಎದುರಿಸುತ್ತಿದ್ದಾರೆ.

ಅಸ್ಸಾಮ್‌ನ ತೇಜ್‌ಪುರ ಕ್ಷೇತ್ರವನ್ನು ಪ್ರತಿನಿಧಿಸುವ ಬಿಜೆಪಿ ಲೋಕಸಭೆ ಸದಸ್ಯ ಆರ್.ಪಿ. ಶರ್ಮಾ ಇತ್ತೀಚೆಗೆ ಒಂದು ಹಗರಣವನ್ನು ಬಯಲಿಗೆಳೆದಿದ್ದಾರೆ. ರಾಜ್ಯದ ಬಹುತೇಕ ಸಚಿವರು ಗುತ್ತಿಗೆಗಳನ್ನು ನೀಡಬೇಕಾದರೆ ಹತ್ತು ಶೇಕಡಾ ಕಮಿಷನ್ ಪಡೆಯುತ್ತಾರೆ ಎಂಬ ಅಂಶವನ್ನು ಕುಟುಕು ಕಾರ್ಯಾಚರಣೆ ಮೂಲಕ ಅವರು ಬಹಿರಂಗಪಡಿಸಿದ್ದಾರೆ. ಸ್ವತಃ ತಮ್ಮ ಮಗನಿಗೆ ಒಂದು ಗುತ್ತಿಗೆ ನೀಡಲು ನೀರಾವರಿ ಸಚಿವ ರಣಜಿತ್ ದತ್ತಾ 87 ಸಾವಿರ ರೂಪಾಯಿ ಕಮಿಷನ್ ಪಡೆದಿರುವುದಾಗಿಯೂ ಈ ಬಿಜೆಪಿ ಸಂಸದ ಆರೋಪಿಸಿದ್ದಾರೆ.

ಆದರೆ ಇಷ್ಟೆಲ್ಲಾ ಆರೋಪಗಳು ಬರುತ್ತಿದ್ದರೂ ಯಾವುದೇ ಅವ್ಯವಹಾರ ಅಥವಾ ಲಂಚ ಪ್ರಕರಣ ನಡೆದಿಲ್ಲ ಎಂದು ಬಿಜೆಪಿ ಸಮರ್ಥಿಸಿ ಕೊಳ್ಳುತ್ತಿದೆ. ಜಯ್ ಷಾ ವ್ಯವಹಾರಕ್ಕೇ ಮತ್ತೆ ಬರುವುದಾದರೆ, ಆತನ ಕಂಪೆನಿಗಳ ವ್ಯವಹಾರಗಳ ಬಗ್ಗೆ ಮೋದಿ ಸರಕಾರ ತನಿಖೆ ನಡೆಸಬೇಕು. ಸಿಬಿಐ ಮತ್ತು ಇ.ಡಿ.ಗಳನ್ನು ಕೆಲವೇ ಆಯ್ದ ಆರ್ಥಿಕ ಅಪರಾಧಿಗಳನನು ಹಿಡಿದು ಹಾಕಲಷ್ಟೇ ಬಳಸಲಾಗುತ್ತಿಲ್ಲ ಎನ್ನುವುದನ್ನು ಸಾಬೀತು ಪಡಿಸಲಾದರೂ ಈ ಸಂಸ್ಥೆಗಳನ್ನು ಜಯ್ ಷಾ ಪ್ರಕರಣದಲ್ಲಿ ಕಾರ್ಯಾಚರಣೆಗೆ ಇಳಿಸಬೇಕು.

ಅನು: ವಿಶ್ವ



ವ್ಯಂಗ್ಯ ಚಿತ್ರ ಕೃಪೆ: ಕುಟ್ಟಿಸ್ಕೋಪ್@ ಜಾಸೂಸ್‌ಕುಟ್ಟಿ

"ಆತ ತನ್ನ ಮಗುವಿಗೆ ಹಸುವಿನ ಹಾಲು ಮಾತ್ರ ಕೊಡುತ್ತಾನೆ. ನೋಡಿ ಹೇಗೆ ಆತ ಸ್ಟಾರ್ಟ್ ಅಪ್ ಇಂಡಿಯಾದ ಮೊಗವೇ ಆಗಿಬಿಟ್ಟಿದ್ದಾನೆ!"



ಕೇರಳದ ಪಟ್ಟಣಂತಿಟ್ಟ ಜಿಲ್ಲೆಯ ವಲಂಜಟ್ಟೋಂನ ಶಿವ ದೇವಾಲಯದ ಗರ್ಭಗುಡಿಯಲ್ಲಿ 22 ವರ್ಷ ಪ್ರಾಯದ ಯದು ಕೃಷ್ಣನ್ ಅರ್ಚಕ ಕಾರ್ಯ ಆರಂಭಿಸುತ್ತಿದ್ದಂತೆಯೇ, ಕೇರಳದ ಪ್ರಮುಖ ದೇವಾಲಯವೊಂದು ಒಬ್ಬ ದಲಿತ ಅರ್ಚಕನೆಂಬ ಐತಿಹಾಸಿಕ ಪ್ರಥಮವಾಗಿ ಅದು ದಾಖಲಾಗಿದೆ.

ಆರು ದಲಿತ ಅರ್ಚಕರು, ಅವರೊಂದಿಗೆ 30 ಇತರ ಬ್ರಾಹ್ಮಣೇತರ ಅರ್ಚಕರನ್ನು ನೇಮಿಸಿಕೊಳ್ಳಲು ತಿರುವಾಂಕೂರು ದೇವಸ್ಥಾನ ನೇಮಕ ಮಂಡಳಿ (ಟಿಡಿಆರ್‌ಬಿ) ನಿರ್ಧರಿಸಿತು. 1200ಕ್ಕೂ ಹೆಚ್ಚು ದೇವಸ್ಥಾನಗಳನ್ನು ನಿರ್ವಹಿಸುವ ಈ ಮಂಡಳಿ, ರಾಜ್ಯ ಸರಕಾರದ ಉಸ್ತುವಾರಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಹಿಂದುಳಿದ ವರ್ಗಗಳು ಮತ್ತು ದಲಿತರಿಗೆ ಇದೇ ಮೊದಲ ಬಾರಿಗೆ ಮೀಸಲಾತಿಯನ್ನು ಜಾರಿ ಮಾಡಲಾಗಿದೆ.

ಇದು ಬ್ರಾಹ್ಮಣವಾದಿ ಪರಿಗಣನೆಗಳನ್ನು ಬದಲಿಸಿ ಜಾತಿ–ವಿರೋಧಿ ಪ್ರಜಾಸತ್ತಾತ್ಮಕ ಧೋರಣೆಗಳನ್ನು ತಂದು ಅರ್ಚಕ ಕಾರ್ಯಗಳಲ್ಲಿ ಎಲ್ಲಾ ಹಿಂದೂ ನಂಬಿಕಸ್ಥರಿಗೆ ಸೂಕ್ತ ಪಾಲನ್ನು ಖಾತರಿಪಡಿಸಲು ಕೈಗೊಂಡಿರುವ ಒಂದು ಪ್ರಮುಖ ಹೆಜ್ಜೆ. ಆರ್‌ಎಸ್‌ಎಸ್ ವಿಭಾಗಗಳು ಹೊರತುಪಡಿಸಿ ಕೇರಳದ ಎಲ್ಲ ವಿಭಾಗಗಳು ಇದನ್ನು ಸ್ವಾಗತಿಸಿವೆ.

ಚೆಟ್ಟಿಕುಲಂಗರ ದೇವಸ್ಥಾನಕ್ಕೆ ಮಂಡಳಿ ನೇಮಿಸಿದ ಓಬಿಸಿ ಈಳವ ಜಾತಿಯ ಅರ್ಚಕ ತನ್ನ ಜವಾಬ್ದಾರಿಯನ್ನು ವಹಿಸಿಕೊಳ್ಳಲು ದೇವಸ್ಥಾನ ಸಮಿತಿಯ ಕೆಲವು ಸದಸ್ಯರು ಅಡ್ಡಿಪಡಿಸಿದ ಒಂದು ಅಸಹ್ಯಕರ ಘಟನೆಯೂ ನಡೆದಿದೆ. ಇದು ಎಲ್‌ಡಿಎಫ್ ಸರಕಾರದ ತೀವ್ರ ಗಾಮಿ ಕ್ರಮಕ್ಕೆ ದೇಶದಾದ್ಯಂತ ವ್ಯಾಪಕ ಮೆಚ್ಚುಗೆ ವ್ಯಕ್ತವಾಗುತ್ತಿರುವುದಕ್ಕೆ ವ್ಯತಿರಿಕ್ತವಾದ ಘಟನೆ. ಸಾಮಾಜಿಕ ನ್ಯಾಯ ಖಾತರಿಪಡಿಸುವಲ್ಲಿ ಹಾಗೂ ಜಾತಿ ತಾರತಮ್ಯ ಅಂತ್ಯಗೊಳಿಸುವಲ್ಲಿ ಮುಂಚೂಣಿಯಲ್ಲಿ ತಾನು ಇರುವುದನ್ನು ಕೇರಳ ಮತ್ತೊಮ್ಮೆ ರುಜುವಾತು ಪಡಿಸಿದೆ.

ಸಮಾಜವಾದಿ ಕ್ರಾಂತಿ ಶತಮಾನೋತ್ಸವ ಸಮಿತಿ ಮತ್ತು ಸಮುದಾಯ ಕರ್ನಾಟಕ ರಾಜ್ಯ ಸಮಿತಿಗಳ ಸಹಭಾಗಿತ್ವದಿಂದ 2017 ಅಕ್ಟೋಬರ್ 8 ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ವಿಚಾರ ಸಂಕಿರಣ, ಕವಿಗೋಷ್ಠಿ ಹಾಗೂ ಮೈಸೂರು ಸಮುದಾಯ ತಂಡದಿಂದ ಬ್ರೆಕ್ಟ್‌ನ 'ತಾಯಿ' ನಾಟಕದ ಪ್ರದರ್ಶನಗಳು ನಡೆದುವು. ಆ ಕಾರ್ಯಕ್ರಮದ ಒಂದು ವರದಿ.

ಸಮಾಜವಾದ ಮತ್ತು ಕನ್ನಡ ಸಾಹಿತ್ಯ ವಿಚಾರ ಸಂಕಿರಣದಲ್ಲಿ ವಿಶ್ಲೇಷಣೆ

ವಾಸುದೇವ ಉಚ್ಚಿಲ

ಕನ್ನಡ ಸಾಹಿತ್ಯಕ್ಕೆ ಕವಿರಾಜ ಮಾರ್ಗದಿಂದ ಆರಂಭಿಸಿದರೂ 1200 ವರ್ಷಗಳ ಚರಿತ್ರೆ ಇದೆ. ಸಮಾಜವಾದವಾದರೋ 20ನೇ ಶತಮಾನದಿಂದ ಬಳಕೆಯಲ್ಲಿರುವ ಪದ. 20ನೇ ಶತಮಾನದ ಸಮಾಜವಾದದ ಪರಿಕಲ್ಪನೆಯನ್ನು ಕ್ರಿ.ಶ.8ನೇ ಶತಮಾನದಿಂದಲೇ ಆರಂಭಗೊಂಡ ಕನ್ನಡ ಸಾಹಿತ್ಯದ ಅಧ್ಯಯನಕ್ಕೆ ಅನ್ವಯಿಸುವ ಬಗೆ ಹೇಗೆ? ಆಧುನಿಕ ಪೂರ್ವ ಕನ್ನಡ ಸಾಹಿತ್ಯ, ಕನ್ನಡ ಜನಪದ ಸಾಹಿತ್ಯ ಇವುಗಳನ್ನು ವಿಚಾರ ಸಂಕಿರಣದ ವಿಚಾರ ಮಂಡನೆಯಲ್ಲಿ ಚರ್ಚಿಸುವಾಗ, ಸಮಾಜವಾದದ ಯಾವ ನೆಲೆಗಳಿಂದ ಅವುಗಳನ್ನು ನೋಡಬೇಕಾಗಿದೆ ಎಂಬ ಪ್ರಶ್ನೆಯೂ ಇದೆ. ಜಾತಿ ಅಸಮಾನತೆಯ ಪ್ರಶ್ನೆಗಳನ್ನು, ಜಾತಿ ಶೋಷಣೆಯ ಪ್ರಶ್ನೆಗಳನ್ನು ರಾಜರುಗಳ ದಮನಕಾರಿ ಪ್ರಭುತ್ವವನ್ನು ವಿಶೇಷವಾಗಿ ಸಾಮಾಜಿಕ ಹಾಗೂ ಜಾತಿ ನೆಲೆಯ ಅಸಮಾನತೆಗಳನ್ನು ಪ್ರಶ್ನಿಸುವ ಸಮಾಜವಾದಿ ನೆಲೆಗಳನ್ನು ನಾವು ಬಹುಶ: ಪಂಪ, ವಚನಕಾರರು, ರಾಘವಾಂಕ, ದಾಸರು, ಸರ್ವಜ್ಞ ಮೊದಲಾದವರ ಕಾವ್ಯಗಳಲ್ಲಿ ವಿಶೇಷವಾಗಿ ಗುರುತಿಸಬಹುದಾಗಿದೆ. ವಚನ ಸಾಹಿತ್ಯವು ಮೇಲುಜಾತಿಯ ಶ್ರೇಷ್ಠತೆಯನ್ನು ಸಕಾರಣವಾಗಿಯೇ ತೀವ್ರವಾದ ಸವಾಲಿಗೆ ಒಡ್ಡಿದೆ. ಇವೆಲ್ಲ ಸಮಾಜವಾದ, ಸಮತಾವಾದದ ಪರಿಕಲ್ಪನೆಗಳು ಜಗತ್ತಿನಲ್ಲಿ ಪ್ರಚಾರ-ಕ್ಕೆ ಬರುವ ಪೂರ್ವದಲ್ಲಿ ಸಂಭವಿಸಿದ ಧೀಮಂತ ವಿದ್ಯಾಮಾನಗಳು. ಸಮಾಜವಾದ, ಕಮ್ಯೂನಿಸಮ್ ಪರಿಕಲ್ಪನೆಗಳು ಬೆಳೆದು, 1919ರ ರಶ್ಯಾದ ಅಕ್ಟೋಬರ್ ಸಮಾಜವಾದಿ ಕ್ರಾಂತಿಯು ಜಗತ್ತಿನ ರಾಜಕೀಯ ವಲಯಗಳಲ್ಲಿ ಪ್ರಭಾವವನ್ನು ಬೀರಿ ಜಗತ್ತಿನ ನಕಾಶೆಯನ್ನು ಬದಲಾಯಿಸುತ್ತಿರುವ ಸಂದರ್ಭದಲ್ಲಿ ಸಮಾಜವಾದಿ ಚಿಂತನೆಯು ಎಲ್ಲಾ ದೇಶದ ಸಾಹಿತ್ಯದ ಮೇಲೂ ಪ್ರಭಾವವನ್ನು ಬೀರಿತು. ಕನ್ನಡ ಸಾಹಿತಿಗಳೂ ಅದರಿಂದ ಪ್ರಭಾವಿತರಾದುದು ಕಂಡು ಬರುತ್ತದೆ. ಕುವೆಂಪು, ಬೇಂದ್ರೆ ಬಳಿಕ ಕನ್ನಡ ಲೇಖಕರಲ್ಲಿ ಮೂಡಿದ ಪ್ರಗತಿಶೀಲ ಚಳುವಳಿ, ಮುಂದಿನ ದಿನಗಳ ಬಂಡಾಯ ದಲಿತ ಸಮುದಾಯ ಚಳುವಳಿಗಳ ಹಿನ್ನೆಲೆಯಲ್ಲಿ ಸಮಾಜವಾದಿ ಕ್ರಾಂತಿಯ ಶತಮಾನೋತ್ಸವದ ಸಂದರ್ಭದಲ್ಲಿ ಸಮಾಜವಾದ ಮತ್ತು ಕನ್ನಡ ಸಾಹಿತ್ಯ ಎಂಬ ವಿಚಾರ ಸಂಕಿರಣವನ್ನು ಆಯೋಜಿಸಿದ್ದು ಅರ್ಥಪೂರ್ಣವಾಗಿದೆ.



ಡಾ.ಹೆಚ್.ಎಸ್.ರಾಘವೇಂದ್ರರಾವ್



ಡಾ.ಸಿದ್ಧನಗೌಡ ಪಾಟೀಲ



ಡಾ.ವಸುಂಧರಾ ಭೂಪತಿ, ಪ್ರೊ.ಕೆ.ಮರುಳಸಿದ್ಧಪ್ಪ, ವಾಸುದೇವ ಉಚ್ಚಿಲ್

ಸಮಾನತೆಯ ಆಶಯಗಳು ಒಂದುಗೂಡಬೇಕು:

ಪ್ರೊ.ಕೆ. ಮರುಳಸಿದ್ಧಪ್ಪ

ವಿಚಾರ ಸಂಕಿರಣವನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷ ಪ್ರೊ.ಕೆ.ಮರುಳಸಿದ್ದಪ್ಪ ಉದ್ಘಾಟಿಸಿದರು. 20ನೇ ಶತಮಾನದಲ್ಲಿ ಜಗತ್ತಿನ ಮೂರನೇ ಒಂದು ಭಾಗದಷ್ಟು ದೇಶಗಲ್ಲಿ ಸಮಾಜವಾದವು ಬೇರು ಬಿಟ್ಟಿತ್ತು. ಆದರೆ ಅಷ್ಟೇ ಕ್ಷಿಪ್ರವಾಗಿ ತನ್ನ ಅಸ್ತಿತ್ವ ಕಳೆದುಕೊಂಡು ಇಂದು ಜಗತ್ತಿನ ಐದರಲ್ಲೊಂದು ಭಾಗಕ್ಕೆ ಸೀಮಿತವಾಗಿದೆ. ಸಮಾಜವಾದವು ಬಡವರ ಮತ್ತು ಶ್ರಮಿಕರ ಪರವಾಗಿದ್ದುದು, ಸಾಮ್ರಾಜ್ಯಶಾಹಿಯ ಕುತಂತ್ರದಿಂದ ಮತ್ತು ಕೆಲವು ಆಂತರಿಕ ಕಾರಣಗಳಿಂದ ಅಸ್ಥಿರವಾಗುತ್ತಾ ಹೋಯಿತು- ಎಂದವರು ಹೇಳಿದರು.

ದೇಶ ಇಂದು ಸಂದಿಗ್ಧ ಸ್ಥಿತಿಯಲ್ಲಿದೆ. ದೇಶವನ್ನು ಗಂಡಾಂತರದಿಂದ ಪಾರು ಮಾಡಲು ಸಮಾಜವಾದಿಗಳು ನಾಯಕತ್ವ ವಹಿಸಿಕೊಳ್ಳಬೇಕು. ಪ್ರಗತಿಪರ ಚಳುವಳಿಗಳು, ವಿಚಾರಗಳು, ಸಿದ್ಧಾಂತಗಳು ಹಾಗೂ ಗುಂಪುಗಳ ನಡುವೆ ಹೊಂದಾಣಿಕೆ ಮೂಡಿಸಿ ಒಗ್ಗೂಡಿಸುವ ಗುರುತರ ಜವಾಬ್ದಾರಿಯನ್ನು ಸಮಾಜವಾದಿಗಳು ವಹಿಸಿಕೊಳ್ಳಬೇಕು. ನಮ್ಮ ದಾರಿಗಳು ಬೇರೆ ಬೇರೆ ಇದ್ದರೂ ಮುಂದಿರುವ ಗುರಿ ಫ್ಯಾಸಿಸ್ಟ್ ಶಕ್ತಿಗಳನ್ನು ಕೋಮುವಾದಿ ಶಕ್ತಿಗಳನ್ನು ಪ್ರಜಾಪ್ರಭುತ್ವ ತತ್ವಕ್ಕೆ ಅನುಸಾರವಾಗಿ ಸೋಲಿಸುವುದೇ ಆಗಿದೆ. ಈ ನಿಟ್ಟಿನಲ್ಲಿ ಎಲ್ಲಾ ಪ್ರಗತಿಪರ ಶಕ್ತಿಗಳು ಒಟ್ಟುಗೂಡಿಸಲು ಪ್ರೊ.ಕೆ.ಮರುಳಸಿದ್ಧಪ್ಪ ಕರೆ ನೀಡಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷೆ ಡಾ.ವಸುಂಧರಾ ಭೂಪತಿ ಮಾತನಾಡಿ, ನಮ್ಮ ಹಕ್ಕುಗಳನ್ನು ಪಡೆಯುವ ಅಭಿಲಾಷೆಯನ್ನು ಪ್ರೇರೇಪಿಸಿದ್ದೇ ಸಮಾಜವಾದ. ಕುವೆಂಪು, ತೇಜಸ್ವಿ, ದೇವನೂರು ಮಹಾದೇವ ಹೀಗೆ ಹಲವಾರು ಸಾಹಿತಿಗಳ ಸಾಹಿತ್ಯದಲ್ಲೂ ಸಮಾಜವಾದವಿದೆ. ಪ್ರಗತಿಶೀಲ ಸಾಹಿತ್ಯ ಚಳುವಳಿ, ದಲಿತ ಬಂಡಾಯ ಚಳುವಳಿಗಳೂ ಕನ್ನಡ ಸಾಹಿತ್ಯದಲ್ಲಿ ಸಮಾಜವಾದದ ಗಾಢ ಪ್ರಭಾವದಿಂದಲೇ ಮೂಡಿ ಬಂತು ಎಂಬುದನ್ನು ಅವರು ವಿವರಿಸಿದರು.

ಕಳೆದ ಕೆಲವು ವರ್ಷಗಳಿಂದ ದೇಶದಲ್ಲಿ ವಿಚಾರವಾದಿಗಳ ಹತ್ಯೆಗಳು ಸರಣಿಯಾಗಿ ನಡೆದಿವೆ. ಡಾ.ನರೇಂದ್ರ ದಾಬೋಲ್ಕರ್, ಗೋವಿಂದ ಪನ್ಸಾರೆ, ಕನ್ನಡ ವಿದ್ವಾಂಸ ಪ್ರೊ.ಎಂ.ಎಂ.ಕಲಬುರ್ಗಿ, ತೀರಾ ಈಚೆಗೆ ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆಯಾಗಿದ್ದಾರೆ. ಕೊಲೆಯ ಹಿಂದಿನ ಶಕ್ತಿ ಬೆಳಕಿಗೆ ಬರುತ್ತಿಲ್ಲ. ಈಗ ಗಾಂಧಿ ಹತ್ಯೆಯ ಬಗ್ಗೆ ಹೊಸ ತಗಾದೆ ಹುಟ್ಟು ಹಾಕುತ್ತಿದ್ದಾರೆ. ಇದು ಎಲ್ಲಿಗೆ ಹೋಗಿ ಮುಟ್ಟುತ್ತದೆಯೋ ಗೊತ್ತಿಲ್ಲ. ಕೋಮುವಾದ ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ ಬಹುದೊಡ್ಡ ಚಳುವಳಿಗೆ ಎಲ್ಲರೂ ಒಗ್ಗೂಡಬೇಕಾದ ಅನಿವಾರ್ಯ ಎದುರಾಗಿದೆ ಎಂದು ಅವರು ತಿಳಿಸಿದರು.

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಸಮುದಾಯ ಕರ್ನಾಟಕದ ಉಪಾಧ್ಯಕ್ಷ ವಾಸುದೇವ ಉಚ್ಚಿಲ ವಹಿಸಿದ್ದರು. ಸಮಾಜವಾದಿ ಕ್ರಾಂತಿ ಶತಮಾನೋತ್ಸವ ಸಮಿತಿಯ ಕಾರ್ಯದರ್ಶಿ ಕೆ.ಎನ್. ಉಮೇಶ್ ಪ್ರಾಸ್ತಾವಿಕ ಮಾತುಗಳನ್ನಾಡಿದರು.

ವಚನ ಚಳುವಳಿ ಮೊದಲ ಸಮಾಜವಾದಿ ಚಳುವಳಿ ಅಲ್ಲವೇ?

'ಈ ವಿಚಾರಗೋಷ್ಠಿಗೆ ಪೂರ್ವಭಾವಿಯಾಗಿ ಕೆ.ಪ್ರಕಾಶ್ ಅವರು ಸಮಾಜವಾದ, ಪರಿಕಲ್ಪನೆ ಮತ್ತು ಪರಿಭಾಷೆಗಳ ಕುರಿತು ಮಾತನಾಡಿದರು. ಸಮಾಜವಾದಿ ಎಂಬ ಪರಿಭಾಷೆಯು ಆಧುನಿಕ ಕಾಲದ್ದು. ಆ ಸಮಾಜವಾದಿ ಪರಿಕಲ್ಪನೆಗಳೂ 19ನೇಯ ಮತ್ತು 20ನೇಯ ಶತಮಾನಗಳಲ್ಲಿ ಹಲವು ನೆಲೆಗಳಲ್ಲಿ ಮಂಡಿತವಾಗಿವೆ. ಮತ್ತು ಆ ನೆಲೆಗಳ ಆಧಾರವಾಗಿ ರಾಜಕೀಯ ಹಾಗೂ ರಾಷ್ಟ್ರ ನಿರ್ಮಾಣದಲ್ಲೂ ತೊಡಗಿವೆ. ಭಾರತದಲ್ಲೂ ಗಾಂಧೀ, ನೆಹರೂ, ಜಯಪ್ರಕಾಶ ನಾರಾಯಣ, ಲೋಹಿಯಾ, ನರೇಂದ್ರದೇವ, (ಕೊನೆಗೆ ಸಂಘ ಪರಿವಾರ ಸಹ) ತಮ್ಮದೇ ಸಮಾಜವಾದಿ ಪರಿಕಲ್ಪನೆ ಮುಂದಿಟ್ಟಿದ್ದಾರೆ. ಆದರೆ ಸಮಾಜವಾದಿ ಕ್ರಾಂತಿಯ ಶತಮಾನೋತ್ಸವ ಆಚರಿಸುತ್ತಿರುವ ಸಂದರ್ಭದಲ್ಲಿ ರಶ್ಯಾದ 1917ರ ಅಕ್ಟೋಬರ್ ಕ್ರಾಂತಿಗೆ ಸೈದ್ಧಾಂತಿಕ ನೆಲೆಯಾಗಿದ್ದ ವೈಜ್ಞಾನಿಕ ಸಮಾಜವಾದವನ್ನು ನಾವು ಪರಿಗಣಿಸುತ್ತೇವೆ. ಪ್ರಕೃತಿಯ ವಿದ್ಯಮಾನಗಳನ್ನು ವೈಜ್ಞಾನಿಕವಾಗಿ ನೋಡುವಂತೆ ಮನುಷ್ಯ ಸಮಾಜದ ಬೆಳವಣಿಗೆಯನ್ನು ವೈಜ್ಞಾನಿಕವಾಗಿ ನೋಡುವುದು, ಅದರಲ್ಲಿ ಬಂಡವಾಳಶಾಹಿ ವಿಕಾಸವಾದ ವಿಧಾನದ ವಿಶ್ಲೇಷಣೆಯ ಆಧಾರದ ಮೇಲೆ ಮುಂಬರುವ ವ್ಯವಸ್ಥೆಯನ್ನು ಮುಂಗಾಣುವುದು ಅದಕ್ಕಾಗಿ ಅಣಿ ನೆರೆಸುವುದು ವೈಜ್ಞಾನಿಕ ಸಮಾಜವಾದದ ಮೂಲ ತಳಹದಿ. ಎಲ್ಲಾ ಕಾಲದಲ್ಲಿಯೂ ಸಾಹಿತ್ಯದಲ್ಲಿ ಪ್ರತಿಪಾದಿಸಲಾದ ಸಮಾನತೆಯ ಆಶಯಗಳು ಮತ್ತು 20ನೇ ಶತಮಾನದಲ್ಲಿ ಸಾಹಿತ್ಯದ ಮೇಲೆ ಸಮಾಜವಾದದ ಪ್ರಭಾವದ ಬೇರೆ ಬೇರೆ ಎಂದವರು ವಿವರಿಸಿದರು.

ನವೋದಯ ಸಾಹಿತ್ಯ ವೈಜ್ಞಾನಿಕ ಸಮಾಜವಾದದಿಂದ ಪ್ರಭಾವಿತವಾದರೂ ಅದನ್ನು ಆಳದಲ್ಲಿ ಅಂಗೀಕರಿಸಿ ನಡೆಯಲಿಲ್ಲ. ನಿಸರ್ಗ ಸಂಪತ್ತನ್ನು ಮಾನವ ಸಂಪತ್ತನ್ನು ತೀವ್ರವಾಗಿ ಸುಲಿಗೆ ಮಾಡಲಾಗುತ್ತಿದೆ ಎಂಬ ಅರಿವಿನಿಂದ ಸಮಾಜವಾದಿ ಎನಿಸಿಕೊಂಡ ಬರಹಗಾರ ಕೃತಿ ರಚಿಸುತ್ತಾನೆ. ಪ್ರಗತಿಶೀಲ ಪಂಥದಲ್ಲಿ ಇದು ಸ್ವಲ್ಪ ಮಟ್ಟಿಗೆ ಸಾಧ್ಯವಾಯಿತು. ಬಂಡಾಯ ಚಳುವಳಿಯ ಸಂದರ್ಭದಲ್ಲಿ ಇನ್ನಷ್ಟು ತೀವ್ರತೆಯಿಂದ ಕಾಣಿಸಿಕೊಂಡಿತು. ಆಧುನಿಕ ಸಂದರ್ಭದಲ್ಲಿ ಬಂಡವಾಳಶಾಹಿಯೇ ಎಲ್ಲ ಅಸಮಾನತೆಯ ಮೂಲ ಎಂದು ಅರಿತು, ಬಂಡವಾಳಶಾಹಿಯನ್ನು ವಿರೋಧಿಸುವ ಸಮಾನತೆಯ ಆಶಯವನ್ನು ಸಾಹಿತ್ಯ ಗುರುತಿಸಬೇಕಿದೆ ಎಂದು ಸ್ಪಷ್ಟೀಕರಿಸಿದ ಕೆ.ಪ್ರಕಾಶ್, ಈ ದೃಷ್ಟಿಯಿಂದ ಗಾಂಧೀ ಸಮಾಜವಾದಿ, ಲೋಹಿಯಾ ಸಮಾಜವಾದ, ನೆಹರೂ ಸಮಾಜವಾದ ಎಲ್ಲವೂ ಬಂಡವಾಳಶಾಹಿಯೊಂದಿಗೆ ಇದ್ದು-ಕೊಂಡೇ ಸಮಾಜಸುಧಾರಣೆ ಮಾಡಬಯಸುತ್ತಿರುವದರಿಂದ, ಅವುಗಳು ಬಂಡವಾಳಶಾಹಿಯೇ ಸೃಷ್ಟಿ ಮಾಡಿದ ಸಮಾಜವಾದಗಳು ಎಂದು ವಿವರಿಸಿದರು.

ಡಾ.ರಂಗಾರೆಡ್ಡಿ ಕೋಡಿರಾಂಪುರ ಅವರು ಕನ್ನಡ ಜನಪದ ಸಾಹಿತ್ಯ ಯಾವ ಸಮಾಜವಾದೀ ನೆಲೆಯಲ್ಲಿ ಸಮಾನತೆಯ ಆಶಯಗಳನ್ನು ಅನುಸಂಧಾನ ಮಾಡುತ್ತಿದೆ ಎಂಬುದರ ವಿಶ್ಲೇಷಣೆ ನಡೆಸಿದರು. ಜನಪದ ಸಾಹಿತ್ಯ ದುಡಿಮೆಗೆ ಸಂಬಂಧಪಟ್ಟದ್ದು. ಅಕ್ಷರ ವಂಚಿತರ ಸಾಹಿತ್ಯ, ಇದು ಅಕ್ಷರಸ್ಥ ಸಾಹಿತ್ಯಕ್ಕೆ ಪರ್ಯಾಯವಾದುದು. ಜನಪದ ಕಥನಗಳ ಕೃತಿಕಾರರು ತಮ್ಮ ಕೃತಿಗಳಲ್ಲಿ ಸಾಮಾಜಿಕವಾಗಿ ದುರ್ಬಲರೆನಿಸಿಕೊಂಡವರನ್ನು ಗೆಲ್ಲಿಸುತ್ತಾರೆ. ಬಡವರಿಗೆ, ತಬ್ಬಲಿಗಳಿಗೆ, ದುರ್ಬಲರಿಗೆ ಶಕ್ತಿ ಕೊಡುವ ಆಶಯಗಳು ಜನಪದದಲ್ಲಿದೆ. ಜನಪದ ಸಾಹಿತ್ಯವು ಸಮಾಜವಾದಿ ಚಿಂತನೆಯಿಂದ ಪ್ರಭಾವಿತವಾದುದಲ್ಲ, ಆದರೆ ಶ್ರೀಮಂತಿಕೆಯನ್ನು ತಿರಸ್ಕರಿಸುವ ಸಮಾಜವಾದಿ ಆಶಯಗಳಿವೆ. ಸಾಮೂಹಿಕ ದುಡಿಮೆ, ಸಮಾನ ವಿತರಣೆಯ ಆಶಯಗಳು ಅವುಗಳಲ್ಲಿವೆ. ರಾಜಾಡಳಿತವನ್ನು ತಿರಸ್ಕರಿಸುವ ಆಶಯವೂ ಇರುತ್ತಿದೆ. ಹಾಲಕ್ಕಿ ಒಕ್ಕಲ ಜನಪದ ಕಥೆಯೊಂದರಲ್ಲಿ ಆತನನ್ನು ಗೌರವಿಸುವ ಉದಾಹರಣೆಯೊಂದಿಗೆ ಅವರು ಪ್ರೊ.ರಂಗಾರೆಡ್ಡಿಯವರು ತಮ್ಮ ವಿಚಾರವನ್ನು ಸ್ಪಷ್ಟೀಕರಿಸಿದರು.

ಡಾ.ಎಂ.ಎಸ್. ಆಶಾದೇವಿಯವರು 'ಆಧುನಿಕ ಪೂರ್ವ ಕನ್ನಡ ಸಾಹಿತ್ಯ ಮತ್ತು ಸಮಾನತೆಯ ಆಶಯಗಳು'

ಪುಟ 10 ಕ್ಕೆ



ಡಾ.ವೈ.ಬಿ.ಹಿಮ್ಮಡಿ



ಪ್ರೊ. ರಂಗಾರೆಡ್ಡಿ



ಡಾ.ಎಂ.ಎಸ್. ಆಶಾದೇವಿ



ಕೆ. ಪ್ರಕಾಶ್

ಅಖಿಲ ಭಾರತ ಕಿಸಾನ್ ಸಭಾ (AIKS) ನ 34ನೇ ಅಖಿಲ ಭಾರತ ಸಮ್ಮೇಳನ 2017 ಆಕ್ಟೋಬರ್ 3 ರಿಂದ 6 ರ ವರೆಗೆ ನಡೆದಿದೆ. ಸಮ್ಮೇಳನದ ರ್‍ಯಾಲಿ ಮತ್ತು ಉದ್ಘಾಟನಾ ಸಮಾರಂಭದ ಬಗ್ಗೆ ಕಳೆದ ವಾರ ವರದಿ ಪ್ರಕಟವಾಗಿತ್ತು. ಈ ವಾರ ಸಮ್ಮೇಳನದಲ್ಲಿ ಮಂಡಿಸಲಾದ ವರದಿ, ಚರ್ಚೆಗಳ ಸಾರವನ್ನು ರೈತ ಸಂಘದ ಕಾರ್ಯಕರ್ತರು ಸದಸ್ಯರು ಹಾಗೂ ರೈತ ಚಳುವಳಿ ಆಸಕ್ತರಿಗಾಗಿ, ಸಮ್ಮೇಳನದಲ್ಲಿ ಪ್ರತಿನಿಧಿಯಾಗಿ ಭಾಗವಹಿಸಿದ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಸದಸ್ಯ ಟಿ. ಯಶವಂತ ಬರೆದಿದ್ದಾರೆ.



ಕೃಷಿ ಬಿಕ್ಕಟ್ಟು ಎದುರಿಸಲು ಐಕ್ಯ ಹೋರಾಟ ಕಿಸಾನ್ ಸಭಾ 34ನೇ ಸಮ್ಮೇಳನದ ಕರೆ



ಹಲವು ಇತಿಹಾಸದ ಮಹತ್ವಗಳನ್ನು ತನ್ನ ಒಡಲಲ್ಲಿ ಇಟ್ಟುಕೊಂಡಿರುವ ಹಾಗೂ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ರಣಭೂಮಿಯಾಗಿಯೇ ತನ್ನ ಕೊಡುಗೆ ದಾಖಲಿಸಿರುವ ಹರ್‍ಯಾಣ ರಾಜ್ಯದ ಹಿಸ್ಸಾರ್ ಅತ್ಯಂತ ಪುರಾತನ ಪಟ್ಟಣ. ದೆಹಲಿ ಸುಲ್ತಾನರ ಕಾಲದಲ್ಲೇ ನೀರಾವರಿ ಸೌಲಭ್ಯ ದಕ್ಕಿಸಿಕೊಂಡು ಕೃಷಿ ಉತ್ಪಾದನೆಯಲ್ಲಿ ತನ್ನದೇ ಆದ ಹಿರಿಮೆಯನ್ನು ಹೊಂದಿದೆ. ಇಂತಹ ಹಿನ್ನೆಲೆಯ ಹಿಸ್ಸಾರ್‌ನಲ್ಲಿ ಅಖಿಲ ಭಾರತ ಕಿಸಾನ್ ಸಭಾ (AIKS) ನ 34ನೇ ಅಖಿಲ ಭಾರತ ಸಮ್ಮೇಳನ 2017 ಆಕ್ಟೋಬರ್ 3 ರಿಂದ 6 ರ ವರೆಗೆ ಅತ್ಯಂತ ಯಶಸ್ವಿಯಾಗಿಯೇ ನಡೆಯಿತು. 1992 ರಲ್ಲಿ 27ನೇ ಅಖಿಲ ಭಾರತ ಸಮ್ಮೇಳನವು ಇದೇ ಸ್ಥಳದಲ್ಲಿ ನಡೆದಿತ್ತು.

ಕಳೆದ ಅಖಿಲ ಭಾರತ ಸಮ್ಮೇಳನದ ನಂತರ ರೈತಾಪಿ ಸಮುದಾಯದ ಮೇಲಿನ ನವ-ಉದಾರೀಕರಣ ದಾಳಿಗಳನ್ನು ಹಿಮ್ಮೆಟ್ಟಿಸುವ, ಕಾರ್ಷಿಕ ಬಿಕ್ಕಟ್ಟನ್ನು ಪರಿಹರಿಸುವಂತೆ ಆಗ್ರಹಿಸುವ ಸಮರಶೀಲ ರೈತ ಚಳುವಳಿಗಳು ದೇಶದ ಉದ್ದಗಲಕ್ಕೂ ನಡೆದಿವೆ. ವಿಶೇಷವಾಗಿ ರಾಜಾಸ್ತಾನ, ಮಹಾರಾಷ್ಟ್ರ, ಮಧ್ಯಪ್ರದೇಶ ರೈತ ಚಳುವಳಿಗಳು ಪರಿಣಾಮಗಳನ್ನು ಉಂಟುಮಾಡಿ ಆಳುವ ವರ್ಗಗಳು ಬೆಚ್ಚುವಂತೆ ಮಾಡಿವೆ. ವಿಷಯಾದಾರಿತ ಐಕ್ಯ ಚಳುವಳಿ ಕಟ್ಟುವಲ್ಲಿ ಕಿಸಾನ್ ಸಭಾ ವಹಿಸುವ ಮುತುವರ್ಜಿ ಮತ್ತು ಯಶಸ್ವಿ ಅನುಭವದ ಹಿನ್ನೆಲೆಯಲ್ಲಿ 34ನೇ ಅಖಿಲ ಭಾರತ ಸಮ್ಮೇಳನ ನಡೆದಿದೆ.

ನವ ಉದಾರೀಕರಣ ನೀತಿಗಳಿಂದಾಗಿ ಉಲ್ಬಣಗೊಂಡ ಕೃಷಿಬಿಕ್ಕಟ್ಟು

ಸ್ವಾತಂತ್ರ್ಯ ನಂತರದ ಬಂಡವಾಳಶಾಹಿ ಅಭಿವೃದ್ಧಿ ಮಾದರಿಯಿಂದ ಅತಿ ಹೆಚ್ಚು ಭೂಮಿಯನ್ನು ಹೊಂದಿದ್ದ ಶ್ರೀಮಂತ ವರ್ಗಗಳು ಅನುಕೂಲತೆ ಪಡೆದಿದ್ದವು. ಎಡ ರಾಜ್ಯಗಳು ಹೊರತುಪಡಿಸಿ ಭಾರತದ ಬಹುತೇಕ ಭಾಗಗಳಲ್ಲಿ ಭೂಸುಧಾರಣೆ ಜಾರಿಗೆ ಬರಲಿಲ್ಲ. ಹಸಿರುಕ್ರಾಂತಿ, ನೀರಾವರಿ ಮೂಲ ಸೌಲಭ್ಯ, ಸಾಲ ಮತ್ತು ಸಬ್ಸಿಡಿ ಮುಂತಾದ ಎಲ್ಲವನ್ನು ಶ್ರೀಮಂತ ವರ್ಗದವರಿಗೆ ಹೆಚ್ಚಿನ ಅನೂಕೂಲವಾಗುವಂತೆ ಜಾರಿ ಮಾಡಲಾಯಿತು. ಇಂತಹ ಹಿನ್ನೆಲೆಯ ಕಾರ್ಷಿಕ ಪರಿಸ್ಥಿತಿಯ ಮೇಲೆ ನವ-ಉದಾರೀಕರಣ ನೀತಿಗಳ 25 ವರ್ಷಗಳು, ವಿಶಾಲ ರೈತಾಪಿ ಸಮುದಾಯವನ್ನು ದಿವಾಳಿಯೆಬ್ಬಿಸುವಂತಹ ಗಂಭೀರ ಬೆದರಿಕೆ ಒಡ್ಡುತ್ತಿವೆ ಹಾಗೂ ಭೂಮಿಯಿಂದ ಒಕ್ಕಲೆಬ್ಬಿಸುತ್ತಿವೆ.

ಇಂತಹ ಕೆಲವು ನೀತಿಗಳ ಮುಖ್ಯಾಂಶಗಳು ಕೆಳಗಿನಂತಿವೆ:

1) ರಪ್ತು ಆಧಾರಿತ ಕೃಷಿಗೆ ಉತ್ತೇಜನ, ಆಹಾರಧಾನ್ಯ ಉತ್ಪಾದನೆಗೆ ಇದ್ದ ಬೆಂಬಲದಲ್ಲಿ ಗಣನೀಯ ಕಡಿತ, ಕೃಷಿಯಲ್ಲಿ ಸಾರ್ವಜನಿಕ ಹೂಡಿಕೆ ನಿರಂತರವಾಗಿ ಕಡಿತಗೊಳ್ಳುತ್ತಿರುವುದು. ಈ ಎಲ್ಲದರ ಪರಿಣಾಮವಾಗಿ ದೇಶದ ಜನಸಂಖ್ಯೆಯ ಶೇ.50 ರಷ್ಟು ಜನರ ಅವಲಂಬನೆಯಾಗಿರುವ ಕೃಷಿಯ ಪಾಲು ಒಟ್ಟು ಜಿಡಿಪಿಯಲ್ಲಿ ಕೇವಲ ಶೇ.14 ಕ್ಕೆ ಕುಸಿತಗೊಂಡಿರುವುದು.
2) ಹಣಕಾಸು ಉದಾರೀಕರಣದಿಂದ ಸಾಮಾಜಿಕ ಹಾಗೂ ಅಭಿವೃದ್ಧಿ ಬ್ಯಾಂಕಿಂಗ್ ನೀತಿ ಕೈಬಿಟ್ಟಿದ್ದರಿಂದ ಖಾಸಗಿ ಲೇವಾದೇವಿದಾರರ ಮೇಲೆ ರೈತಾಪಿಗಳ ಹೆಚ್ಚುತ್ತಿರುವ ಅವಲಂಬನೆ, ಹೆಚ್ಚುತ್ತಿರುವ ಸಾಲಭಾಧೆ, ಸಾಲಭಾದೆಯಿಂದ ಮುಕ್ತಿಯಾಗಲು ಕೃಷಿ ಭೂಮಿಯ ಮಾರಾಟ ಪರಿಣಾಮವಾಗಿ ಗ್ರಾಮೀಣ ಉದ್ಯೋಗದಲ್ಲಿ ಕುಸಿಣ – ಕೆಲಸ ಹುಡುಕಿ ವ್ಯಾಪಕ ವಲಸೆ.
3) ಕೃಷಿ ವ್ಯಾಪಾರ ಸಂಸ್ಥೆಗಳಿಗೆ ಕೃಷಿ ರಂಗದಲ್ಲಿ ಮುಕ್ತ ಪ್ರವೇಶ, ವಿದೇಶಿ ನೇರ ಹೂಡಿಕೆಗೆ ಅವಕಾಶ, ಕೃಷಿ ನೀತಿ ರೂಪಿಸಲು ಕಾರ್ಪೋರೇಟ್ ಉದ್ಯಮಿಗಳಿಗೆ ಜವಾಬ್ದಾರಿ, ಪರಿಣಾಮವಾಗಿ ರೈತಾಪಿ ಕೃಷಿ ನಾಶ ಮಾಡಿ ಕಾರ್ಪೋರೇಟ್ ಕೃಷಿಗೆ ಅವಕಾಶ.
4) ವಿಶ್ವ ವಾಣಿಜ್ಯ ಸಂಸ್ಥೆ ಒಪ್ಪಂದಗಳಲ್ಲಿ ಅವಕಾಶ ಇರುವ ಆಮದು ಸುಂಕವನ್ನೂ ವಿಧಿಸದ ಧಾರಾಳತನ, ಪರಿಮಾಣಾತ್ಮಕ ನಿರ್ಭಂದಗಳನ್ನು ತೆಗೆದುಹಾಕುವುದು, ಯೂರೋಪ್ ಒಕ್ಕೂಟದ ಜೊತೆ ಮುಕ್ತ ವ್ಯಾಪಾರ ಒಪ್ಪಂದಗಳು, ಅಲ್ಲದೆ ಅಮೇರಿಕ, ಇಸ್ರೇಲ್, ಜಪಾನ್ ಸೇರಿದಂತೆ ಹಲವು ದೇಶ, ಪ್ರಾದೇಶಿಕ ಗುಂಪುಗಳೊಂದಿಗೆ 56 ಕ್ಕೂ ಹೆಚ್ಚು ಮುಕ್ತ ವ್ಯಾಪಾರ ಒಪ್ಪಂದಗಳು; ಪರಿಣಾಮವಾಗಿ ಕೃಷಿ ಉತ್ಪನ್ನಗಳ ಬೆಲೆಗಳಲ್ಲಿ ಕುಸಿತ, ಕೃಷಿ ಸಬ್ಸಿಡಿ, ಆಹಾರ ಸಬ್ಸಿಡಿ, ಬೆಂಬಲ ಬೆಲೆ ಖರೀದಿ ಯೋಜನೆಗಳ ಕಡಿತ.
5) ಹೆಚ್ಚುತ್ತಿರುವ ಭೂ ಹೀನತೆ, 1987–88ರ NSSO 43ನೇ ಸುತ್ತಿನ ಸಮೀಕ್ಷೆಗೂ 2011–12ರ NSSO 68ನೇ ಸುತ್ತಿನ ಸಮೀಕ್ಷೆಗೂ ಓಲಿಕೆ ಮಾಡಿದರೆ ಭೂ ಹೀನತೆ ಪ್ರಮಾಣ ಶೇ. 35 ರಿಂದ ಶೇ. 49 ಕ್ಕೆ ಹೆಚ್ಚಳ, ವಿಶೇಷ ಆರ್ಥಿಕ ವಲಯ, ಕೈಗಾರಿಕಾ ಕಾರಿಡಾರ್, ಕೈಗಾರಿಕೀಕರಣ ಮುಂತಾದ ಹೆಸರುಗಳಲ್ಲಿ ಯಾವುದೇ ಸಮರ್ಪಕ ಪರಿಹಾರ ಪುನರ್ವಸತಿ ಇಲ್ಲದೇ ಬೇಕಾಬಿಟ್ಟಿ ಭೂ ಸ್ವಾಧೀನತೆ,ರಿಯಲ್ ಎಸ್ಟೇಟ್ ಉದ್ದೇಶಕ್ಕಾಗಿ ವ್ಯಾಪಕ ಕೃಷಿ ಭೂಮಿ ಖರೀದಿ.
6) ಕೃಷಿ ಲಾಗುವಾಡುಗಳಿಂದ ರಸಗೊಬ್ಬರ, ಬೀಜ, ಕೀಟನಾಶಕ ಮತ್ತಿತರ ವೆಚ್ಚಗಳಲ್ಲಿ ವಿಪರೀತ ಹೆಚ್ಚಳ, ಉತ್ಪಾದನಾ ವೆಚ್ಚಕ್ಕಿಂತ ಕಡಿಮೆ ಬೆಂಬಲ ಬೆಲೆ ನಿಗದಿ, ಸ್ವಾಮಿನಾಥನ್ ಆಯೋಗದ ಉತ್ಪಾದನಾ ವೆಚ್ಚಕ್ಕೆ ಶೇ.50 ಲಾಭಂಶ ಸೇರಿಸಿ ಕನಿಷ್ಠ ಬೆಂಬಲ ಬೆಲೆ ನಿಗದಿ ಮಾಡುವ ಶಿಫಾರಸ್ಸಿಗೆ ನಿರ್ಲಕ್ಷ.

ಕಾರ್ಷಿಕ ಸಂಬಂದ ಹಾಗೂ ವರ್ಗ ಭಿನ್ನತೆಯಲ್ಲಿನ ಬದಲಾವಣೆಗಳು

ಕಳೆದ 25 ವರ್ಷಗಳಲ್ಲಿ ಕಾರ್ಷಿಕ ಸಂಬಂದ ಹಾಗೂ ವರ್ಗ ಭಿನ್ನತೆಗಳಲ್ಲಿ ಗಣನೀಯ ಬದಲಾವಣೆಗಳು ಉಂಟಾಗಿವೆ. ಈ ಬದಲಾವಣೆಗಳನ್ನು ನಿರ್ದಿಷ್ಟವಾಗಿ ಅರ್ಥಮಾಡಿಕೊಳ್ಳದಿದ್ದರೆ ರೈತ ಚಳುವಳಿಗೆ ಸರಿಯಾದ ಘೋಷಣೆ, ಕಾರ್ಯತಂತ್ರ ಹಾಗೂ ದಿಕ್ಕು ನೀಡಲು ಸಾಧ್ಯವಿಲ್ಲ. ನಿರ್ದಿಷ್ಟ ಪರಿಸ್ಥಿತಿಯ ಆಧಾರದಲ್ಲಿ ನಮ್ಮ ನಿಲುವನ್ನು ನಿರ್ದಿಷ್ಟಗೊಳಿಸಬೇಕಾಗಿದೆ.

1) ಬಂಡವಾಳಶಾಹಿ ಅಭಿವೃದ್ಧಿಯು ವ್ಯಾಪಕ ಹಾಗೂ ತೀವ್ರಗೊಂಡಿರುವುದು ಕಾರ್ಷಿಕ ಸಂಬಂದಗಳ ಪ್ರಧಾನ ಗುಣಲಕ್ಷಣವಾಗಿದೆ. ಆದರೂ ಹಳೇ ಮಾದರಿಯ ಸಾಮಾಜಿಕ ಸಂರಚನೆಗಳು ಗಮನಾರ್ಹ ಪ್ರಬಾವದೊಂದಿಗೆ ಉಳಿದುಕೊಂಡಿವೆ. ಭಾರತದಲ್ಲಿನ ಬಂಡವಾಳಶಾಹಿ ಬೆಳವಣಿಗೆ ಅಸಮಾನವಾಗಿದ್ದು, ಈ 25 ವರ್ಷಗಳಲ್ಲಿ ಮತ್ತಷ್ಟು ಅಸಮಾನತೆಯನ್ನು ಹೆಚ್ಚಿಸಿದೆ. ಭೂಮಿ, ಆಸ್ತಿ, ಕೃಷಿ ಹಾಗೂ ಕೃಷಿಯೇತರ ಆದಾಯಗಳು ಕೇಂದ್ರೀಕರಣಗೊಳ್ಳುವುದು ತೀವ್ರಗೊಂಡಿದೆ. ಗ್ರಾಮೀಣ ಭಾಗಗಳಲ್ಲಿ ಭೂ ಮಾಲೀಕ, ದೊಡ್ಡ ಬಂಡವಾಳಶಾಹಿ ರೈತ, ಗುತ್ತಿಗೆದಾರರು ಹಾಗೂ ದೊಡ್ಡ ವ್ಯಾಪಾರಸ್ಥರ ಗ್ರಾಮೀಣ ಶ್ರೀಮಂತರ ಕೂಟ ಬಲಾಢ್ಯ ಶಕ್ತಿಯಾಗಿದೆ. ಈ ಹಿನ್ನೆಲೆಯಲ್ಲಿ ವರ್ಗ ಹೋರಾಟ ಹಾಗೂ ಕಾರ್ಷಿಕ ಚಳುವಳಿಗಳ ಬೆಳವಣಿಗೆಯೂ ಈ ಗ್ರಾಮೀಣ ಶ್ರೀಮಂತರ ಶೋಷಣಾ ಕೂಟದ ವಿರುದ್ಧವಾಗಿರಬೇಕಾಗಿದೆ. ಭೂಮಿ ಮೇಲಿನ ಹಿಡಿತವು ಭೂಮಾಲಿಕ ಹಾಗೂ ದೊಡ್ಡ ಬಂಡವಾಳಶಾಹಿ ರೈತರ ಮೂಲಾಧಾರವಾಗಿ ಉಳಿದಿರುವುದಲ್ಲದೇ, ಹಣಕಾಸು ಲೇವಾದೇವಿ, ಕೃಷಿ ಸಂಬಂದಿತ ವ್ಯಾಪಾರ, ರಿಯಲ್ ಎಸ್ಟೇಟ್, ತಯಾರಿಕೆ, ಶಿಕ್ಷಣ ಸಂಸ್ಥೆಗಳನ್ನು ನಡೆಸುವುದು ಮುಂತಾದ ವ್ಯವಹಾರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಒಟ್ಟಾರೆ ಗ್ರಾಮಾಂತರ ಪ್ರದೇಶಗಳ ಪ್ರತಿಯೊಂದು ಕ್ಷೇತ್ರದಲ್ಲೂ ಇವರ ಪ್ರಭಾವ ಹಾಗೂ ಶಕ್ತಿ ದಟ್ಟವಾಗಿದೆ.
2) ಕೃಷಿಯಲ್ಲಿ ಬಂಡವಾಳಶಾಹಿ ಅಭಿವೃದ್ಧಿ ತೀವ್ರಗೊಂಡ ಪರಿಣಾಮದಿಂದ ರೈತಾಪಿ ಸಮುದಾಯವು ಶ್ರಮಜೀವಿಕರಣಗೊಳ್ಳತೊಡಗಿದೆ. ಬಡ ಮತ್ತು ಮಧ್ಯಮ ರೈತರನ್ನು ಕೃಷಿ ಹಾಗೂ ಕೃಷಿಯೇತರ ಚಟುವಟಿಕೆಗಳಲ್ಲಿ ದಿನಗೂಲಿ ಕಾರ್ಮಿಕರನ್ನಾಗಿಸುತ್ತಿದೆ.

ಪುಟ 11 ಕ್ಕೆ



ಕರ್ನಾಟಕದ ಪ್ರತಿನಿಧಿಗಳು

ಸಮಾಜವಾದ ಮತ್ತು ಕನ್ನಡ ಸಾಹಿತ್ಯ ವಿಚಾರ ಸಂಕಿರಣ

.... ಪುಟ 8 ರಿಂದ

ಕುರಿತಾದ ಪ್ರಬಂಧ ಮಂಡಿಸಿದರು. ತಾತ್ವಿಕತೆಯನ್ನು ಇಟ್ಟುಕೊಂಡೇ ಸಾಹಿತ್ಯವನ್ನು ನೋಡಬೇಕೇ ಎಂಬುದು ಅವರ ಪ್ರಥಮ ತಕರಾರಾಗಿತ್ತು. ಈ ನಿಲುವಿನಿಂದ 'ವೈಜ್ಞಾನಿಕ ಸಮಾಜವಾದ' ಎಂಬ ಸಾಧನವನ್ನು ಬಳಸಿ ಸಾಹಿತ್ಯದ ವಿಶ್ಲೇಷಣೆ ಮಾಡುವುದೂ ಅವರಿಗೆ ಒಪ್ಪಿತವಾಗಿರಲಿಲ್ಲ. ಸಾಹಿತ್ಯದ ಪಠ್ಯದ ಒಳಗಿಂದ ಹುಟ್ಟುವ ತಾತ್ವಿಕತೆ ಆಧಾರಿತ ವಿಶ್ಲೇಷಣೆ ಸರಿಯಾದ್ದು ಎಂಬುದು ಅವರ ಅಭಿಪ್ರಾಯವಾಗಿತ್ತು. 'ಕಸವರ(ಅರ್ಥ:ಚಿನ್ನ)ವೆಂಬುದು ನೆರೆ ಸೈರಿಸಲಾರ್ಪೊಡೆ ನೆರೆ ಪರಧರ್ಮಮುಮಂ ಪರವಿಚಾರಮುಮಂ ಎಂಬ ಕವಿರಾಜ ಮಾರ್ಗಕಾರನ ಚಿಂತನೆಯನ್ನು ಎಲ್ಲಿ ಇಡೋಣ? ಹಾಗೆಯೇ ಪಂಪ ಇನ್ನು ಅನೇಕ ವಿಚಾರಗಳ ಜೊತೆ 'ನಿಜದೊಳ ಓಲೈಸಿ ಬಾಳ್ವುದೆ ಕಷ್ಟಂ ನಿಜದಿಂ ಇಳಾಧಿನಾಥರಂ' ಎಂದು ರಾಜತ್ವಕ್ಕೂ ಸವಾಲು ಹಾಕುತ್ತಾನೆ. ರಾಜನನ್ನೇ ಕಾವ್ಯ ನಾಯಕನಿಗೆ ಏಕತ್ರ ಮಾಡಿದ ಪಂಪನ ನಿಜ ವಿಚಾರ ಅದಾಗಿರಬಹುದೇ ಎಂಬುದು ಸಂಶಯ. ಹಾಗಾಗಿ ಪಂಪನನ್ನೇ ಆಗಲಿ, ವಚನ ಸಾಹಿತ್ಯವನ್ನೇ ಆಗಲಿ ವೈಜ್ಞಾನಿಕ ಸಮಾಜವಾದದ ನೆಲೆಯ ಬದಲು ಸಮಾನತೆಯ ಮಾನವೀಯ ನೆಲೆಯಲ್ಲಿ ಅರ್ಥೈಸುವುದು ಸೂಕ್ತ ಎಂದು ಅವರು ಹೇಳಿದರು.



ಸಮುದಾಯದ ಹೋರಾಟಕ್ಕೆ ವಚನ ಸಾಹಿತ್ಯ ಸಂವಾದಿಯಾದುದು. ಸಮಾನತೆಗಾಗಿ ಕೆಳವರ್ಗಗಳು ಮತ್ತು ಹೆಣ್ಣು ಮಾಡಿದ ಹೋರಾಟವನ್ನು ನಾವು ಬೇರೆ ಬೇರೆಯಾಗಿಯೇ ನೋಡಬೇಕಾಗಿದೆ. 'ಮಾದಾರ ಚೆನ್ನಯ್ಯನ ಬಾಯ ತಂಬುಲವ ಮೆಲ್ಲುವೆ' ಎಂದು ವಚನ ಹೇಳುತ್ತಿದೆ. ಈ ಬಗೆಯ ಪಲ್ಲಟ ಸಾಧ್ಯವಾಗುವುದು ನಮ್ಮ ಸಂವೇದನೆಯಲ್ಲಿ ಪಲ್ಲಟ ಆದಾಗ ಮಾತ್ರವೇ ಹೊರತು ಅದು ಬೋಧನೆ ಇಲ್ಲವೇ ಹೇಳಿಕೆಯಿಂದ ಆಗುವುದಿಲ್ಲ. ಹಾಗಾಗಿ ವಚನ ಚಳುವಳಿ ಸಮಾಜವಾದಿ ಚಳುವಳಿಯ ಮೂಲ ಘಟ್ಟವೇ ಆಗಿರಬೇಕು ಅಂತ ಅಧ್ಯಯನಕಾರರಿಗೆ ಅನಿಸಿದ್ದರಲ್ಲಿ ತಪ್ಪೇನಿಲ್ಲ. ವಚನ ಚಳುವಳಿಯಲ್ಲಿ ಆಶಯವನ್ನು ಕೃತಿಯಾಗಿ ಮಾಡಲಾಗಿದೆ, ಆದರೆ ಬಂಡಾಯ ಚಳುವಳಿಯಲ್ಲಿ ಅದು ಆಗಿಲ್ಲ ಎಂದು ಡಾ.ಆಶಾದೇವಿ ತಿಳಿಸಿದರು.

ಮಹಿಳಾ ವಚನಕರ್ತೆಯರ ಚಳುವಳಿಗೆ ನಾವು ಕೊಡಬೇಕಾದ ಮನ್ನಣೆ ಕೊಡಲಿಲ್ಲ. ಒಂದು ವೇಳೆ ಆ ಮನ್ನಣೆ ಸಿಕ್ಕಿದ್ದಾದರೆ ಅವರೇ ಕಾರಣವಲ್ಲದೆ ಪುರುಷರಲ್ಲ. ಹೋರಾಟದ ದಾರಿಯನ್ನು ವಚನಕಾರ್ತಿಯರು ರೂಪಿಸಿದ್ದು ವಿಶಿಷ್ಟವಾದುದು. ಅವರು ಅದನ್ನು ಲಿಂಗರಾಜಕಾರಣದ ಪ್ರಶ್ನೆಯಾಗಿ ಎತ್ತಿದ್ದಾರೆ, ಜೊತೆಗೆ ಒಟ್ಟು ಸಮಾನತೆಯ ಹೋರಾಟಕ್ಕೂ ದನಿಗೂಡಿಸುತ್ತಾರೆ. ಸಮಾನತೆಯ ಹೋರಾಟ ಹೆಣ್ಣಿನ ಮಟ್ಟಿಗೆ ಜೀವನ್ಮರಣದ ಹೋರಾಟ. ಇದನ್ನು ವೈಜ್ಞಾನಿಕ ಸಮಾಜವಾದದ ನೆಲೆಯಲ್ಲಿ ಗುರುತಿಸಬಾರದು ಎಂಬುದಾಗಿ ಡಾ.ಎಂ.ಎಸ್.ಆಶಾದೇವಿ ವಿವರಿಸಿ, ಸಾಹಿತ್ಯವನ್ನು ವಿಶ್ಲೇಷಿಸುವ ಪರ್ಯಾಯ ಸಲಕರಣೆಗಳ ಪರಿಚಯ ಮಾಡಿದರು.

ಕಂಡ ಮತ್ತು ಉಂಡ ಅನುಭವಗಳ ವ್ಯತ್ಯಾಸ

'ನವೋದಯ, ನವ್ಯ ಸಾಹಿತ್ಯ ಮತ್ತು ಸಮಾಜವಾದಿ ಅನುಸಂಧಾನ' ಎಂಬ ವಿಷಯದ ಕೃತಿ ಡಾ.ಹೆಚ್.ಎಸ್. ರಾಘವೇಂದ್ರರಾವ್ ವಿಚಾರ ಮಂಡಿಸಿದರು. ವಾದದ ಅಳತೆಗೆ ತಕ್ಕಂತೆ ಸಾಹಿತ್ಯ ಕೃತಿಯ ಅಂಗಿಯನ್ನು ಹೊಲಿಯಲಾಗದು. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸಮಾಜವಾದ (ಎಂದರೆ ಲೋಹಿಯಾವಾದಕ್ಕೆ ಸಂವಾದಿಯಾಗಿ) ಮತ್ತು ಸಮತಾವಾದಗಳು ಪರಸ್ಪರ ವಿರುದ್ಧವಾದ ನೆಲೆಯಲ್ಲಿ ಕಾಣಿಸುತ್ತಿದೆ. ಇನ್ನೊಂದೆಡೆ ಯಾವೊಬ್ಬ ಲೇಖಕ ನೂರಕ್ಕೆ ನೂರು 'ವಾದಿ' ಆಗಿರುವುದಿಲ್ಲ. ಹೋರಾಟದಲ್ಲಿ ಬಂದಾಗ 'ವಾದ'ಕ್ಕೆ ನಿಷ್ಠನಾದರೂ, ಬರವಣಿಗೆಯಲ್ಲಿ ನಿಷ್ಠನಾಗಿರುವುದಿಲ್ಲ. ಪಾಬ್ಲೊ ನೆರೂದಾ ಇದ–ಕ್ಕೆ ಉದಾಹರಣೆ. ಕುವೆಂಪು ಅವರಲ್ಲೂ ಒಂದು 'ವಾದ' ಹುಡುಕಿದರೆ ವಿಫಲರಾಗುತ್ತೇವೆ. ಬದಲು, ಒಂದು ಕೃತಿ ಪ್ರಚಾರ ಉದ್ದೇಶದ ಬರವಣಿಗೆಯೋ ಅಥವಾ ಅಲ್ಲದ ಕೃತಿಯೋ ಎಂಬುದು ಮುಖ್ಯ. ಕನ್ನಡದಲ್ಲೂ, ಭಾರತದ ಇತರ ಭಾಷೆಗಳಲ್ಲೂ ವರ್ಗದ ಪ್ರಶ್ನೆಯೊಂದಿಗೆ ವರ್ಣದ ಪ್ರಶ್ನೆಯನ್ನು ಸಾಹಿತಿಗಳು ಎತ್ತಿದ್ದಾರೆ. ಇದು ಎಡಪಂಥೀಯ ಚಳುವಳಿಯ ಪ್ರಶ್ನೆಯೂ ಹೌದು–ಎಂದು ಅವರು ವಿಶ್ಲೇಷಿಸಿದರು. ಆದರೆ ಇದರ ಭಾಗವಾಗಿ ವರ್ಗದ ಪ್ರಶ್ನೆಗೆ ಕೊಡಬೇಕಾದ ಆದ್ಯತೆ ಸಹ ಕ್ರಮೇಣ ಇಲ್ಲವಾಗಿ ಅದು ಹಿನ್ನೆಲೆಗೆ ಸರಿಯಾಯಿತು.

ದೇಶದಲ್ಲಿ ಇರುವ ಕಮ್ಯೂನಿಸ್ಟ್ ಪಕ್ಷಗಳು ಭಿನ್ನ ಭಿನ್ನ ಸೈದ್ಧಾಂತಿಕ ನೆಲೆಗಳನ್ನು ಹೊಂದಿವೆ. ನಕ್ಸಲ್, ಕಮ್ಯೂನಿಸ್ಟ್, ಸಮಾಜವಾದಿ ಹೀಗೆ ಬೇರೆ ಬೇರೆ ನೆಲೆಗಳಿವೆ. ಸಾಹಿತ್ಯವನ್ನು ಗ್ರಹಿಸುವ ನೆಲೆಯಲ್ಲೂ ವ್ಯತ್ಯಾಸಗಳು ಆಗಿವೆ. ಕಮ್ಯೂನಿಸ್ಟ್ ಪ್ರೇರಣೆಯ ಕನ್ನಡ ಸಾಹಿತ್ಯ ಮಧ್ಯಮವರ್ಗದವರ ಸಾಹಿತ್ಯ ಮಾತ್ರ ಆಗಿ–ತ್ತೇ? ಆಂಧ್ರ, ಬಂಗಾಳಗಳಂತೆ ದುಡಿಯುವ ಜನರ ಸಾಹಿತ್ಯ ಆಗಲಿಲ್ಲವೇ? ಕನ್ನಡ ಸಾಹಿತ್ಯ ಹೋರಾಟದ ಬೆಂಕಿಯಲ್ಲಿ ಕಂಡುಕೊಂಡಿರುವುದಲ್ಲ. ಕನ್ನಡ ಮತ್ತು ಇತರ ರಾಜ್ಯಗಳ ಕಮ್ಯೂನಿಸ್ಟ್ ಪ್ರೇರಣೆಯ ಸಾಹಿತ್ಯಕ್ಕೆ ಉಂಡ ಮತ್ತು ಕಂಡ ಅನುಭವಗಳ, ಹೋರಾಟದ ದಾರಿಗಳ ವ್ಯತ್ಯಾಸವೇ ಕಾರಣವೇ – ಮೊದಲಾದ ಪ್ರಶ್ನೆಗಳನ್ನು ಡಾ.ಹೆಚ್.ಎಸ್.ರಾಘವೇಂದ್ರರಾವ್ ಎತ್ತಿದರು.

ನವೋದಯವೇ ಇರಲಿ, ನವ್ಯವೇ ಇರಲಿ, ಕನ್ನಡದಲ್ಲಿ ಒಂದು ವಿಕಾಸಕ್ರಮ ಇದೆ. ಕಾರಂತ, ಬೇಂದ್ರೆ, ಅನಂತಮೂರ್ತಿಯವರಂಥ ಮುಖ್ಯ ಸಾಹಿತಿಗಳಲ್ಲೂ ಬಲಪಂಥೀಯ ಎಳೆಗಳು ಇಲ್ಲವೆಂದಲ್ಲ. ನಿಜವಾದ ಲೇಖಕ, ಲೇಖಕಿಯರನ್ನು ನಾವು ಪಕ್ಕಕ್ಕಿಟ್ಟಿದ್ದೇವೆ. ಇನ್ನೊಂದೆಡೆ ಹಿರಿಯ ಲೇಖಕರು ಸಮತಾವಾದದ ಬಗ್ಗೆ ನೆಗೆಟಿವ್ ಆಗಿ ಕಾಣುವುದು ಯಾಕೆ? ಅವರ ಮೇಲೆ ಸೋವಿಯೆಟ್–ವಿರೋಧಿ ಶೀತಲ ಸಮರದ ಪ್ರಚಾರದ ಪ್ರಭಾವ ಸಾಕಷ್ಟು ಗಾಢವಾಗಿಯೇ ಆಯಿತೆ? ವ್ಯಕ್ತಿ ಸ್ವಾತಂತ್ರ್ಯ, ಸಮಾನತೆಯನ್ನು ನಾವು ತಪ್ಪಾಗಿ ಅರ್ಥಮಾಡಿಕೊಂಡೆವೇ? ಹಲವು ಪ್ರಗತಿಶೀಲ ಲೇಖಕರು ಸೇರಿದಂತೆ ಹಲವು ಪ್ರಮುಖ ಲೇಖಕರಲ್ಲಿ ಕಂಡ ಸಮಾಜವಾದಿ–ವಿರೋಧಿ ಪಲ್ಲಟ (ಯೂ–ಟರ್ನ್ ಎಂದೂ ಹೇಳಬಹುದು) ಗಳಿಗೆ ಕಾರಣ ಏನು? ಹಾಗೆ ನೋಡಿದರೆ ಕನ್ನಡ ರಂಗಭೂಮಿಯೇ ಕನ್ನಡ ಸಾಹಿತ್ಯಕ್ಕಿಂತಲೂ ಸಮಾಜವಾದದ ಜೊತೆ ಗಟ್ಟಿಯಾದ ಅನುಸಂಧಾನ ನಡೆಸಿದೆ ಎಂದವರು ಅಭಿಪ್ರಾಯ ಪಟ್ಟರು.

ಕುವೆಂಪು ಅವರು ಇಂತಹ ಪಲ್ಲಟ ಕಂಡ ಹಲವು ಹಿರಿಯ ಲೇಖಕರಿಗೆ ಅಪವಾದ. ಕುವೆಂಪು ಕ್ರಾಂತಿಯ, ಲೆನಿನ್ ಬಗ್ಗೆ ಬರೆದರು. ಸರ್ವೋದಯ, ಸಮನ್ವಯ ಮತ್ತು ಪೂರ್ಣದೃಷ್ಟಿ ಅವರ ಪರಿಕಲ್ಪನೆಗಳು. ಕುವೆಂಪು ಅವರ ಕವಿತೆಗಳಲ್ಲಿ ಯಾವುದು ಘೋಷಣೆಯಾಗಿ ಕಾಣಿಸಿತೋ, ಅದು ಅವರ ಕಾದಂಬರಿಗಳಲ್ಲಿ ಸೃಜನಶೀಲವಾಗಿ ಮೂಡಿಬಂತು. ಯಾವುದೇ ರಾಜಕೀಯ ಸಿದ್ಧಾಂತವೂ ಹೆಮ್ಮೆಪಟ್ಟುಕೊಳ್ಳಬಹುದಾದ ಕೃತಿ ಅವರ 'ಮಲೆಗಳಲ್ಲಿ ಮದುಮಗಳು'. ಧರ್ಮವಿಲ್ಲದ ನೈತಿಕತೆಯನ್ನು ಸಾಧಿಸುವುದು ಹೇಗೆ ಎಂಬ ಪ್ರಯತ್ನ ಒಂದೆಡೆ ಗಾಂಧಿಯಲ್ಲಾದರೆ, ಸಾಹಿತ್ಯದಲ್ಲಿ ಕುವೆಂಪು ಅವರಲ್ಲಿ ನಡೆದಿದೆ. ಇಡೀ ಆಧುನಿಕ ಕನ್ನಡ ಸಾಹಿತ್ಯದ ಮೇಲೆ ಸಮಾಜವಾದದ ಪ್ರಭಾವದ ಸಂದರ್ಭದಲ್ಲಿ ಕುವೆಂಪುರವರ ಮಹತ್ವವನ್ನು ಗುರುತಿಸುವ ಪ್ರಯತ್ನವನ್ನು ಡಾ.ಹೆಚ್.ಎಸ್.ರಾಘವೇಂದ್ರರಾವ್ ತಮ್ಮ ಮಂಡನೆಯಲ್ಲಿ ಮಾಡಿದರು.

ಪ್ರತಿರೋಧದ ಜತೆ ಪರ್ಯಾಯ ತೋರಿಸುವ ಪ್ರಗತಿಶೀಲ ದಲಿತ–ಬಂಡಾಯ

ಡಾ.ಸಿದ್ಧನಗೌಡ ಪಾಟೀಲರು 'ಪ್ರಗತಿಶೀಲ ಸಾಹಿತ್ಯ ಮತ್ತು ಸಮಾಜವಾದ'ದ ಕುರಿತು ಮಾತನಾಡಿದರು. ಸಮಾಜವಾದದ ಪ್ರಭಾವ ದುಡಿಯುವ ವರ್ಗದ ಚಳುವಳಿಗೆ ಸ್ಫೂರ್ತಿ ಕೊಟ್ಟಿತು. ಸಾಹಿತ್ಯದ ಉದ್ದೇಶ ಏನು ಎಂಬ ಚರ್ಚೆ 19ನೇ ಶತಮಾನದ ಮಧ್ಯದಲ್ಲಿ ಪಶ್ಚಿಮದಲ್ಲಿ ಆರಂಭವಾಗಿತ್ತು. ಕ್ರಾಂತಿಯಲ್ಲಿ ಸಾಹಿತ್ಯದ ಮಹತ್ವವನ್ನು ಲೆನಿನ್, ಮಾವೋ ಕೂಡಾ ಬರೆದಿದ್ದರು. ಸಮಾಜವಾದದ ಚಿಂತನೆ ಮಾರ್ಕ್ಸ್ ಬಂದ ಮೇಲೆ ಮಾತ್ರ ಬಂದದ್ದಲ್ಲ. ಹಿಂದಿನಿಂದಲೂ ಇತ್ತು. ಸಮಾಜವಾದದಲ್ಲಿ 2 ಬಗೆಯನ್ನು ಸ್ಥೂಲವಾಗಿ ಗುರುತಿಸಬಹುದು. ಒಂದು ಕೇವಲ ಪ್ರತಿರೋಧವನ್ನು ತೋರುವಂಥದ್ದು. ಎರನೆಯದಾದ ವೈಜ್ಞಾನಿಕ ಸಮಾಜವಾದದಲ್ಲಿ ಪ್ರತಿ–ರೋಧದ ಜೊತೆಗೆ ಪರ್ಯಾಯದ ಕನಸುಗಳಿರುತ್ತವೆ. 'ನಮ್ಮ ಉದ್ದೇಶ ಸಮಾಜವನ್ನು ಬದಲಾವಣೆ ಮಾಡುವುದು ಎಂದು ಮಾರ್ಕ್ಸ್ ಹೇಳುತ್ತಾನೆ. ಅದಕ್ಕೆ ಅಕ್ಟೋಬರ್ ಕ್ರಾಂತಿಯ ಆನಂತರ ಒಂದು ರೂಪ ಬಂತು ಎಂದು ಡಾ.ಸಿದ್ಧನಗೌಡ ಪಾಟೀಲರು ತಮ್ಮ ವಿಚಾರಕ್ಕೆ ತಳಹದಿ ಹಾಕಿದರು.

ಮಾರ್ಕ್ಸಿಮ್ ಗಾರ್ಕಿಯ ತಾಯಿ ಜಗತ್ತಿನ ಪ್ರಗತಿಶೀಲ ಸಾಹಿತ್ಯಕ್ಕೆ ಒಂದು ಮಾದರಿ. ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಕಮ್ಯೂನಿಸ್ಟರದ್ದು ಒಂದು ದಾರಿ. ಜನತೆಯ ಹೋರಾಟಗಳು ಸಾಹಿತ್ಯ, ರಂಗಭೂಮಿಯಲ್ಲೂ ರೂಪುಗೊಳ್ಳಬೇಕು ಎಂಬುದು ಅಂತಾರತಾಷ್ಟ್ರೀಯ ಕಮ್ಯೂನಿಸ್ಟ್ ಚಳುವಳಿಯಲ್ಲೂ ಪ್ರಸ್ತಾಪವಾಯಿತು. 1936 ರಲ್ಲಿ ಅಖಿಲ ಭಾರತ ಪ್ರಗತಿಪರ ಲೇಖಕರ ಸಂಘ ಆರಂಭವಾಗಿದ್ದು, ಮುಂದೆ ಕರ್ನಾಟಕದಲ್ಲೂ ಪ್ರಗತಿಶೀಲ ಸಾಹಿತ್ಯ ಚಳುವಳಿ 1940–50ರ ಕಾಲಘಟ್ಟದಲ್ಲಿ ತೀವ್ರವಾಯಿತು. ಕನ್ನಡದಲ್ಲಿ ಅನಕೃ, ತರಾಸು, ಬಸವರಾಜ ಕಟ್ಟೀಮನಿ, ನಿರಂಜನ ಈ ಚಳುವಳಿಯ ಪ್ರಮುಖರು. ಇವರ ಕೃತಿಗಳಲ್ಲಿಯೂ 1. ಪ್ರತಿರೋಧದ ಕೃತಿಗಳು, 2. ಪರ್ಯಾಯ ಸೂಚಿಸುವ ಕೃತಿಗಳು ಎಂಬ 2 ಬಗೆಯನ್ನು ಕಾಣಬಹುದು. ಇದರಲ್ಲಿ ಮೊದಲ ಬಗೆಯ ಕೃತಿಗಳು ಸಮಕಾಲೀನ ನವೋದಯ ಕೃತಿಗಳಿಗಿಂತ ಭಿನ್ನವಾಗಿರಲಿಲ್ಲ. ಎರಡನೆಯ ಬಗೆಯ ಕೃತಿಗಳು ಕಟ್ಟೀಮನಿ ಮತ್ತು ನಿರಂಜನರದು. ಚಳುವಳಿಯ ತೀವ್ರತೆ ಇಳಿದ ಕಾಲದಲ್ಲೂ ಅವರು ಅದೇ ನಿಲುವಿನಿಂದ ಬರೆದರು. ಕಟ್ಟೀಮನಿಯವರ 'ಜ್ವಾಲಾಮುಖಿ', 'ಮಾಡಿ ಮಡಿದವರು' ಮತ್ತು ನಿರಂಜನರ 'ಮೃತ್ಯುಂಜಯ' ಈ ಪಂಥದ ಪ್ರಮುಖ ಕೃತಿಗಳು. ಅದರಲ್ಲೂ ಪ್ರಾಚೀನ ಈಜಿಪ್ಟ್‌ನಲ್ಲಿ ಧರ್ಮಕಾರಣ ಮತ್ತು ರಾಜಕಾರಣಗಳ ಮುಖಾಮುಖಿಯನ್ನು ಅನಾವರಣಗೊಳಿಸುವ 'ಮೃತ್ಯುಂಜಯ' ಇವತ್ತಿನ ಸಂದರ್ಭದಲ್ಲಿಯೂ ಪ್ರಸ್ತುತ ಎಂದು ಡಾ.ಸಿದ್ಧನಗೌಡ ಪಾಟೀಲ ವಿವರಿಸಿದರು.

ಪ್ರಗತಿಶೀಲ ಚಳುವಳಿಗೂ ಪ್ರೇರಣೆ ನೀಡಿದ್ದು ಸೋವಿಯತ್ ಕ್ರಾಂತಿ. ಪ್ರಗತಿಶೀಲ ಚಳುವಳಿಯ ಮುಂದುವರಿಕೆಯಾಗಿ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಕನ್ನಡ ಸಾಹಿತಿಗಳ ಒಕ್ಕೂಟ, ಬಂಡಾಯ ದಲಿತ ಸಾಹಿತ್ಯ ಚಳುವಳಿಗಳು ಮುಂದುವರಿದಿವೆ. ಜಿ.ರಾಮಕೃಷ್ಣ, ಬರಗೂರು ರಾಮಚಂದ್ರಪ್ಪ ಬಂಡಾಯ ಸಾಹಿತ್ಯ ಚಳುವಳಿಯ ಪ್ರಮುಖರು ಎಂದು ಡಾ.ಸಿದ್ಧನಗೌಡ ಪಾಟೀಲ ವಿಶದೀಕರಿಸಿದರು.

ಡಾ.ವೈ.ಬಿ.ಹಿಮ್ಮಡಿಯವರು ದಲಿತ ಬಂಡಾಯ ಸಾಹಿತ್ಯ ಮತ್ತು ಸಮಾಜವಾದಿ ಬದ್ಧತೆ ಕುರಿತಾಗಿ ವಿಚಾರ ಮಂಡಿಸಿದರು. ದಲಿತ ಬಂಡಾಯದ ಸಾಹಿತಿಗಳು ಒಂದು ಬದ್ಧತೆಯಲ್ಲಿ ಹೊರಟವರು. ಆ ಕಾಲದ ಬದ್ಧತೆಯನ್ನು ಇನ್ನೂ ಎಷ್ಟು ಮಂದಿ ಈಗಲೂ ಉಳಿಸಿಕೊಂಡಿದ್ದಾರೆ ಎಂಬುದು ಬೇರೆಯ ಮಾತು. ಆದರೆ ದಲಿತರ ಚಿತ್ರಣ ಕನ್ನಡ ಸಾಹಿತ್ಯದಲ್ಲಿ ವಚನ ಸಾಹಿತ್ಯದ ಬಳಿಕ ಕಾಣಿಸಿಕೊಂಡದ್ದೇ ದಲಿತ ಸಾಹಿತ್ಯ ಬಂದ ಮೇಲೆ. ಅಂದಿನ ಮಂತ್ರಿಗಳಾಗಿದ್ದ ಬಿ.ಬಸವಲಿಂಗಯ್ಯನವರು ದಲಿತರ ಮಟ್ಟಿಗೆ ಈವರೆಗೆ ಬಂದಿರುವ ಕನ್ನಡ ಸಾಹಿತ್ಯ ಬೂಸ ಎಂಬ ಹೇಳಿಕೆ ನೀಡಿದ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಉಂಟಾದ ಜಾತೀಯ ಸಂಘರ್ಷಗಳು ದಲಿತ ಸಾಹಿತ್ಯದ ಹುಟ್ಟಿಗೆ ಕಾರಣವಾದವು. ಅದೇ ಕಾಲಕ್ಕೆ ಹುಟ್ಟಿದ ಬಂಡಾಯ ಸಾಹಿತ್ಯದಲ್ಲಿ ಮಾರ್ಕ್ಸ್‌ವಾದ, ಅಂಬೇಡ್ಕರ್‌ವಾದ ಮತ್ತು ಲೋಹಿಯಾವಾದಗಳ ಪ್ರೇರಣೆ ಇದೆ. ಹಿಂದೆ ವಚನ ಸಾಹಿತ್ಯ, ದಾಸ ಸಾಹಿತ್ಯವನ್ನು ಭಕ್ತಿ ಸಾಹಿತ್ಯ ಹಾಗೂ ಧಾರ್ಮಿಕ ಸಾಹಿತ್ಯದ ನೆಲೆಯಲ್ಲಿ ವಿವೇಚಿಸಲಾಗುತ್ತಿತ್ತು. ಆದರೆ ಅದನ್ನು ಕೆಳವರ್ಗದ ಸಾಹಿತ್ಯಕ ಚಳುವಳಿಯಾಗಿ ದಲಿತ ಬಂಡಾಯ ಸಾಹಿತ್ಯ ಬಂದುದರಿಂದ ನೋಡಲು ಸಾಧ್ಯವಾಯಿತು ಎಂದು ಅವರು ವಿವರಿಸಿದರು.

ಮೊದಲು ಸಾಹಿತ್ಯವನ್ನು ದಲಿತರು, ದಮನಿತರು ಓದುತ್ತಿರಲಿಲ್ಲ. ಆದರೆ ಬಂಡಾಯ ಚಳುವಳಿಯಿಂದಾಗಿ ಅವರು ಸಾಹಿತ್ಯವನ್ನು ಓದಲು ಆರಂಭಿಸಿದರು. ಅಲ್ಲದೆ ವೈಚಾರಿಕ ಸಾಹಿತ್ಯದ ಬರವಣಿಗೆ ಹೆಚ್ಚಾಯಿತು. ಮರಾಠಿ, ತೆಲುಗು, ಮಲಯಾಳ ಭಾಷೆಗಳ ವೈಚಾರಿಕ ಭಾಷೆಗಳ ಕೃತಿಗಳು ಕನ್ನಡಕ್ಕೆ ಅನುವಾದಗೊಂಡವು. ದಲಿತರು, ಮಹಿಳೆಯರು ಹೆಚ್ಚಿಗೆ ಬರೆಯಲು ಆರಂಭಿಸಿದರು. ಮಹಿಳಾ ಮತ್ತು ಮುಸ್ಲಿಂ ಸಂವೇದನೆಗಳು ಮುನ್ನೆಲೆಗೆ ಬಂದವು. ಇವತ್ತು ದಲಿತ ಸಮುದಾಯ ಚಳುವಳಿ ದುರ್ಬಲವಾಗಿದ್ದರೂ ಮಹಿಳಾ ಚಳುವಳಿ ಹಾಗೂ ಮಹಿಳಾ ಸಾಹಿತ್ಯ ಚಳುವಳಿ ಮಾತ್ರ ಬಲಿಷ್ಟವಾಗಿಯೇ ಇದೆ ಎಂದು ಡಾ.ವೈ.ಬಿ.ಹಿಮ್ಮಡಿ ಅಭಿಪ್ರಾಯ ಪಟ್ಟರು.

ಕವಿಗೋಷ್ಠಿ ಮತ್ತು 'ತಾಯಿ' ನಾಟಕ

ಕೆ.ಶರೀಫಾ ಅವರ ಅಧ್ಯಕ್ಷತೆಯಲ್ಲಿ ಸಮಾಜವಾದಿ ಕವಿಗೋಷ್ಠಿ ನಡೆಯಿತು. ಈಗಾಗಲೇ ಕವಿಗಳಾಗಿ ಪರಿಚಿತರೂ, ಹೊಸಕವಿಗಳೂ ಸಮಾಜವಾದಿ ಆಶಯವನ್ನು ಪ್ರಕಟಿಸುವ ಕವಿತೆಗಳನ್ನು ಓದಿದ್ದು ಇದರ ವೈಶಿಷ್ಟ್ಯ. ಸಮುದಾಯ ಕರ್ನಾಟಕದ ಹಿರಿಯ ಸದಸ್ಯ ಎಂ.ಜಿ.ವೆಂಕಟೇಶ್ ಪ್ರಸ್ತಾವಿಕ ಮಾತುಗಳನ್ನಾಡಿದರು.

ಮಾಕ್ಸಿಂ ಗಾರ್ಕಿಯ ಕಾದಂಬರಿಯನ್ನಾಧರಿಸಿ ಬಟೋಲ್ಟ್ ಬ್ರೆಕ್ಟ್ ಬರೆದ ತಾಯಿ ನಾಟಕವನ್ನು ಮೈಸೂರು ಸಮುದಾಯ ಸಿದ್ಧಪಡಿಸಿದ್ದು, ಪ್ರೊ.ಎಸ್. ಆರ್.ರಮೇಶ್ ಅದನ್ನು ನಿರ್ದೇಶಿಸಿದ್ದಾರೆ. ಕನ್ನಡ ರೂಪಾಂತರ ಪ್ರೊ.ಕೆ.ಪಿ.ವಾಸುದೇವನ್ ಅವರದ್ದು. ಈ ರಂಗಕೃತಿ ಈಗಾಗಲೇ ಪ್ರದರ್ಶಿತವಾದಲ್ಲೆಲ್ಲ ಪ್ರಶಂಸೆಗೊಳಗಾಗಿದ್ದು, ರವೀಂದ್ರ ಕಲಾಕ್ಷೇತ್ರದ ಪ್ರದರ್ಶನದಲ್ಲೂ ಮೆಚ್ಚುಗೆಗೆ ಪಾತ್ರವಾಯಿತು. •

ಕೃಷಿ ಬಿಕ್ಕಟ್ಟು ಎದುರಿಸಲು–ಕಿಸಾನ್ ಸಭಾ 34ನೇ ಸಮ್ಮೇಳನದ ಕರೆ ....

ಪುಟ 9 ರಿಂದ

ಹೀಗೆ ಗ್ರಾಮೀಣ ಪ್ರದೇಶಗಳಲ್ಲಿ ದೈಹಿಕ ದುಡಿಮೆಗಾರರ ವಿಶಾಲ ವರ್ಗವು ಸೃಷ್ಟಿಸಲ್ಪಟ್ಟಿದೆ. ಶೋಷಕ ಗ್ರಾಮೀಣ ಶ್ರೀಮಂತರ ಕೂಟದ ವಿರುದ್ಧ ಕೃಷಿ ಕೂಲಿಕಾರರು, ಬಡರೈತರು, ಮಧ್ಯಮರೈತರ, ಕೃಷಿಯೇತರ ದೈಹಿಕ ದುಡಿಮೆಗಾರರ, ಕರಕುಶಲಕರ್ಮಿ ಮತ್ತು ಇತರೆ ಗ್ರಾಮೀಣ ಬಡವರ ಮಧ್ಯೆ ವಿಶಾಲ ಐಕ್ಯತೆಯನ್ನು ನಿರ್ಮಿಸುವುದು ಅತ್ಯಗತ್ಯವಾದ ಅಂಶ. ಇದು ಅಖಿಲ ಭಾರತ ಮಟ್ಟದ ವಿಶಾಲ ಕಣ್ಣೋಟವಾಗಿದ್ದು, ಬಂಡವಾಳಶಾಹಿ ಬೆಳವಣಿಗೆಯ ಹಂತ, ಇದರ ನಿರ್ದಿಷ್ಟ ಸ್ವರೂಪ, ವರ್ಗ ಭಿನ್ನಭಿನ್ನತೆಗಳು ಇತ್ಯಾದಿಗಳಲ್ಲಿ ವಿವಿಧ ರಾಜ್ಯ ಹಾಗೂ ಜಿಲ್ಲೆಗಳಲ್ಲಿ ವ್ಯತ್ಯಾಸಗಳು ಇರಬಹುದು.

ಸಮರ್ಪಕ ಕಾರ್ಯತಂತ್ರ, ಘೋಷಣೆ ಹಾಗೂ ಚಳುವಳಿಯ ದಿಕ್ಕನ್ನು ನಿರ್ದಿಷ್ಟಗೊಳಿಸಲು, ಪ್ರತಿರಾಜ್ಯ ಮತ್ತು ಜಿಲ್ಲೆಯ ನಿರ್ದಿಷ್ಟ ಪರಿಸ್ಥಿತಿಯ ಸಮರ್ಪಕ ವಿಶ್ಲೇಷಣೆಯನ್ನು ಮಾಡಬೇಕಿದೆ. ನಿರ್ದಿಷ್ಟ ಪರಿಸ್ಥಿತಿಯನ್ನು ಯಶಸ್ವಿಯಾಗಿ ವಿಶ್ಲೇಷಣೆ ಮಾಡುವುದರ ಆಧಾರದ ಮೇಲೆ ಮಾತ್ರವೇ ಕಿಸಾನ್ ಸಭಾದ ವಿಸ್ತರಣೆ ಹಾಗೂ ದೇಶದಾದ್ಯಂತ ರೈತ ಚಳುವಳಿಯು ಪರಿಣಾಮಕಾರಿಯಾಗಿ ಸಂಭವಿಸಲಿದೆ.

3) ಭೂಮಾಲೀಕತ್ವದ ರದ್ಧತಿ ಹಾಗೂ ಹಾಗೂ ಭೂ ಹಂಚಿಕೆಯೇ ಕೃಷಿಕೂಲಿಕಾರರು, ಬಡರೈತರು ಹಾಗೂ ಭೂರಹಿತರನ್ನು ಅಣಿನೆರಸುವ ಮಹತ್ವದ ವಿಷಯವಾಗಿದ್ದು, ಭೂಮಿ ಪ್ರಶ್ನೆಯೇ ಬಡವಿಭಾಗಗಳನ್ನು ಸಂಘಟಿಸುವ ಕೇಂದ್ರ ಪ್ರಶ್ನೆ. ಹೆಚ್ಚುವರಿ ಭೂಮಿ, ಬೀಳು ಭೂಮಿ ಸರ್ಕಾರಿ ಭೂಮಿಯನ್ನು ಉಳುಮೆಗೆ ಒಳಪಡಿಸುವ ಭೂ ಆಕ್ರಮಣ ಚಳುವಳಿ ಮುಂತಾದವು ನಡೆದಿದೆ. ಕೆಲವು ರಾಜ್ಯಗಳಲ್ಲಿ ಸರ್ಕಾರಿ ಭೂಮಿ ಹಾಗೂ ಧಾರ್ಮಿಕ ಸಂಸ್ಥೆಗಳ ಒಡೆತನದ ಭೂಮಿ ಉಳುಮೆ ಹಕ್ಕನ್ನು ರಕ್ಷಿಸಿಕೊಳ್ಳಲು ಹೋರಾಟ ನಡೆದಿದೆ. ಕಾಲಾನಂತರ ಭೂಸುಧಾರಣೆಯನ್ನು ನಾಶಮಾಡುವ ವ್ಯವಸ್ಥಿತ ಕಾನೂನುಗಳು, ಕಾರ್ಪೋರೇಟ್ ಭೂ ಕಬಳಿಕೆ ಹಾಗೂ ರಿಯಲ್ ಎಸ್ಟೇಟ್ ತಿಮಿಂಗಿಲಗಳು ಮುಮತಾದವುಗಳ ಹಾವಳಿ ಹೆಚ್ಚಿದ್ದು ಇವುಗಳಿಂದ ರೈತರ ಭೂಮಿ ರಕ್ಷಿಸುವ ಭೂ ಹೋರಾಟಗಳು, ಕರಾಳ ಭೂಸ್ವಾದೀನದ ವಿರುದ್ಧ, ಮನೆ ನಿವೇಶನಕ್ಕೆ ಭೂಮಿ ಕೇಳುವ ಹೋರಾಟಗಳು ಭೂಮಿ ವಿಷಯದ ಮತ್ತೊಂದು ಆಯಾಮಗಳಾಗಿವೆ.

4) ಗ್ರಾಮೀಣ ಪ್ರದೇಶದಲ್ಲಿರುವ ವ್ಯಾಪಕ ನಿರುದ್ಯೋಗ ಹಾಗೂ ಕಾರ್ಷಿಕ ಸಂಕಟಗಳು ಸಾಮಾಜಿಕ ವಲಸೆಗಳಿಗೆ ಕಾರಣವಾಗಿದ್ದು, ರೈತಾಪಿ ಸಮುದಾಯವು ನಗರ ಪ್ರದೇಶಗಳ ಅಸಂಘಟಿತ ವಲಯದ ಅಸುರಕ್ಷಿತ ವಾತಾವರಣಕ್ಕೆ ನೂಕಲ್ಪಟ್ಟಿದೆ. ಉದ್ಯೋಗ ಖಾತರಿ ಕಾಯಿದೆ ಸಮರ್ಪಕವಾಗಿ ಜಾರಿಗೊಳ್ಳುವಂತೆ ಹಾಗೂ ಕೂಲಿ ಹೆಚ್ಚಳಕ್ಕಾಗಿ ನಡೆಯುವ ಹೋರಾಟವು ಬಡ ವರ್ಗದಲ್ಲಿ ಹೆಚ್ಚಿನ ಐಕ್ಯತೆ ಮೂಡಿಸಲು ಸಹಕಾರಿಯಾಗಿದೆ.

5) ಸಾಲಮನ್ನಾ, ಸಾಲಸೌಲಭ್ಯ, ಕೃಷಿಲಾಗುವಾಡುಗಳು ಸಬ್ಸಿಡಿಗಳ ಕುರಿತ ಬೇಡಿಕೆಗಳನ್ನು ಬಡ ಹಾಗೂ ಮಧ್ಯಮ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ರೂಪಿಸಬೇಕು. ಗೇಣಿ ರೈತರ ಸಂಖ್ಯೆ ವಿವಿಧ ರಾಜ್ಯಗಳಲ್ಲಿ ಹೆಚ್ಚಾಗುತ್ತಿದೆ. ಗೇಣಿ ರೈತರನ್ನು ರಕ್ಷಿಸುವ ಬೇಡಿಕೆಗಳಿಗಾಗಿ ಹೋರಾಡಬೇಕು. ಸಾಮಾಜಿಕ ದಮನ ಹಾಗೂ ಜಾತಿ ತಾರತಮ್ಯದ ವಿರುದ್ಧ, ಕೃಷಿಯಲ್ಲಿ ಹೆಚ್ಚಿನದಾಗಿ ತೊಡಗಿಸಿಕೊಂಡಿರುವ ಮಹಿಳೆಯರ ಸಂಬಂದಿತ ಪ್ರಶ್ನೆಗಳಿಗೆ ಹೆಚ್ಚಿನ ಗಮನ ಕೊಡಬೇಕು.

6) ರೈತರನ್ನು, ಕೃಷಿಕೂಲಿಕಾರರು, ಗ್ರಾಮೀಣ ಶ್ರಮಿಕರು ಮತ್ತವರ ಸಂಘಟನೆಗಳೊಂದಿಗೆ ಹೆಚ್ಚು ಹೆಚ್ಚು ಐಕ್ಯತೆ ಮೂಡುವಂತೆ ಅಖಿಲ ಭಾರತ ಕಿಸಾನ ಸಭಾ ಶ್ರಮಿಸಬೇಕು. ಇದು ಭೂ ಮಾಲೀಕ – ಶ್ರೀಮಂತ ಕೂಟದ ವಿರುದ್ಧ ಕೃಷಿಕೂಲಿಕಾರರು, ಬಡರೈತರು,ಮಧ್ಯಮ ರೈತರು, ಕೃಷಿಯೇತರ ವಲಯಗಳ ದೈಹಿಕ ದುಡಿಮೆಗಾರರು, ಕರಕುಶಲ ಕರ್ಮಿಗಳು ಹಾಗೂ ಇತರೆ ಶೋಷಿತ ಜನ ವಿಭಾಗಗಳ ಮಧ್ಯ ವಿಶಾಲ ಐಕ್ಯತೆ ನಿರ್ಮಿಸಲು ಸಹಾಯಕವಾಗಲಿದೆ.

ಬಿಜೆಪಿ ಆಳ್ವಿಕೆಯಲ್ಲಿ ಕಾರ್ಷಿಕ ಪರಿಸ್ಥಿತಿ

ರೈತರಿಗೆ ‘ಅಚ್ಛೇದಿನ್’ ಉಂಟು ಮಾಡಲಿದೆ ಎಂಬ ಭರವಸೆಯನ್ನು, ರೈತ ಆತ್ಮಹತ್ಯೆಗೆ ಕೊನೆಹಾಡುವ ಮಾತುಗಳನ್ನು ಅಧಿಕಾರಕ್ಕೆ ಬರುವ ಮುಂಚೆ ಬಿಜೆಪಿ ನೀಡಿತ್ತು. ಕೃಷಿ ಹಾಗೂ ಗ್ರಾಮೀಣ ಅಭಿವೃದ್ಧಿಗೆ ಸಾರ್ವಜನಿಕ ಬಂಡವಾಳ ಹೆಚ್ಚಿಸುವ, ಉತ್ಪಾದನಾ ವೆಚ್ಚದ ಮೇಲೆ ಶೇ.50 ಲಾಭಾಂಶ ನೀಡಿ ಲಾಭಧಾಯಕತೆಯನ್ನು ಉತ್ತಮಪಡಿಸುವ, ಲಾಗುವಾಡು ಹಾಗೂ ಸಾಲವನ್ನು ಕಡಿಮೆ ದರಕ್ಕೆ ಒದಗಿಸುವ, ನೈಸರ್ಗಿಕ ವಿಕೋಪಗಳಿಗೆ ತುತ್ತಾಗುವ ಬೆಳೆಗಳಿಗೆ, ಬೆಳೆ ವಿಮೆ ಸೌಲಭ್ಯ ನೀಡುವ ವಾಗ್ದಾನವನ್ನು ತನ್ನ ಚುನಾವಣಾ ಪ್ರಣಾಳಿಕೆಯಲ್ಲೇ ಬಿ.ಜೆ.ಪಿ. ಘೋಷಿಸಿತ್ತು.

ಅಧಿಕಾರಕ್ಕೆ ಬಂದ ಮೂರು ವರ್ಷಗಳ ನಂತರ ನರೇಂದ್ರಮೋದಿ ನೇತೃತ್ವದ ಬಿಜೆಪಿ ಸರ್ಕಾರ ಪ್ರತಿಯೊಂದು ಭರವಸೆಗಳ ವಿಷಯದಲ್ಲಿ ಮಹಾದ್ರೋಹವನ್ನೇ ಎಸಗಿದೆ. 2013–14 ರಲ್ಲಿ ಕೃಷಿ ಬೆಳವಣಿಗೆ ದರ ಶೇ.4.2 ಇದ್ದುದ್ದು. ಮೊದಲ ಎರಡು ವರ್ಷಗಳ ಬಿಜೆಪಿ ಸರ್ಕಾರದಲ್ಲಿ ಕುಸಿತ ಕಂಡಿದೆ. ಈ ವರ್ಷ ಶೇ.4 ಕ್ಕೆ ಏರಿಕೆಯಾಗಲಿದೆ ಎಂದು ಹೇಳುತ್ತಿದ್ದರೂ ಅಂತಹ ಯಾವುದೇ ಲಕ್ಷಣಗಳು ಕಂಡು ಬರುತ್ತಿಲ್ಲ. ಕೃಷಿ ಬಿಕ್ಕಟ್ಟು ತೀವ್ರಗೊಂಡಿದೆ ಮಾತ್ರವಲ್ಲ, ರೈತರ ಆತ್ಮಹತ್ಯೆಗಳು ಅಭಾದಿತವಾಗಿ ಮುಂದುವರೆಯುತ್ತಿವೆ. ರೈತರ ಆತ್ಮಹತ್ಯೆಗಳಲ್ಲಿ ಶೇ. 26 ಹೆಚ್ಚಳ ಕಂಡುಬಂದಿದೆ. ಭೂ ಹೀನತೆ ಮತ್ತು ಭೂ ಅಸಮಾನತೆಯ ವೇಗ ತೀವ್ರವಾಗಿ ಹೆಚ್ಚಳಗೊಂಡಿದೆ ಹಾಗೂ ಸಾಲಭಾದೆಯಿಂದ ನರಳುವುದು ಸಹ ತೀವ್ರವಾಗಿ ಹೆಚ್ಚಳಗೊಂಡಿದೆ.

ಕೃಷಿ ಕಂಪನೀಕರಣಕ್ಕೆ ಉತ್ತೇಜನ – ರೈತರ ಸಂಕಷ್ಟ ದ್ವಿಗುಣ

ಕೃಷಿಯ ಕಂಪನೀಕರಣಕ್ಕೆ ಭಾರೀ ಉತ್ತೇಜನವನ್ನು ನರೇಂದ್ರ ಮೋದಿ ಸರ್ಕಾರ ನೀಡುತ್ತಿದ್ದು, ಯೋಜನಾ ಆಯೋಗದ ರದ್ಧತಿಯಿಂದಾಗಿ ಅದ್ಯತಾ ವಲಯದ ಪರಿಕಲ್ಪನೆಗೆ ದಕ್ಕೆ ಬಂದಿದೆ. ಬಜೆಟ್‌ಗಳಲ್ಲಿ ಕೃಷಿ ವ್ಯಾಪಾರ ಉದ್ಯಮಗಳಿಗೆ ಉತ್ತೇಜನ ಸಿಕ್ಕಿ ಬೀಜ ಉತ್ಪಾದನೆ, ವಿತರಣೆ, ಸಂಸ್ಕರಣೆ, ಮಾರುಕಟ್ಟೆಗಳಲ್ಲಿ ಕಾರ್ಪೋರೇಟ್ ಉದ್ಯಮಗಳನ್ನು ಪ್ರೋತ್ಸಾಹಿಸಲಾಗುತ್ತಿದೆ.

2015–16 ರಲ್ಲಿ ಕೃಷಿ ಹಾಗೂ ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಹೂಡಿಕೆಗೆ ಇದೇ ಮೊದಲ ಬಾರಿ ಅವಕಾಶ ನೀಡಲಾಗಿದೆ. ಇ–ಮಾರುಕಟ್ಟೆಗಳನ್ನು ಘೋಷಿಸಿ, ಕಾರ್ಪೋರೇಟ್ ವ್ಯಾಪಾರಿ ಹಾಗೂ ಕೃಷಿ ಉದ್ಯಮಿಗಳಿಗೆ ಕಡಿಮೆ ದರದಲ್ಲಿ ಕೃಷಿ ಉತ್ಪನ್ನಗಳನ್ನು ಕೊಳ್ಳಲು ಅನುಕೂಲವಾಗುವಂತೆ, ದೇಶದ ಎಲ್ಲಾ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳನ್ನು ಜೋಡಿಸಲಾಗಿದೆ. 2017–18 ರಲ್ಲಿ ಮಾದರಿ ಒಪ್ಪಂದ ಕೃಷಿ ಕಾನೂನು ಜಾರಿಗೆ ತರುವುದಾಗಿ ಘೋಷಿಸಿದೆ. ರಾಷ್ಟ್ರೀಯ ಮಾರುಕಟ್ಟೆ ಹಾಗೂ ಜಿಎಸ್‌ಟಿ ಹೆಸರಿನಲ್ಲಿ ಮತ್ತಷ್ಟು ಕೇಂದ್ರೀಕರಣಗೊಂಡು ರೈತರ ಮೇಲೆ ದುಷ್ಪರಿಣಾಮಗಳುಂಟಾಗಲಿವೆ.

ಕೃಷಿ ಸಂಸ್ಕರಣೆಯಲ್ಲಿ ಬಂದಿರುವ ಎಫ್‌ಡಿಐ ನ ಒಂದು ಉದಾಹರಣೆಯನ್ನು ಗಮನಿಸಿ. ಟಯೋಟಾ ತ್ಯಶೋ ಷುಗರ್ಸ್ ಎಂಬ ಸಕ್ಕರೆ ಸಂಸ್ಕರಣಾ ಘಟಕ ಆಂದ್ರಪ್ರದೇಶಕ್ಕೆ ಬಂದಿದೆ. ಈ ರಾಜ್ಯದಲ್ಲಿ ಈಗ ಇರುವ ಸಹಕಾರಿ, ಸರ್ಕಾರಿ, ಖಾಸಗಿ ವಲಯದ ಎಲ್ಲಾ 29 ಸಕ್ಕರೆ ಕಾರ್ಖಾನೆಗಳು ಒಟ್ಟು ಎಷ್ಟು ಸಕ್ಕರೆಯನ್ನು ಸಂಸ್ಕರಿಸುತ್ತವೆಯೋ, ಅಷ್ಟನ್ನೂ ಇದೊಂದೇ ಮಾಡುತ್ತದೆ. ಕೇವಲ 600 ಜನ ಉದ್ಯೋಗಿಗಳು ಇರುವ ಈ ಘಟಕ ಗಮನಾರ್ಹ ಪ್ರಮಾಣದ ಕಚ್ಚಾ ಸಕ್ಕರೆಯನ್ನು ಭಾರತದಿಂದ ಹೊರಗೆ ತರಿಸಿಕೊಳ್ಳುತ್ತದೆ. ಇಂತಹ ಕ್ರಮಗಳು ಭಾರತೀಯ ಕಬ್ಬು ಬೆಳೆಗಾರರನ್ನು ಹಾಗೂ ಸಹಕಾರಿ ರಂಗವನ್ನು ನಾಶಮಾಡುವುದರಲ್ಲಿ ಅನುಮಾನವೇ ಇಲ್ಲ.

2022 ರಷ್ಟು ಹೊತ್ತಿಗೆ ರೈತರ ಆದಾಯವ್ನು ದ್ವಿಗುಣಗೊಳಿಸುತ್ತೇವೆ ಎಂಬ ವ್ಯಾಪಕ ಪ್ರಚಾರವನ್ನು ಬೆಂಬಲಿಸುವಂತಹ ಯಾವ ಯೋಜನೆಗಳನ್ನೂ ಕೇಂದ್ರ ಸರ್ಕಾರ ಹೊಂದಿಲ್ಲ. ಬದಲಾಗಿ ರೈತರ ಆದಾಯವನ್ನು ಕಸಿಯುವ, ಕೃಷಿ ಸಂಸ್ಕರಣ ಹಾಗೂ ಮಾರುಕಟ್ಟೆ ಕ್ಷೇತ್ರಗಳಲ್ಲಿ ಸಾರ್ವಜನಿಕ–ಖಾಸಗಿ ಸಹಭಾಗಿತ್ವದ ಹೆಸರಿನಲ್ಲಿ ಕಂಪನಿ ಹಿತಾಸಕ್ತಿ ಕಾಯುವ ಯೋಜನೆಗಳಿಗೆ ಜೋತು ಬಿದ್ದಿದೆ. ಈಗಾಗಲೇ ಇತ್ತೀಚಿನ ಸಿಎಜಿ ವರದಿ ಬಹಿರಂಗ ಪಡಿಸಿರುವಂತೆ ಪ್ರಧಾನಮಂತ್ರಿ ಬೆಳೆ ವಿಮೆ ಯೋಜನೆಯನ್ನು ಕಾರ್ಪೋರೇಟ್ ವಿಮಾ ಕಂಪನಿಗಳ ತಿಜೋರಿ ತುಂಬಿಸುವಂತೆ ರೂಪಿಸಲಾಗಿದ್ದು ರೈತರಿಗೆ ಸಹಸ್ರಾರು ಕೋಟಿ ರೂ. ಗಳ ವಂಚನೆ ಆಗಿದೆ. ಬಿಜೆಪಿ ಆಳ್ವಿಕೆಯಲ್ಲಿ ಆದಾಯ ದ್ವಿಗುಣವಾಗುವ ಬದಲು ಸಂಕಷ್ಟ ದ್ವಿಗುಣಗೊಳ್ಳುತ್ತಿದೆ.

ನೋಟು ಅಮಾನ್ಯ, ಜಿಎಸ್‌ಟಿ ಹಾಗೂ ಜಾನುವಾರು ಮಾರಾಟ ನಿಷೇದ

ಇಡೀ ದಕ್ಷಿಣ ಭಾರತವೇ ತೀವ್ರ ಬರದಿಂದ ಕಂಗೆಟ್ಟು ನರಳುತ್ತಿರುವಾಗ, ನೋಟು ಅಮಾನ್ಯೀಕರಣದ ನಿರ್ಧಾರ ಹೊರಬಿತ್ತು. ಹಿಂಗಾರು ಬಿತ್ತನೆ ಆರಂಭಗೊಳ್ಳುವ ಸಮಯಕ್ಕೆ ಸರಿಯಾಗಿ ಬಂದ ಈ ನಿರ್ಧಾರ ಗ್ರಾಮೀಣ ಆರ್ಥಿಕತೆ, ಕೃಷಿ ಜೀವನದ ಮೇಲೆ ಮಾರಾಣಾಂತಿಕ ಪೆಟ್ಟು ನೀಡಿತ್ತು. ಕೊಳ್ಳಲು ಹಣ ಇಲ್ಲದ ಕಾರಣ ಕೃಷಿ ಉತ್ಪನ್ನಗಳು ವಿಶೇಷವಾಗಿ ಹಣ್ಣು, ತರಕಾರಿ ಇತ್ಯಾದಿ ಕೊಳೆತು ಹೋದವು. ರೈತಾಪಿ ಜನರ ಜೀವನ ಚಕ್ರವೇ ಅಲ್ಲೋಲ – ಕಲ್ಲೋಲವಾಯಿತು.

ಜಿಎಸ್‌ಟಿ ಜಾರಿಯಿಂದ ಕೂಡ ರೈತರ ಮೇಲೆ ವಿಪರೀತ ಹೊರೆ ಬಿದ್ದಂತಾಗಿದೆ. ಇದೊಂದು ಅಪ್ರತ್ಯಕ್ಷ ತೆರಿಗೆ ಆಗಿದ್ದು, ಪ್ರತಿಯೊಂದು ಕೃಷಿ ಲಾಗುವಾಡು ಖರೀದಿಗೆ ಹೆಚ್ಚುವರಿ ಹಣ ತೆರಬೇಕಾಗಿದೆ. ಮಾತ್ರವಲ್ಲ ಜೀವನಾವಶ್ಯಕ ವಸ್ತುಗಳ ಬೆಲೆಯಲ್ಲಿ ಹೆಚ್ಚಳ ಉಂಟಾಗಿ ಕುಟುಂಬ ನಿರ್ವಹಣೆ ದುಬಾರಿಯಾಗಿದೆ.

ಪ್ರಾಣಿ ಮೇಲಿನ ಕ್ರೌರ್ಯ ತಡೆ ಕಾಯಿದೆಗೆ ಕೆಲವು ಹೊಸ ನಿಯಾಮಾವಳಿಗಳನ್ನು ರೂಪಿಸಿ, ಕೇಂದ್ರ ಸರ್ಕಾರ ಹೊರಡಿಸಿದ ಪ್ರಕಟಣೆ ರೈತರ ಜಾನುವಾರು ಸಂಪತ್ತಿನ ಮೇಲೆ ನಡೆದ ಕ್ರೂರ ದಾಳಿಯಾಗಿದೆ. ಹೈನುಗಾರಿಕೆ ಮೊದಲಾದ ಜಾನುವಾರು ಅವಲಂಬಿತ ಕೋಟ್ಯಾಂತರ ರೈತರ ಮೇಲಿನ ದಾಳಿ ಇದಾಗಿದೆ. ಇದು ಹೈನುಗಾರಿಕೆ, ಚರ್ಮ, ಮಾಂಸ ಉದ್ಯಮದಲ್ಲಿ ನಿರತರಾಗಿರುವ ಕಾರ್ಪೋರೆಟ್ ಕಂಪನಿಗಳಿಗೆ ಮಾರುಕಟ್ಟೆ ಮತ್ತು ಲಾಭವನ್ನು ಒದಗಿಸಿಕೊಡುವ ಅತ್ಯಂತ ಯೋಜಿತವಾದ ನಿರ್ಧಾರವಾಗಿದೆ. ಕುಟುಂಬದ ತುರ್ತು ಸಂದರ್ಭದಲ್ಲಿ, ಬರ ಮತ್ತಿತರ ಪ್ರಕೃತಿ ವಿಕೋಪಗಳ ಸಂದರ್ಭದಲ್ಲಿ ಜಾನುವಾರು ಮಾರಾಟ ರೈತ ಕುಟುಂಬಕ್ಕೆ ರಕ್ಷಾ ಕವಚವಾಗಿತ್ತು. ಅಂತಹ ರಕ್ಷಾ ಕವಚಗಳನ್ನು ಕಿತ್ತುಕೊಂಡಿರುವುದು ಮಾತ್ರವಲ್ಲ, ಕೋಟ್ಯಾಂತರ ಜನರ ಆಹಾರದ ಹಕ್ಕಿನ ಮೇಲೆ ನಡೆಸಿರುವ ದಾಳಿಯೂ ಸಹ ಆಗಿದೆ. ಕಿಸಾನ್ ಸಭಾ ನ್ಯಾಯಾಲಯದಲ್ಲಿ ನಡೆಸಿದ ಕಾನೂನು ಹೋರಾಟದಿಂದ ಸದ್ಯ ತಡೆಯಾಜ್ಞೆ ಸಿಕ್ಕಿದರೂ, ಕೇಂದ್ರ ಸರ್ಕಾರ ತನ್ನ ನಿಲುವಿಗೆ ಅಂಟಿಕೊಂಡು ಕಿರುಕುಳ ನೀಡುವುದನ್ನು ಮುಂದುವರೆಸಿದೆ.

“ಪ್ರತಿ ಹಳ್ಳಿಯಲ್ಲೂ ಕಿಸಾನ್ ಸಭಾ – ಪ್ರತಿ ರೈತನೂ ಕಿಸಾನ್ ಸಭಾದಲ್ಲಿ” ಸಮ್ಮೇಳನದ ಘೋಷಣೆ

ವಿಶಾಲ ಜನಸಮುದಾಯವನ್ನು ನಿರುದ್ಯೋಗ ಮತ್ತು ಬಡತನದಲ್ಲಿ ಇರಿಸಿರುವ ಕಾರ್ಷಿಕ ಪರಿಸ್ಥಿತಿಯನ್ನು ಬದಲಾಯಿಸಲು ದೇಶದ ಎಲ್ಲಾ ರೈತರನ್ನು ಕಿಸಾನ್ ಸಭಾ ನೇತೃತ್ವದಲ್ಲಿ ಸಂಘಟಿಸಲು ಸಮ್ಮೇಳನ ತೀರ್ಮಾನಿಸಿತು. ಸಮಸ್ಯೆಗಳ ಆಧಾರದಲ್ಲಿ ಐಕ್ಯ ಚಳುವಳಿ ಬೆಳೆಸುವುದನ್ನು ಪ್ರಧಾನ ಘೋಷಣೆಯಾಗಿಟ್ಟುಕೊಂಡಿದ್ದ ಸಮ್ಮೇಳನ, ಈ ಕೆಲಸ ಸಾಧ್ಯ ಆಗಬೇಕಾದರೆ ಕಿಸಾನ್ ಸಭಾದ ಸಂಘಟನಾತ್ಮಕ ಬಲ ಹೆಚ್ಚು ಮಾಡುವುದು ಅಗತ್ಯ ಎಂದು ಪ್ರತಿಪಾದಿಸಿತು. ಈ ಹಿನ್ನೆಲೆಯಲ್ಲಿ “ಪ್ರತಿಹಳ್ಳಿಯಲ್ಲಿ ಕಿಸಾನ್ ಸಭಾ, ಪ್ರತಿ ರೈತನೂ ಕಿಸಾನ್ ಸಭಾದಲ್ಲಿ” ಎಂಬ ಘೋಷಣೆಯನ್ನು ನೀಡಿದೆ.

ನಿರ್ದಿಷ್ಟ ಅವಧಿಯಲ್ಲಿ ಸದಸ್ಯತ್ವ ನೊಂದಾವಣಿ ಮಾಡುವುದು, ಸದಸ್ಯತ್ವವನ್ನು ದಾಖಲಿಸಿ, ಮಹಿಳೆ, ದಲಿತ ಸದಸ್ಯರ ಸಂಖ್ಯೆ ಎಷ್ಟು ಎಂಬುದನ್ನು ಪರೀಶೀಲಿಸುವುದು ಮುಖ್ಯ ಸಂಘಟಾನಾತ್ಮಕ ಕರ್ತವ್ಯ ಎಂದಿರುವ ಸಮ್ಮೇಳನ ಪ್ರಾಥಮಿಕ ಘಟಕಗಳ ನೊಂದಣಿ ಮತ್ತು ಕಾರ್ಯಚಟುವಟಿಕೆಗೆ ತೀವ್ರ ಗಮನ ನೀಡಬೇಕೆಂದು ಒತ್ತಿ ಹೇಳಿದೆ.

****

ಕರ್ನಾಟಕದಿಂದ CKC, AIKC ಯಲ್ಲಿ

ಎಲ್ಲ ಹಂತಗಳಲ್ಲೂ ಸಾಮೂಹಿಕ ನಾಯಕತ್ವದ ಕಾರ್ಯ ವಿಧಾನವನ್ನು ಬಲಪಡಿಸಿ, ಅಗತ್ಯ ನಿಧಿ ಸಂಗ್ರಹಕ್ಕೆ ಗಮನ ನೀಡಬೇಕೆಂದು ಸಮ್ಮೇಳನವು ನಿರ್ದೇಶಿಸಿದೆ. ಸಮ್ಮೇಳನದ ರಾಜಕೀಯ, ಆರ್ಥಿಕ–ಕಾರ್ಷಿಕ ಹಾಗೂ ಸಂಘಟನಾತ್ಮಕ ನಿರ್ಣಯಗಳನ್ನು ಜಾರಿ ಮಾಡಲು 65 ಜನರ CKC (ಕೇಂದ್ರೀಯ ಕಿಸಾನ್ ಮಂಡಳಿ) ಯನ್ನು ಮತ್ತು 141 ಜನರ AIKC(ಅಖಿಲ ಭಾರತ ಕಿಸಾನ್ ಕೌನ್ಸಿಲ್) ಯನ್ನು ಆಯ್ಕೆ ಮಾಡಿತು. ಕರ್ನಾಟಕದಿಂದಸಿ.ಕೆ.ಸಿ. ಸದಸ್ಯರಾಗಿ ಜಿ.ಸಿ. ಬಯ್ಯಾರೆಡ್ಡಿ, ಯು. ಬಸವರಾಜು, ಹಾಗೂ AIKC ಸದಸ್ಯರಾಗಿ ಜಿ.ಸಿ. ಬಯ್ಯಾರೆಡ್ಡಿ, ಯು. ಬಸವರಾಜು, ಮಾರುತಿ ಮಾನ್ಪಡೆ, ವೆಂಕಟಾಚಲಯ್ಯ, ನಾಗರಾಜು ಆಯ್ಕೆಯಾಗಿದ್ದಾರೆ.

ಇದೇ ಸಂದರ್ಭದಲ್ಲಿ ಸಮ್ಮೇಳನವು ರೈತಾಪಿ ಚಳುವಳಿಯ ಪ್ರಮುಖ ವಿಷಯುಗಳಾದ ಕೃಷಿ ಆದಾಯ, ವೆಚ್ಚ ಹಾಗೂ ದರ, ಗ್ರಾಮೀಣ ಸಾಲ ಸ್ಥಿತಿ–ಗತಿ, ಬೆಳೆ ವಿಮೆ ಹಾಗೂ ಆದಾಯ ನಷ್ಟ, ಜಂಟಿ ಚಳುವಳಿಗಳು ಕುರಿತಂತೆ ಆಯೋಗವನ್ನು ರಚಿಸಿ ವಿವರವಾಗಿ ಚರ್ಚೆಗೆ ಒಳಪಡಿಸಿತು. ●

ಅಸ್ಥಿರ ಆರ್ಥಿಕತೆ ಮತ್ತು ಜಿಡಿಪಿ ಕುಸಿತ............

ಪುಟ 6 ರಿಂದ

ಕೇವಲ ಅಣಕವಾಡುವುದರಲ್ಲಿ ಯಶಸ್ವಿಯಾದರೆ ವಿನಾ ಜಿಡಿಪಿ ಯಲ್ಲಿನ ಕುಸಿತಕ್ಕೆ ಕಾರಣಗಳನ್ನಾಗಲಿ ಅಥವಾ ಅದಕ್ಕೆ ಪರಿಹಾರಗಳ ಬಗ್ಗೆಯಾಗಲಿ ಮಾತನಾಡಲಿಲ್ಲ. ಒಬ್ಬರು ‘ಹಾರ್ವರ್ಡ್–ಹಾರ್ಡ್‌ವರ್ಕ್’ ಎಂದು ಮನಮೋಹನ್ ಸಿಂಗ್ ಬಗ್ಗೆ ಅಣಕವಾಡಿದರೆ ಮತ್ತೊಬ್ಬರು ‘80ನೆಯ ವಯಸ್ಸಿನಲ್ಲಿ ಮಂತ್ರಿಯಾಗುವುದಕ್ಕೆ ಸಿದ್ಧವಾಗಿರುವವರು’ ಎಂದು ಯಶವಂತ್ ಸಿನ್ಹಾ ಬಗ್ಗೆ ಅಣಕವಾಡುತ್ತಿದ್ದಾರೆ. ಅಣಕದಿಂದ ದೇಶವನ್ನು ಕಟ್ಟುವುದು ಸಾಧ್ಯವಿಲ್ಲ. ಇದು ಕೇವಲ ಪಲಾಯನವಾದವಾದೀತು. ಅಭಿವೃದ್ಧಿ ಮೂಲಭೂತವಾಗಿ ಮಹಿಳೆಯರನ್ನು ಸೇರಿಸಿಕೊಂಡು ಜನರಿಗೆ ಸಂಬಂಧಿಸಿದ ಸಂಗತಿ. ಸ್ವಚ್ಛತಾ ಅಭಿಯಾನ ಬೇಕು. ಆದರೆ ಅದು ನಮ್ಮ ಇಂದಿನ ಸಾಮಾಜಿಕ–ಆರ್ಥಿಕ ಮತ್ತು ಸಾಂಸ್ಕೃತಿಕ ಸನ್ನಿವೇಶದಲ್ಲಿ ಆದ್ಯತೆಯ ಸಂಗತಿಯಾಗುವುದಕ್ಕೆ ಸಾಧ್ಯವಿಲ್ಲ. ಬಡವರಿಗೆ, ಸಮಾಜದಲ್ಲಿ ಅಂಚಿನಲ್ಲಿರುವವರಿಗೆ, ಕಾರ್ಮಿಕರಿಗೆ, ರೈತರಿಗೆ, ಮಹಿಳೆಯರಿಗೆ ಅಗತ್ಯವಾಗಿರುವುದು ಉದ್ಯೋಗ, ಆಹಾರ, ಆರೋಗ್ಯ, ಅಕ್ಷರ ಮುಂತಾದವು. ಎಲ್ಲಿಯುವರೆಗೆ ಜನರನ್ನು ಅಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳುವುದಿಲ್ಲವೋ, ಜನರ ಬವಣೆಗಳಿಗೆ ಸರ್ಕಾರ ಸ್ಪಂದಿಸುವುದಿಲ್ಲವೋ ಅಲ್ಲಿಯುವರೆಗೆ ಜಿಡಿಪಿಯ ಬೆಳವಣಿಗೆ ದರವು ಉತ್ತಮವಾಗುವುದಿಲ್ಲ. ದಲಿತರನ್ನು ಮತ್ತು ಶೂದ್ರರನ್ನು, ಅಲ್ಪಸಂಖ್ಯಾತರನ್ನು ಸೂಕ್ಷ್ಮ ಕ್ರಮಗಳ ಮೂಲಕ, ಪ್ರಚ್ಛನ್ನ ರೀತಿಯಲ್ಲಿ, ಪೌರೋಹಿತ್ಯದ ಸೋಗಿನಲ್ಲಿ, ಯಜ್ಞದ ಪರಿಭಾಷೆಯಲ್ಲಿ ಹತ್ತಿಕ್ಕುತ್ತಿರುವುದನ್ನು ಸರ್ಕಾರ ಮೊದಲು ನಿಲ್ಲಿಸಬೇಕು. ಈ ಸಮಾಜದಲ್ಲಿ ಅಭಿವೃದ್ಧಿಯ ಅಡಿಪಾಯ ಅಂದರೆ ದಲಿತರು, ಶೂದ್ರರು ಮತ್ತು ಅಲ್ಪಸಂಖ್ಯಾತರು ಹಾಗೂ ಅವರ ದುಡಿಮೆ. ಪರಿಶುದ್ಧತೆ, ಮಡಿ, ಸ್ವಚ್ಛತೆ ಅಭಿಯಾನ, ನಮಾಮಿ ಗಂಗೆ ಮುಂತಾದವು ಅವರನ್ನು ಅಪ್ರತ್ಯಕ್ಷವಾಗಿ ಅವಮಾನ ಪಡಿಸುವ ಸಂಗತಿಗಳಾಗಿವೆ. ಸ್ವಚ್ಛತೆ ಯಾರಿಗೆ ಬೇಡ? ಸ್ವಚ್ಛತೆ ಅನ್ನುವುದು ಮೇಲಿನಿಂದ ಹೇರುವುದರಿಂದ ಬರುವುದಿಲ್ಲ. ಬೆವರು, ಕಣ್ಣೀರು ಮತ್ತು ರಕ್ತ ಹರಿಸಿ ದುಡಿಮೆ ಮಾಡುವವರಿಗೆ ಮೊದಲು ಆಹಾರದ ಭದ್ರತೆ ನೀಡಿ. ಅವರನ್ನು ಹಸಿವಿನಿಂದ ಬಿಡುಗಡೆಗೊಳಿಸಿ. ಅವರಿಗೆ ಉದ್ಯೋಗ ನೀಡಿ. ಉಪದೇಶ, ಘರ್ಜನೆ, ಭಾಷಣಗಳಿಂದ ಜಿಡಿಪಿಯ ಬೆಳವಣಿಗೆಯನ್ನು ನಿರ್ವಹಿಸುವುದು ಸಾಧ್ಯವಿಲ್ಲ. ಅನ್ನ ಕೇಳಿದವರಿಗೆ ಶೌಚಾಲಯ ಕಟ್ಟಿಸಿಕೊಳ್ಳಿ ಅನ್ನುವ ಅಮಾನವೀಯ ಕ್ರಮಗಳನ್ನು ಸ್ವಾಮಿ ವಿವೇಕಾನಂದ ಸಂವಿಧಾನವೂ ಒಪ್ಪುವುದಿಲ್ಲ. ●

ಭ್ರಮಾಲೋಕದ ಸೃಷ್ಟಿಕಾರ್ಯವನ್ನೂ ಮೀರಿ 'ನಿರಾಶಾವಾದದ ವಲಯ'ದ ವಿಸ್ತರಣೆ

ಭಾರತ ದೇಶ ಈಗ ಆರ್ಥಿಕ ಮಂದಗತಿಯನ್ನು ಎದುರಿಸುತ್ತಿದೆ ಎಂದು ಪ್ರಧಾನ ಮಂತ್ರಿಗಳ ಆರ್ಥಿಕ ಸಲಹಾ ಮಂಡಳಿ ಹೇಳಿದೆ. ಈ ಬಗ್ಗೆ ಮಂಡಳಿಯ ಎಲ್ಲ ಐದು ತಜ್ಞರಲ್ಲಿ ಒಮ್ಮತವಿದೆ ಎಂದು ಮಂಡಳಿಯ ಪರವಾಗಿ ಡಾ.ಬಿಬೇಕ್ ದೇವ್ರಾಯ್ ಹೇಳಿದ್ದಾರೆ. ಇತ್ತೀಚಿನ ತಿಂಗಳುಗಳಲ್ಲಿ ಆರ್ಥಿಕ ಪರಿಸ್ಥಿತಿಯ ಬಗ್ಗೆ ಎಲ್ಲೆಡೆಗಳಿಂದ ಆತಂಕ ವ್ಯಕ್ತವಾಗುತ್ತಿರುವ, ಈ ಆತಂಕ ಆಳುವ ಪಕ್ಷವನ್ನೂ ಆವರಿಸುವ ಲಕ್ಷಣಗಳ ಹಿನ್ನೆಲೆಯಲ್ಲಿ, ಪ್ರಧಾನ ಮಂತ್ರಿಗಳು ಈ ಸಲಹಾಮಂಡಳಿಯನ್ನು ನೇಮಿಸಿದ್ದರು.

ಆದರೆ ನಂತರವೂ ಈ ಬಗ್ಗೆ ಅನಗತ್ಯವಾಗಿ ಗದ್ದಲ ಎಬ್ಬಿಸಲಾಗುತ್ತಿದೆ, ಹೀಗೆ ಹೇಳುವವರು ಮಹಾಭಾರತದ ಶಲ್ಯನಂತೆ ನಿರಾಶಾವಾದಿಗಳು ಎಂದು ಪ್ರಧಾನ ಮಂತ್ರಿಗಳು ಹೇಳುತ್ತಿದ್ದಾರೆ.

ಈ ಮಂದಗತಿಗೆ ಕಾರಣಗಳೇನು ಎಂದೂ ತಾವು ಚರ್ಚಿಸಿದ್ದೇವೆ, ಆದರೆ ಅದನ್ನು ಪ್ರಧಾನ ಮಂತ್ರಿಗಳಿಗೆ ಮಾತ್ರ ಹೇಳುತ್ತೇವೆ ಎಂದು ದೇವ್ರಾಯ್ ಹೇಳಿರುವುದಾಗಿ ವರದಿಯಾಗಿದೆ. ಮುಂದಿನ ಆರು ತಿಂಗಳಲ್ಲಿ ಬೆಳವಣಿಗೆ ಮತ್ತು ಉದ್ಯೋಗ ನಿರ್ಮಾಣದ ವೇಗವನ್ನು ಹೆಚ್ಚಿಸುವುದು ಮಂಡಳಿಯ ಆದ್ಯತೆಗಳಾಗಿರುತ್ತವೆ ಎಂದು ಅವರು ಹೇಳಿದ್ದಾರೆ.

ಸಲಹಾಮಂಡಳಿ ಹೀಗೆ ಹೇಳುವ ಮೊದಲೇ ಕಳೆದ ವಾರ ಭಾರತೀಯ ರಿಝರ್ವ್ ಬ್ಯಾಂಕ್ ಬಳಕೆದಾರರ ವಿಶ್ವಾಸ ಕುಸಿಯುತ್ತಿದೆ, ಹಣದುಬ್ಬರ ಏರುತ್ತಿದೆ ಮತ್ತು ಉದ್ಯೋಗಾವಕಾಶಗಳು ಕುಸಿಯುತ್ತಿವೆ ಎಂದು ಈಗ ಹೆಚ್ಚೆಚ್ಚು ಭಾರತೀಯರು ನಂಬಲಾರಂಭಿಸಿದ್ದಾರೆ ಎಂದು ತಾನು ನಡೆಸಿರುವ ನಾಲ್ಕು ಸರ್ವೆಗಳ ಆಧಾರದಲ್ಲಿ ಹೇಳಿತ್ತು. **ಆರ್ಥಿಕ ಸನ್ನಿವೇಶದ ಬಗ್ಗೆ ಸಾಮಾನ್ಯವಾಗಿ ಜನಗಳ ಗ್ರಹಿಕೆ ಕಳೆದ ನಾಲ್ಕು ತ್ರೈಮಾಸಿಕಗಳಲ್ಲಿ, ನಿರಾಶಾವಾದದ ವಲಯದಲ್ಲೇ ಇದೆ, ಮತ್ತು ಅದು ಇನ್ನಷ್ಟು ಆಳಕ್ಕೆ ಹೋಗುವಂತೆ ಕಾಣುತ್ತಿದೆ** ಎಂದು ಅದು ಹೇಳುವ ಮೂಲಕ ಈ ನಿರಾಶಾವಾದ ಪ್ರಧಾನಿಗಳು ಭಾವಿಸಿದಂತೆ ಕೆಲವು ಆಧುನಿಕ ಶಲ್ಯರುಗಳು ಮತ್ತು ಪ್ರತಿಪಕ್ಷಗಳು ಹರಡಿಸಿರುವಂತದ್ದಲ್ಲ ಎಂಬುದು ಸ್ಪಷ್ಟವಾಗಿತ್ತು.

ಆದರೂ ಹಣಕಾಸು ಮಂತ್ರಿಗಳು ಐಎಂಎಫ್ ಸಭೆಯಲ್ಲಿ ಭಾಗವಹಿಸಲು ಅಮೆರಿಕಾಕ್ಕೆ ಹೋಗುವ ಮೊದಲು ನೋಟು ರದ್ದತಿ ಮತ್ತು ಜಿಎಸ್‌ಟಿ ಭಾರತದ ಆರ್ಥಿಕವನ್ನು ಗಟ್ಟಿಗೊಳಿಸಿದೆ ಎಂದು ಹೇಳುತ್ತಲೇ ಹೋದರು.

ಆದರೆ ಸ್ವತಃ ಐಎಂಎಫ್ ಜಾಗತಿಕ ಆರ್ಥಿಕದ ಬಗ್ಗೆ ಆಶಾವಾದವನ್ನು ವ್ಯಕ್ತಪಡಿಸುತ್ತಲೇ ಭಾರತದ ಬೆಳವಣಿಗೆ ನೋಟವನ್ನು 7.2% ದಿಂದ 6.7%ಕ್ಕೆ ಇಳಿಸಿದೆ. ಅಷ್ಟೇ ಅಲ್ಲ, ಇದಕ್ಕೆ ನೋಟುರದ್ಧತಿ ಮತ್ತು ಜಿಎಸ್‌ಟಿ ಕಾರಣ ಎಂದೂ ಹೇಳಿದೆ. ಮರುದಿನ ವಿಶ್ವ ಬ್ಯಾಂಕ್ ಕೂಡ ಜಿಡಿಪಿ ಬೆಳವಣಿಗೆ ದರ 2015ರಲ್ಲಿ 8.6% ಇದ್ದದ್ದು 2017ರಲ್ಲಿ 7%ಕ್ಕೆ ಇಳಿಯಲಿದೆ ಎಂದಿದೆ. ಅದೂ ಈ ಎರಡು ಕಾರಣಗಳನ್ನೇ ಕೊಟ್ಟಿದೆ.

ಆದರೂ ನಮ್ಮ ಮಾನ್ಯ ಹಣಕಾಸು ಮಂತ್ರಿಗಳು ತಮ್ಮ ರಾಗವನ್ನು ಇನ್ನೂ ಬದಲಿಸಿಲ್ಲ. ಅದಕ್ಕೆ ಮುಕುಟವಿಟ್ಟಂತೆ ಈ ವರ್ಷ ಅರ್ಥಶಾಸ್ತ್ರದ ನೋಬೆಲ್ ಪ್ರಶಸ್ತಿ ಪಡೆದಿರುವ ರಿಚರ್ಡ್ ಥೇಲರ್ ಕೂಡ ನೋಟುರದ್ಧತಿಯನ್ನು ಬೆಂಬಲಿಸಿದ್ದರು ಎಂದು ಬಿಜೆಪಿ ಐಟಿ ಸೆಲ್‌ನ ಮುಖ್ಯಸ್ಥ ಫೇಸ್‌ಬುಕ್‌ನಲ್ಲಿ ಇನ್ನೊಂದು ಅರೆ ಸತ್ಯವನ್ನು ತೇಲಬಿಟ್ಟರು. ಅದನ್ನು ಎಲ್ಲ ಬಿಜೆಪಿ ಮುಖಂಡರುಗಳು ಹರಡಿಸಿದರು. ಆದರೆ 1000ರೂ. ನೋಟಿನ ಬದಲು 2000ರೂ. ನೊಟುಗಳನ್ನು ತರಲಾಗಿದೆ ಎಂದು ಥೇಲರ್ ಅವರಿಗೆ ಒಬ್ಬರು ತಿಳಿಸಿದಾಗ "ರಿಯಲಿ? ಡ್ಯಾಮ್!" (ನಿಜವಾಗಿಯೂ? ದಿಕ್ಕಾರ!) ಎಂದು ಅವರು ಹೇಳಿದ್ದರು ಎಂಬುದು ಬಯಲಾಗಿ ಈ ಅರ್ಟಿಫಿಕೇಟ್ ಕೂಡ ಫೇಕ್ ಎಂದು ಬಯಲಾಯಿತು.

ಆದರೂ ಭ್ರಮಾ ಲೋಕದ ಸೃಷ್ಟಿಕಾರ್ಯ ನಿಲ್ಲುವಂತೆ ಕಾಣುತ್ತಿಲ್ಲ. ಆರ್ಥಿಕ ಸಲಹಾ ಮಂಡಳಿ ಆರ್ಥಿಕ ನಿಧಾನಗತಿಗೆ ಕಾರಣಗಳನ್ನು ಪ್ರಧಾನಿಗಳಿಗೆ ಗುಟ್ಟಾಗಿ ಹೇಳಿದ ಮೇಲೆ ಈ ಸೃಷ್ಟಿಕಾರ್ಯ ಯಾವ ರೂಪ ತಳೆಯುತ್ತದೆ ಎಂದು ಕಾದು ನೋಡಬೇಕು.

100 ಅತಿಶ್ರೀಮಂತರ ಸಂಪತ್ತಿನಲ್ಲಿ 26% ಹೆಚ್ಚಳ!

ದೇಶ ಇಂತಹ ಆರ್ಥಿಕ ನಿರಾಶೆಯಲ್ಲಿದ್ದರೂ ಇದು ದೇಶದ ಶ್ರೀಮಂತರನ್ನು ಎಳ್ಳಷ್ಟೂ ತಟ್ಟಿಲ್ಲ, ಬದಲಿಗೆ ಅವರು ಇನ್ನಷ್ಟು ಶ್ರೀಮಂತರಾಗಿದ್ದಾರೆ ಎಂದು ಫೋರ್ಬ್ಸ್ ಮ್ಯಾಗಜಿನ್‌ನ ವಾರ್ಷಿಕ "ಭಾರತೀಯ ಶ್ರೀಮಂತರ ಪಟ್ಟಿ 2017' ದೃಢಪಡಿಸಿದೆ.

ದೇಶದ 100 ಅತ್ಯಂತ ಶ್ರೀಮಂತ ವ್ಯಕ್ತಿಗಳ ಸಂಪತ್ತಿನಲ್ಲಿ 26% ವೃದ್ಧಿಯಾಗಿದೆ ಎಂದು ಅದು ಹೇಳಿದೆ.

ಆಳುವವರ ಪ್ರಿಯಮಿತ್ರ ಮುಕೇಶ್ ಅಂಬಾನಿ ಸತತ 10ನೇ ವರ್ಷವೂ ಮೊದಲ ಸ್ಥಾನದಲ್ಲಿ ಗಟ್ಟಿಯಾಗಿದ್ದು, ಪ್ರಧಾನಿಗಳ ರಾಜ್ಯದ ಇನ್ನೊಬ್ಬ ಉದ್ಯಮಿ ಗೌತಮ್ ಅದಾನಿಯ ಸಂಪತ್ತು 6.3 ಬಿಲಿಯ ಡಾಲರುಗಳಿಂದ 11 ಬಿಲಿಯ ಡಾಲರುಗಳಿಗೆ ಅಂದರೆ ಸುಮಾರು ದುಪ್ಪಟ್ಟಾಗಿದೆ, ಶ್ರೀಮಂತರ ಪಟ್ಟಿಯಲ್ಲಿ ಆತನ ಸ್ಥಾನ 13ರಿಂದ 10ಕ್ಕೇರಿದೆ. ಪ್ರಧಾನಿಗಳ ಮತ್ತೊಬ್ಬ ಅಭಿಮಾನಿ ಯೋಗಗುರು ರಾಂದೇವ್ ಅವರ ಪತಂಜಲಿ ಆಯುರ್ವೆದದ ಮಾಲಕ ಆಚಾರ್ಯ ಬಾಲಕೃಷ್ಣ ಪಟ್ಟಿಯಲ್ಲಿ 48ನೇ ಸ್ಥಾನದಿಂದ 19ನೇ ಸ್ಥಾನಕ್ಕೆ ಭಾರೀ ಜಿಗಿತ ಕಂಡಿದ್ದಾರೆ. ಎಲ್ಲವೂ ಅಚ್ಛೇ ದಿನ್‌ಗಳ ಮಾಯೆ!



'ನಯಾ ಭಾರತ್'ನಲ್ಲಿ

ಭ್ರಷ್ಟಾಚಾರ ತಡೆಯುವ ಈ ಪರಿ!

ಆಳುವ ಪಕ್ಷದ ಅಧ್ಯಕ್ಷರ ಮಗನ 'ವ್ಯವಹಾರ'ಗಳ ಕುರಿತ ವರದಿಯ ಹಿನ್ನೆಲೆಯಲ್ಲಿ ಭ್ರಷ್ಟಾಚಾರದ ವಿರುದ್ಧ ಅಚ್ಛೇದಿನ್‌ವಾಲಾಗಳ ಪ್ರಚಾರ ಎಷ್ಟು ಪ್ರಾಮಾಣಿಕ ಎಂಬ ದೊಡ್ಡ ಪ್ರಶ್ನೆ ಚಿಹ್ನೆ ಎಲ್ಲೆಡೆಯೂ ಬರುವ ಮೊದಲು (ಪುಟ 7ರಲ್ಲಿ ಪ್ರಕಟವಾಗಿರುವ ಪ್ರಾಕಾಶ ಕಾರಟ್ ರವರ ಲೇಖನ ನೋಡಿ) ಈ ಬಗ್ಗೆ ಹಲವು ಸಂಕೇತಗಳು ಒಂದಾದ ಮೇಲೊಂದರಂತೆ ಬರುತ್ತಲೇ ಇದ್ದವು. ಇತ್ತೀಚಿನ ಎರಡು ಸುದ್ದಿಗಳು ಇಲ್ಲಿವೆ:

ಈ ವರ್ಷ ದೀಪಾವಳಿ ಮೊದಲೇ ಬಂದಿದೆ

ಎಂದು ಪ್ರಧಾನ ಮಂತ್ರಿಗಳು ಗುಜರಾತಿನಲ್ಲಿ ಹೇಳಿರುವುದಾಗಿ ವರದಿಯಾಗಿದೆ. ಇದಕ್ಕೆ ಹಿಂದಿನ ದಿನ ಜಿಎಸ್‌ಟಿ ಮಂಡಳಿಯ ವಿಶೇಷ ಸಭೆ ಕರೆದು 27 ಐಟಂಗಳ 'ತೆರಿಗೆ ಕಡಿತ ಮಾಡಿದ ಪ್ರಕಟಣೆಯ ಹಿನ್ನೆಲೆಯಲ್ಲಿ ಅವರು ಈ ಮಾತು ಹೇಳಿರುವುದು ಹಲವರಿಗೆ ಆಶ್ಚರ್ಯ ಉಂಟು ಮಾಡಿದೆ. ಆದರೆ ತಾವೇ ಜಿಎಸ್‌ಟಿ ಹೆಸರಲ್ಲಿ ತೆರಿಗೆಗಳನ್ನು ಹೆಚ್ಚಿಸಿ ನಂತರ ತುಸು ಇಳಿಸಿ ತಮ್ಮ ಬೆನ್ನು ತಾವೇ ತಟ್ಟಿಕೊಳ್ಳುವ ಈ ಕ್ರಮ 'ಅಚ್ಛೇ ದಿನ್'ಗಳಲ್ಲಿ ಹೊಸದೇನೂ ಅಲ್ಲವಲ್ಲ.

ಈ 27 ಐಟಂಗಳಲ್ಲಿ ಬಹಳಷ್ಟು ಈ ಡಿಸೆಂಬರ್‌ನಲ್ಲಿ ಚುನಾವಣೆಗೆ ಸಿದ್ಧವಾಗುತ್ತಿರುವ, ಜಿಎಸ್‌ಟಿ ವಿರುದ್ಧ ವ್ಯಾಪಕ ಪ್ರತಿಭಟನೆ ಕಂಡ ಗುಜರಾತಿಗೆ ಹೆಚ್ಚು ಅನ್ವಯವಾಗುವಂತದ್ದು ಎಂದು ಹೇಳಲಾಗಿದೆ.

ಇದೇ ಸಂದರ್ಭದಲ್ಲಿ ಮಾಡಿರುವ ಇನ್ನೊಂದು ಪ್ರಕಟಣೆ ಕಪ್ಪು ಹಣವನ್ನು ಬಿಳಿ ಮಾಡುವುದನ್ನು ತಡೆಯಲೆಂದು ತಂದಿರುವ ಕಾಯ್ದೆಯಾದ 'ಪಿಎಂಎಲ್‌ಎ'(ಪ್ರಿವೆಂಶನ್ ಆಫ್ ಮನಿ ಲಾಂಡರಿಂಗ್ ಆಕ್ಟ್) ಅಡಿಯಲ್ಲಿ ಆಗಸ್ಟ್ 23ರಂದು ಪ್ರಕಟಿಸಿದ ಅಧಿಸೂಚನೆ ಕುರಿತಾದದ್ದು. ಚಿನ್ನಾಭರಣಗಳು ಇತ್ಯಾದಿ ಕಪ್ಪು ಹಣವನ್ನು ಬಿಳಿ ಮಾಡುವ ಸಾಧನಗಳಾಗಿದ್ದು, ಅದನ್ನು ತಡೆಯಲೆಂದು ಈ ಕುರಿತ ವ್ಯವಹಾರಗಳನ್ನು ಈ ಕಾಯ್ದೆಯ ವ್ಯಾಪ್ತಿಯೊಳಕ್ಕೆ 'ಧೈರ್ಯದಿಂದ' ತಂದಿರುವ 'ಭ್ರಷ್ಟಾಚಾರ–ವಿರೋಧಿ' ಕ್ರಮ ಈ ಅಧಿಸೂಚನೆ ಎಂದು ಆಳುವ ಪಕ್ಷದ ಮುಖಂಡರು ಹೇಳಿಕೊಂಡಿದ್ದರು. ಏಕೆಂದರೆ ಈ ಕಾಯ್ದೆಯ ಅಡಿಯಲ್ಲಿ 50,000ರೂ.ಗಿಂತ ಹೆಚ್ಚಿನ ನಗದು ಠೇವಣಿಗಳನ್ನು ಬ್ಯಾಂಕುಗಳು ಸರಕಾರಕ್ಕೆ ತಿಳಿಸಬೇಕು.

ಆದರೆ ಈಗ ಈ ಅಧಿಸೂಚನೆಯನ್ನು ಹಿಂತೆದುಕೊಳ್ಳಲಾಗಿದೆ. ಇದು ಕೂಡ ಗುಜರಾತ್ ಚುನಾವಣೆಗಳ ಹಿನ್ನೆಲೆಯಲ್ಲಿ ಕೈಗೊಂಡಿರುವ ಕ್ರಮ ಎಂದು ಪಿಟಿಐ ವರದಿ ಸೂಚಿಸುತ್ತದೆ.

ಈ ನಡುವೆ ಹಿಮಾಚಲ ಪ್ರದೇಶದ ಚುನಾವಣೆಗಳ ವೇಳಾಪಟ್ಟಿಯನ್ನು ಪ್ರಕಟಿಸಿದರೂ ಗುಜರಾತ್ ವಿಧಾನಸಭಾ ಚುನಾವಣೆಗಳ ಬಗ್ಗೆ ಚುನಾವಣಾ ಆಯೋಗ ಏನೂ ಹೇಳಿಲ್ಲ ಎಂದು ವರದಿಯಾಗಿದೆ. ಬಹುಶಃ ಇನ್ನಷ್ಟು ಇಂತಹ ಕ್ರಮಗಳು ಬರಲಿವೆ ಎಂಬುದರ ಸಂಕೇತವೇ ಎಂದು ರಾಜಕೀಯ ವಿಶ್ಲೇಷಕರು ಕೇಳುತ್ತಿದ್ದಾರೆ.

ಇದಕ್ಕೆ ಮೊದಲು ಸಪ್ಟಂಬರ್ 30ರಂದು ಶೇರು ವ್ಯವಹಾರಗಳ ನಿಯಂತ್ರಣದ ಸಂಸ್ಥೆ ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯ(ಸೆಬಿ) ಕುಡ ತನ್ನ ಒಂದು ಸುತ್ತೋಲೆಯನ್ನು ಕಳಿಸಿ ಆಗಸ್ಟ್‌ನಲ್ಲಿ ನೀಡಿದ್ದ ತನ್ನ ನಿರ್ದೇಶನದ ಜಾರಿಯನ್ನು ಮುಂದೂಡಿರುವುದಾಗಿ ತಿಳಿಸಿದೆ.

ಆಗಸ್ಟ್ ತಿಂಗಳಲ್ಲಿ ಕಂಪನಿಗಳು ಬ್ಯಾಂಕುಗಳಿಂದ ಅಥವ ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲಗಳ ಮರುಪಾವತಿ ಅಥವ ಬಡ್ಡಿ ಪಾವತಿಯಲ್ಲಿ ವಿಳಂಬ ಮಾಡಿದ್ದರೆ ಅವನ್ನು ತಿಳಿಸಬೇಕು ಎಂದು ನಿರ್ದೇಶನ ನೀಡಿತ್ತು. ಇದು ಕಾರ್ಪೊರೇಟ್‌ಗಳು ದುರುದ್ದೇಶಪೂರ್ವಕವಾಗಿ ಸುಸ್ತಿದಾರರಾಗುವುದನ್ನು ತಪ್ಪಿಸುವ ಕ್ರಮ ಎನ್ನಲಾಗಿತ್ತು. ಇದು ಅಕ್ಟೋಬರ್ 1ರಿಂದ ಜಾರಿಗೆ ಬರಬೇಕಾಗಿತ್ತು. ಆದರ ಅದರ ಹಿಂದಿನ ದಿನವಷ್ಟೇ ಅದರ ಜಾರಿಯನ್ನು ಮುಂದಿನ ಸೂಚನೆ ಕೊಡುವ ವರೆಗೆ ಮುಂದೂಡಲಾಗಿದೆ ಎಂಬ ಸುತ್ತೋಲೆಯನ್ನು ಸೆಬಿ ಕಳಿಸಿದೆ.

ಅಚ್ಛೇ ದಿನ್‌ಗಳಲ್ಲಿ ಕೆಲಸ ಕಳಕೊಳ್ಳುವುದೂ 'ಬಹಳ ಒಳ್ಳೆಯ ಸಂಕೇತ'!

ಹೌದು, ಇದು ರೈಲ್ವೆ ಇಲಾಖೆಗೆ ಹೊಸದಾಗಿ ನೇಮಕಗೊಂಡಿರುವ ದಕ್ಷ ಮಂತ್ರಿಗಳ ಹೊಸ ರೈಲು. ಅವರು ಇಡೀ ದೇಶದ ಯುವಜನತೆಯಲ್ಲಿ ಹೊಸ ಹುರುಪನ್ನು ತುಂಬಿರುವ ಹೇಳಿಕೆ! ಈ ರೀತಿ ಕೆಲಸ ಕಳಕೊಳ್ಳುವುದು ಎಂದರೆ ಹೆಚ್ಚೆಚ್ಚು ಯುವಜನರು ಉದ್ಯಮಿಗಳಾಗ ಬಯಸುತ್ತಾರೆ ಎಂಬುದನ್ನು ತೋರಿಸುತ್ತದೆ ಎಂಬುದು ಅವರ ತರ್ಕ!

ವಿಶ್ವ ಆರ್ಥಿಕ ವೇದಿಕೆ(ಡಬ್ಲ್ಯುಇಎಫ್)ಯ 'ಭಾರತ ಆರ್ಥಿಕ ಶೃಂಗ' ಸಭೆಯಲ್ಲಿ ದೇಶದ ಪ್ರಮುಖ ಉದ್ದಿಮೆದಾರರು ದೇಶದಲ್ಲಿನ ಉದ್ಯೋಗ ಪರಿಸ್ತಿತಿಯ ಬಗ್ಗೆ ಕಳವಳ ವ್ಯಕ್ತಪಡಿಸುತ್ತಿದ್ದಾಗ ಮಧ್ಯಪ್ರವೇಶಿಸುತ್ತ ಮಂತ್ರಿಗಳು ಈ ಮಾತು ಹೇಳಿದರಂತೆ.

ಮಂತ್ರಿಗಳ ಈ ಮಾತು ಕೂಡ ಅವರ ಆಳುವ ಪರಿವಾರದ 'ನಂಬಿಕೆಯ ವಿಷಯ'ವೇ ಅಥವ ಅದಕ್ಕೆ ಸಾಕ್ಷ್ಯಗಳಿವೆಯೇ? ಈ ಸುದ್ದಿಯನ್ನು ವಿಶ್ಲೇಷಿಸುತ್ತ ಒಬ್ಬ ವಿಶ್ಲೇಷಕರು ಕೇಳಿರುವ ಪ್ರಶ್ನೆ– ಕೆಲಸ ಕಳಕೊಂಡ ಕೂಡಲೇ ಅವರಲ್ಲಿ ತಮ್ಮದೇ ಉದ್ದಿಮೆ ಆರಂಭಿಸುವ ಶಕ್ತಿ(ಅಗತ್ಯ ಬಂಡವಾಳದ ಪ್ರಶ್ನೆ ಒತ್ತಟ್ಟಿಗಿಟ್ಟರೂ) ಹೊಮ್ಮಿ ಬರುವುದಾದರೂ ಎಲ್ಲಿಂದ? ಒಂದು ವೇಳೆ 'ಅಂತಹ ಹುಮ್ಮಸ್ಸು ಬಂದರೂ ಅದರ ತಾಳಿಕೆ ಎಷ್ಟು?

ಸ್ಟಾರ್ಟ್ ಅಪ್‌ಗಳು ಇಂತಹ ಹುಮ್ಮಸ್ಸಿನ ಸಂಕೇತ ಎನ್ನಲಾಗಿದೆ. ದೇಶದಲ್ಲಿ 2016ರಲ್ಲಿ ಇಂತಹ 212 ಸ್ಟಾರ್ಟ್ ಅಪ್‌ಗಳು ಮುಚ್ಚಿಹೋದವು. ಇದು ಅದರ ಹಿಂದಿನ ವರ್ಷದ ದುಪ್ಪಟ್ಟು, 2017ರಲ್ಲೂ ಇದೇ ಪ್ರವೃತ್ತಿ ಮುಂದುವರೆದಿದೆ ಎಂದು 'ಇಂಡಿಯನ್ ಎಕ್ಸ್‌ಪ್ರೆಸ್' ಸಂಗ್ರಹಿಸಿರುವ ಮಾಹಿತಿ ತಿಳಿಸುತ್ತದೆ.


ಇನ್ನೊಂದು ಪತ್ರಿಕೆ ' ಲೈವ್ ಮಿಂಟ್' ನೀಡಿರುವ ಮಾಹಿತಿಯೂ ಮಂತ್ರಿಗಳು ತುಂಬಿರುವ ಹುರುಪನ್ನು ತಣ್ಣಗಾಗಿಸುತ್ತದೆ. 2016ರಲ್ಲಿ 6000 ಸ್ಟಾರ್ಟ್ ಅಪ್‌ಗಳು ಕಾಣ ಬಂದವು. ಆದರೆ 2017ರಲ್ಲಿ ಈ 9ತಿಂಗಳಲ್ಲಿ ಕಾಣಬಂದಿರುವುದು 800 ಮಾತ್ರ.


ಇವೆಲ್ಲ ಮಾಹಿತಿಗಳು ಹೆಚ್ಚಿನ ಅಚ್ಛೇದಿನ್‌ವಾಲಾಗಳಂತೆ ಈ ರೈಲ್ವೆ ಮಂತ್ರಿಗಳಿಗೆ ಬೇಕಿಲ್ಲ. ಈ ಹಿಂದೆ(ಆಗಸ್ಟ್ 22) ವಿದ್ಯುತ್ ಮಂತ್ರಿಯಾಗಿದ್ದಾಗ ಭಾರತ ಸರಕಾರದ ಬೀದಿದೀಪ ಯೋಜನೆಯ ಅಡಿಯಲ್ಲಿ 30ಲಕ್ಷ ಬೀದಿ ದೀಪಗಳನ್ನು ಹಾಕಲಾಗಿದೆ ಎಂದು ಪ್ರಚಾರ ಮಾಡುವ ಭರದಲ್ಲಿ ರಷ್ಯಾದ ಭವ್ಯ ರಸ್ತೆಯೊಮದರ ಫೋಟೋ ಟ್ವಿಟ್ ಮಾಡಿದವರು ಇವರೇ ತಾನೇ?

ಈ ವಾರ ಜಯ್ ಷಾ ಎಂಬ 'ಸಾಮಾನ್ಯ ನಾಗರಿಕ' ಎಂದು ವರ್ಣಿಸುವ ಆಳುವ ಪಕ್ಷದ ಅಧ್ಯಕ್ಷರ ಮಗನ 'ವ್ಯವಹಾರ'ಗಳ ಬಗ್ಗೆ ತನಿಖಾ ವರದಿಯೊಂದು ಪ್ರಕಟವಾದಾಗ ಆತನ ರಕ್ಷಣೆಗೆ ಧಾವಿಸಿದ ಮಂತ್ರಿಗಳೂ ಇವರೇ! (ಪುಟ 7ರಲ್ಲಿನ ಲೇಖನ ನೋಡಿ) ಆತನ ಶೇರು ವ್ಯವಹಾರದ ಕಂಪನಿಗೆ 2.1 ಮೆಗಾವಾಟ್ ಗಾಳಿ ಚಕ್ರ ವಿದ್ಯುತ್ ಯೋಜನೆಗೆ ಭಾರತೀಯ ನವೀಕರಿಸಬಹುದಾದ ವಿದ್ಯುತ್ ಅಭಿವೃದ್ಧಿ ಏಜೆಂಸಿ(ಐಆರ್‌ಇಡಿಎ) 10.35 ಕೋಟಿ ರೂ. ಸಾಲ ನೀಡಿದಾಗ ಇವರು ವಿದ್ಯುತ್ ಮಂತ್ರಿಯಾಗಿ ದಕ್ಷ ಸೇವೆ ಸಲ್ಲಿಸುತ್ತಿದ್ದರು ಎಂಬುದು ಕೇವಲ ಕಾಕತಾಳೀಯವಿರಬಹದು.

ಆದರೆ ಇವೆಲ್ಲ ದೇಶದ ಯುವಜನತೆಗೆ ಯಾವ ಹುರುಪು ನೀಡಬಲ್ಲದು? 10 ಕೋಟಿ ಉದ್ಯೋಗಗಳ ಆಶ್ವಾಸನೆಗೆ ಪರ್ಯಾಯವಾಗಬಲ್ಲುದೇ ಎಂಬುದು ಮಾತ್ರ ಯಕ್ಷಪ್ರಶ್ನೆ.

ಮಹಾರಾಷ್ಟ್ರದ 'ಅಭಿನವ ಭಾರತ' ಸಂಸ್ಥೆಯ ಪಂಕಜ್ ಫಡ್ನೀಸ್ ಎಂಬವರು ಗಾಂಧೀಜಿ ಹತ್ಯೆಯ ಮರು ತನಿಖೆ ನಡೆಸಬೇಕು ಎಂದು ಸುಪ್ರಿಂ ಕೋರ್ಟಿನಲ್ಲಿ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯನ್ನು ಹಾಕಿದ್ದಾರೆ. ಈ ಅರ್ಜಿ ವಿಚಾರಣಾಯೋಗ್ಯವೇ ಎಂದು ನಿರ್ಧರಿಸಲು ತನಗೆ ನೆರವಾಗಲು ಒಬ್ಬ ಹಿರಿಯ ನ್ಯಾಯವಾದಿ ಅಮರಿಂದರ್ ಶರಣ್ ಅವರನ್ನು ನೇಮಿಸಿದೆ–ಸುದ್ದಿ





ವ್ಯಂಗ್ಯಚಿತ್ರ: ಗೋಕುಲ್, ಡೆಕ್ಕನ್ ಕ್ರಾನಿಕಲ್

ಜಿ.ಎಸ್.ಟಿ.: ಇನ್ನೊಂದು ವರ್ಗಪ್ರಹಾರ



ಜಿ.ಎಸ್.ಟಿ. ಈ ಹಿಂದೆ ಮಾಡಿದ ನೋಟುರದ್ಧತಿಯಂತೆ ಸಣ್ಣ ಬಂಡವಾಳಗರು ಮತ್ತು ಸಣ್ಣ ಉತ್ಪಾದಕರ ಹಿತಗಳನ್ನು ಬಲಿಗೊಟ್ಟು ಬಂಡವಾಳದ ಕೇಂದ್ರೀಕರಣವನ್ನು ಮುಂದೊಯ್ಯುವ ಒಂದು ಸಾಧನ. ಒಂದೆಡೆಯಲ್ಲಿ ಇದು ನಮ್ಮ ರಾಜಕಾರಣದ ಒಕ್ಕೂಟ ರಚನೆಯನ್ನು ದುರ್ಬಲಗೊಳಸುತ್ತದೆ. ಅದೇ ವೇಳೆಯಲ್ಲಿ ಇನ್ನೊಂದೆಡೆಯಲ್ಲಿ ಅದು ಆರ್ಥಿಕ ವ್ಯವಸ್ಥೆಯ ಪರಿಧಿಯಲ್ಲೂ ಬಂಡವಾಳದ ಕೇಂದ್ರೀಕರಣದ ಒಂದು ಸಮಾನಾಂತರ ಪ್ರಕ್ರಿಯೆಯನ್ನು ಹುಟ್ಟಿಸುತ್ತದೆ. ರಾಜಕೀಯ ಅಧಿಕಾರದ ಕೇಂದ್ರೀಕರಣ ಮತ್ತು ಬಂಡವಾಳದ ಕೇಂದ್ರೀಕರಣ ಇವೆರಡು ಜಿಎಸ್‌ಟಿ ಹರಿಯ ಬಿಟ್ಟರುವ ಅವಳಿ ಪ್ರಕ್ರಿಯೆಗಳು. ಇವು ಒಂದನ್ನೊಂದು ಬಲಪಡಿಸುತ್ತವೆ. ಇದನ್ನು ಒಂದು ಬಿಜೆಪಿ- ನೇತೃತ್ವದ ಸರಕಾರ ಜಾರಿಗೆ ತಂದಿರುವದು ಆಶ್ಚರ್ಯಕರ ಸಂಗತಿಯಲ್ಲ ಎನ್ನುತ್ತಾರೆ ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಭಾರತಿ ಗಾಂವ್ಕರ್

ಇಲ್ಲಿಯ ತನಕ ಸರಕು ಮತ್ತು ಸೇವಾ ತೆರಿಗೆ ಮೇಲಿನ ಚರ್ಚೆಯು ಕೇವಲ, ಸರಕುಗಳ ನಡುವೆ ಹೇಗೆ ಹೊರೆಯನ್ನು ಹಂಚುವುದು, ಕಠಿಣವಾದ ಅಧಿಕಾರಶಾಹೀ ಬೇಕು-ಬೇಡಗಳನ್ನು ಪೂರೈಸುವ ಕಷ್ಟ, ಮತ್ತು ಮರುಪಾವತಿಗಳನ್ನು ಪಡೆದುಕೊಳ್ಳುವಲ್ಲಿ ಉಂಟಾಗುತ್ತಿದ್ದ ವಿಳಂಬಗಳ ಮೇಲಷ್ಟೇ ವಿಶಿಷ್ಟವಾಗಿ ಕೇಂದ್ರೀಕೃತವಾಗಿತ್ತು. ಅದು ಆರ್ಥಿಕ ಹಿಂಜರಿತದತ್ತ ನೂಕುತ್ತಿದೆ ಎಂಬ ದೃಷ್ಟಿಕೋನವೂ ಸಹ, ವ್ಯಾಪಾರಗಾರರನ್ನು ಕಟ್ಟಿಹಾಕಿರುವ, ಕಠಿಣವಾದ ಕಾರ್ಯವಿಧಾನಗಳ ಬೇಡಿಕೆಯಿಂದಾಗಿಯೇ ಹೀಗಾಗುತ್ತಿದೆ ಎಂಬ ಭಾವನೆಯನ್ನು ಉಂಟುಮಾಡಿದೆ. ಆದರೆ ಇವೆಲ್ಲದರ ನಡುವೆ ಹೊಸ ತೆರಿಗೆ ಪದ್ಧತಿಯಲ್ಲಿ ಅಡಕವಾಗಿರುವ ವರ್ಗ ಹುರುಳು ಮರೆಗೆ ಸರಿದಿದೆ.

ಒಂದುವೇಳೆ, ಕ್ಲಿಷ್ಟವಾದ ಮತ್ತು ಏಕರೂಪವಲ್ಲದ ಒಂದು ತೆರಿಗೆ ಪದ್ಧತಿಯ ಬದಲಾಗಿ ಜಾರಿಗೆ ತರಲು ಸರಳವಾದ ಮತ್ತು ಎಲ್ಲ ರಾಜ್ಯಗಳ ಎಲ್ಲ ಸರಕುಗಳಿಗೂ ಏಕರೂಪ ತೆರಿಗೆ ಪದ್ಧತಿಯೊಂದನ್ನು ತಂದರೆ ಇದರಲ್ಲಿ ವರ್ಗ ಎಲ್ಲಿಂದ ಬಂತು? ವಾಸ್ತವವಾಗಿ, ತೆರಿಗೆ ವ್ಯವಸ್ಥೆಯನ್ನು ತರ್ಕಬದ್ಧಗೊಳಿಸುವ ಕಾರಣಕ್ಕಾಗಿ ಇಂತಹ ಒಂದು ಹೆಜ್ಜೆಯನ್ನು ಸ್ವಾಗತಿಸಬೇಕು ಮತ್ತು ಈಗಿನ ಸಮಸ್ಯೆಯನ್ನು ಕೇವಲ ಆರಂಭಿಕ ಸಮಸ್ಯೆಯಾಗಿ ನೋಡಬೇಕು ಏಕೆಂದರೆ ಅಂತಹ ಸಮಸ್ಯೆ ಯಾವುದೇ ಪದ್ಧತಿಯಲ್ಲಿ ಅನಿವಾರ್ಯವಾಗಿ ಎದುರಿಸಲೇ ಬೇಕಾಗುತ್ತದೆ. ಇಂತಹ ಬದಲಾವಣೆಗೆ ವರ್ಗ ವಿಶ್ಲೇಷಣೆಯ ಅಗತ್ಯವಾದರೂ ಏನು ಎಂದು ಕೆಲವರು ಪ್ರಶ್ನಿಸಬಹುದು.

ನಿಜ, ನಮ್ಮ ಒಕ್ಕೂಟ ವ್ಯವಸ್ಥೆಯಲ್ಲಿ ಇದು ಒಂದು ಮಹತ್ವದ ಪರಿಣಾಮ ಹೊಂದಿದೆ, ಎಲ್ಲಾ ರಾಜ್ಯ ಸರಕಾರಗಳೂ ಈ ಬದಲಾವಣೆಗಳನ್ನು ಸ್ವೀಕರಿಸಿರುವದರಿಂದ, ಒಕ್ಕೂಟವಾದದ ತರ್ಕವೂ ಸಹ ಬಲ ಕಳೆದುಕೊಳ್ಳುತ್ತದೆ, ಅದೂ ಅಲ್ಲದೇ ಈ ವಿಷಯದಲ್ಲಿ ನಾವು ಭಿನ್ನ ಅಭಿಪ್ರಾಯ ಇಟ್ಟುಕೊಂಡಿದ್ದರೂ, ಇಲ್ಲಿ ವರ್ಗವನ್ನು ನಾವು ಹೇಗಾದರೂ ತರಲು ಸಾಧ್ಯ ಎಂದೂ ಕೇಳಬಹುದು.

ಆದರೆ ಇದೊಂದು ಮೇಲುಮೇಲಿನ ದೃಷ್ಟಿಕೋನ. ಜಿ.ಎಸ್.ಟಿ ಈಗಾಗಲೇ ಅಸ್ತಿತ್ವದಲ್ಲಿರುವ ತೆರಿಗೆ ಪದ್ಧತಿಯ ಬದಲಿಯಾಗಿ ಬಂದಿರುವ ಒಂದು ಹೊಸ ತೆರಿಗೆ ಪದ್ಧತಿಯಷ್ಟೇ ಅಲ್ಲ. ಇದು ಸಣ್ಣ ಉತ್ಪಾದಕರು ಮತ್ತು ಸಣ್ಣ ಬಂಡವಾಳದಾರರ ಅಥವಾ "ಅಸಂಘಟಿತ" ಅಥವಾ "ಅನೌಪಚಾರಿಕ" ವಲಯದ ಮೇಲೆ ಗುರಿಯಿಟ್ಟಿರುವ ವ್ಯವಸ್ಥೆ. ಹೀಗೆ ಅದನ್ನು ಪರಿಕಲ್ಪಿಸಿರುವುದೇ ಆದಿಮ ಸಂಚಯ-ಬಂಡವಾಳದ ಕೇಂದ್ರೀಕರಣದ ಒಂದು ಕ್ರಮ.

ಇದು ಸಣ್ಣ ಉತ್ಪಾದನಾ ವಲಯದ ಮೇಲೆ ಎರಡು ರೀತಿಯಲ್ಲಿ ಪರಿಣಾಮ ಬೀರುತ್ತದೆ. ಅದು ಸ್ವಯಂವೇದ್ಯ. ಮೊದಲನೇಯದು, ಈಗಾಗಲೆ ಜಿ.ಎಸ್.ಟಿ ಸಂಬಂಧಿಸಿದ ಚರ್ಚೆಯಲ್ಲಿ ಸೂಚ್ಯವಾಗಿ ಗಮನಿಸಿದಂತೆ,ಸ್ವೀ ಪದ್ಧತಿ ಪ್ರಕಾರ ನಡೆಯಲು ತಗಲುವ ವೆಚ್ಚಕ್ಕೆ ಸಂಬಂಧಿಸಿದ್ದು. ಸಣ್ಣ ಉತ್ಪಾದಕನು ದೊಡ್ಡ ಉತ್ಪಾದಕನಷ್ಟೇ ಮೇಲಿನ್ ಕೆಳಗೆ ಉತ್ಪಾದನಾ ಸರಣಿಗಳನ್ನು ಹೊಂದಿದ್ದಾನೆ ಎಂದು ಊಹಿಸಿದರೂ ಸಹ, ಅಂದರೆ, ಚಟುವಟಿಕೆ-ರಚನೆ ದೃಷ್ಟಿಯಿಂದ ಇದು ದೊಡ್ಡ ಉದ್ದಿಮೆ ಸಂಸ್ಥೆಯ ಸಣ್ಣ ಪ್ರಮಾಣದ ಪ್ರತಿರೂಪವಾಗಿದ್ದರೂ ವಾಸ್ತವವಾಗಿ, ಉದ್ದಿಮೆ ಸಂಸ್ಥೆಯ ಪ್ರಮಾಣಕ್ಕೆ ಅನುಪಾತವಾಗಿ ಆಡಳಿತ ವೆಚ್ಚ ಬದಲಾಗುವುದಿಲ್ಲ. ಇದರಿಂದಾಗಿ ಸಣ್ಣ ಉತ್ಪಾದಕರ ಮೇಲೆ ಹೆಚ್ಚಿನ ಹೊರೆ ಬೀಳುತ್ತದೆ. ಉದಾಹರಣೆಗೆ ಒಬ್ಬ ಸಣ್ಣ ಉತ್ಪಾದಕ ತನ್ನ ಹುಟ್ಟುವಳಿಯನ್ನು ತಿಂಗಳಲ್ಲಿ ಮೂರುಬಾರಿ ಸಲ್ಲಿಸಿದರೆ, ದೊಡ್ಡ ಉತ್ಪಾದಕನೂ ಅಷ್ಟೇ ಬಾರಿ ಸಲ್ಲಿಸುತ್ತಾನೆ, ಆತ ಹತ್ತು ಪಟ್ಟು ಹೆಚ್ಚು ಗಾತ್ರದ ಉತ್ಪಾದನೆ ಇದೆ ಎಂದು, ತಿಂಗಳಿಗೆ ಮೂವತ್ತುಬಾರಿ ಸಲ್ಲಿಸುವುದಿಲ್ಲ. ಆಡಳಿತ ವೆಚ್ಚ ನಿಗದಿತ ಸ್ವರೂಪದ್ದು. ವಾಸ್ತವವಾಗಿ ಹೊಸ ತೆರಿಗೆ ಪದ್ಧತಿಯಲ್ಲಿ ದೊಡ್ಡ ಉತ್ಪಾದಕನಿಗಿಂತ ಸಣ್ಣ ಉತ್ಪಾದಕನಿಗೆ ತಲಾವಾರು ವೆಚ್ಚ ಹೆಚ್ಚಾಗುತ್ತದೆ.

ಇಲ್ಲಿ ಇನ್ನೊಂದು ಅಂಶವನ್ನು ಕೂಡ ಗಮನಿಸಬೇಕು. ಸಣ್ಣ ಉದ್ದಿಮೆ ಸಂಸ್ಥೆಗಳು ದೊಡ್ಡ ಉದ್ದಿಮೆ ಸಂಸ್ಥೆಗಳ ಸಣ್ಣ ಪ್ರತಿರೂಪವಷ್ಟೇ ಅಲ್ಲ. ದೊಡ್ಡ ಉದ್ದಿಮೆ ಸಂಸ್ಥೆಗಳು ಸಣ್ಣ ಉದ್ದಿಮೆ ಸಂಸ್ಥೆಗಳಿಗಿಂತ ಹೆಚ್ಚು ಉತ್ಪಾದನಾ ಸರಣಿಗಳನ್ನು ಹೊಂದಿದ್ದು, ಕಚ್ಚಾವಸ್ತುವಿನಿಂದ ಸಿದ್ಧ ವಸ್ತುವನ್ನಾಗಿಸುವಲ್ಲಿನ ಮೌಲ್ಯ ವರ್ಧನೆಯ ಕೊಂಡಿ ಹಲವಾರು ಉದ್ದಿಮೆ ಸಂಸ್ಥೆ ಗಳಲ್ಲಿ ಹರಿದು ಹಂಚಿ ಹೋಗಿರುತ್ತದೆ. ಇದು ದೊಡ್ಡ ಉದ್ದಮೆಗಳಿಗಿಂತ ಸಣ್ಣ ಉದ್ದಿಮೆಗಳಲ್ಲೇ ಹೆಚ್ಚು. ದೊಡ್ಡ ಉದ್ದಿಮೆ ಸಂಸ್ಥೆಗಳು ತಮ್ಮ ಚಟುವಟಿಕೆಯ ಕೆಲ ಭಾಗವನ್ನು ಸಣ್ಣ ಉದ್ದಿಮೆ ಸಂಸ್ಥೆಗಳಿಗೆ ಹೊರಗುತ್ತಿಗೆ ನೀಡುತ್ತವೆ ಎಂಬುದು ನಿಜವಾದರೂ, ಅವರ ಉತ್ಪಾದನಾ ಸರಣಿ ಪ್ರಮಾಣ ಸಣ್ಣ ಉದ್ದಿಮೆ ಸಂಸ್ಥೆಗಳಿಂದ ಸಾಮಾನ್ಯವಾಗಿ ಹೆಚ್ಚು ಸಮಗ್ರೀಕರಣ ಗೊಂಡಿರುತ್ತದೆ. ಈ ಕಾರಣದಿಂದ ಸಣ್ಣ ಉದ್ದಿಮೆ ಸಂಸ್ಥೆಗಳು ಹೆಚ್ಚಿನ ವೆಚ್ಚ ಭರಿಸಬೇಕಾಗುತ್ತದೆ. ಹಿಂದಿನ ಉತ್ಪಾದನಾ ಘಟಕದ ಮೇಲಿನ ತೆರಿಗೆಯನ್ನು ನಂತರ ಮರುಪಾವತಿ ಪಡೆಯಬಹುದಾದರೂ ಹೀಗೆ ಮರುಪಾವತಿಗಾಗಿ ಕಾಯಬೇಕಾದ ಹಣದ ಮೊತ್ತದ ಹೊರೆ ಸಣ್ಣ ಉದ್ದಿಮೆಗಳ ಮೇಲೆಯೇ ಹೆಚ್ಚು ಬೀಳುವಂತಾಗುತ್ತದೆ. ಇವೆಲ್ಲದರ ಅರ್ಥವೇನೆಂದರೆ, ಜಿ.ಎಸ್.ಟಿ ಪದ್ಧತಿಯಿಂದಾಗಿ ಸಣ್ಣ ಉದ್ದಿಮೆಗಳಿಗೇ ಹೆಚ್ಚು ಅನಾನುಕೂಲತೆ. ಇದು ಅವುಗಳ ಉಳಿಯುವಿಕೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಹೀಗೆ, ಇದು ಬಂಡವಾಳ ಕೇಂದ್ರೀಕರಣ ಮತ್ತು ಆದಿಮ ಬಂಡವಾಳ ಸಂಚಯದ ಒಂದು ಸಾಧನವಾಗುತ್ತದೆ.

ಈ ವಾದವನ್ನು ಇನ್ನೂ ಹಲವರು ಮುಂದಿಟ್ಟಿದ್ದಾರೆ. ಆದರೆ ಇದು ಜಿಎಸ್‌ಟಿಗೆ ಸಂಬಂಧಿಸಿದ ಕೇಂದ್ರ ತರ್ಕವೇನೂ ಅಲ್ಲ. ಜಿ.ಎಸ್.ಟಿಯ ನಿಜವಾದ ಒತ್ತು ಹೊಸ ತೆರಿಗೆ ಪದ್ಧತಿ ತರುವುದಷ್ಟೇ ಅಲ್ಲ, ಇದುವರೆಗೆ ತೆರಿಗೆಯ ಪರಿಧಿಯ ಒಳಗಡೆ ಬರದೇ ಇರುವ ಉತ್ಪಾದಕರನ್ನು ಅದರೊಳಗೆ ಸೇರಿಸುವುದೇ ಆಗಿದೆ. ಇದರ ಹಿಂದೆ ಅಡಗಿದೆ. ಹೀಗೆ ಹಿಂದೆ ತೆರಿಗೆ ಪರಿಧಿಗೆ ಒಳಪಡದ ಆ ಜನ ಸಣ್ಣ ಉತ್ಪಾದಕರು ಮತ್ತು 'ಅನೌಪಚಾರಿಕ ವಲಯ'ವೇ ತಾನೇ? ಅವರು ಈಗ ನೊಂದಾಯಿಸಿಕೊಳ್ಳಬೇಕು ಮತ್ತು ಜಿ.ಎಸ್ ಟಿ ಪಾವತಿಸಬೇಕು. ಹಾಗಾಗಿ ಈ ಪದ್ಧತಿಯ ಅರ್ಥ ಅನೌಪಚಾರಿಕ ವಲಯ ಅಂದರೆ ಸಣ್ಣ ಉತ್ಪಾದಕರು ಮತ್ತು ಸಣ್ಣ ಬಂಡವಾಳದಾರರ ಮೇಲಿನ ತೆರಿಗೆಯಲ್ಲಿ ಹೆಚ್ಚಳ.

ನಿಜಸಂಗತಿಯೆಂದರೆ, ಜಿಎಸ್‌ಟಿ ಪದ್ಧತಿ ಎಂದರೆ ಅನೌಪಚಾರಿಕ ವಲಯದ ಮೇಲೆ ಹೆಚ್ಚಿನ ತೆರಿ ಗೆ ಹೊರೆ ಎಂಬ ಸಂಗತಿ ವಿವಿಧ ಸರಕುಗಳ ಮೇಲೆ ವಿವಿಧ ತೆರಿಗೆ ದರಗಳ ಚರ್ಚೆಯಲ್ಲಿ ಕಳೆದು ಹೋಗುತ್ತದೆ. ನಮ್ಮ ಚರ್ಚೆ "ವಸ್ತುಗಳು" ಅವುಗಳ ಬಳಕೆ-ಮೌಲ್ಯದ ಮೇಲೆ ತರಿಗೆಗಳ ಮೇಲೆ ಗಮನ ಕೇಂದ್ರಿಕರಿಸದೆ ಸಮಾಜದ ವಿವಿಧ ಸ್ತರಗಳ ಮೇಲೆ ವಿಧಿಸುವ ತೆರಿಗೆಗಳ ಬಗ್ಗೆ ಹೆಚ್ಚಿನ ಗಮನ ಹರಿಸಬೇಕು. ಇಲ್ಲಿಯೇ ಈ ಹೊಸ ಪದ್ಧತಿಯಲ್ಲಿ, ಸಣ್ಣ ಉತ್ಪಾದಕರು ಮತ್ತು ಸಣ್ಣ ಬಂಡವಾಳದಾರರ ಮೇಲೆ ವಿಧಿಸಿದ ತೆರಿಗೆ ಹೆಚ್ಚಾಗಿದೆ ಎಂಬುದು ಸ್ಪಷ್ಟವಾಗಿ ಕಾಣುತ್ತದೆ. (ಸ್ಕ್ರಾಲ್..ಇನ್‌ನಲ್ಲಿ ಇತ್ತೀಚೆಗೆ ಪ್ರಕಟವಾಗಿರುವ ಲೇಖನ ಒಂದರಲ್ಲಿ, ಈ ಹಿಂದೆ ಸಾವಿರಾರು ಕರಕುಶಲಕಾರರು' ನೇಯುವ .ಬನಾರಸ್ ಸೀರೆಯ ಮೇಲೆ ತೆರಿಗೆಯಿರಲಿಲ್ಲ, ಈಗ ಅದು ಜಿ.ಎಸ್.ಟಿಗೆ ಒಳಪಡುತ್ತದೆ ಎಂದು ಹೇಳಿದೆ. ಇಂತಹ ಹಲವಾರು ಉದಾಹರಣೆಗಳು ದೊರೆಯುತ್ತವೆ.)

ಸಣ್ಣ ಉತ್ಪಾದನಾ ವಲಯದ ಮೇಲೆ ಹೆಚ್ಚಿನ ತೆರಿಗೆ ಆ ವಲಯದ ಉತ್ಪನ್ನಗಳ ಬೆಲೆ ಏರಿಕೆಗೆ ಕಾರಣವಾಗಿ, ಆ ವಲಯ ಆರ್ಥಿಕ ಹಿಂಜರಿತಕ್ಕೆ ಒಳಗಾಗುತ್ತದೆ. ಒಂದು ವೇಳೆ ಬೇಡಿಕೆಯ ಪ್ರಮಾಣವು ಬೆಲೆಯಲ್ಲಿ ಉಂಟಾಗುವ ಬದಲಾವಣೆಗೆ ಸಂವೇದಿಯಾಗಿರದಿದ್ದರೆ ಹೀಗಾಗುತ್ತಿರಲಿಲ್ಲ, ಆಗ ಬೆಲೆಯಲ್ಲಿ ಉಂಟಾದ ಏರಿಕೆ ಅಂದರೆ ಬೇಡಿಕೆಯ ಮೊತ್ತದಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದಾಗುತ್ತದೆ, ಅದು ಖರೀದಿದಾರರ ನಗದು ಸಂಗ್ರಹವನ್ನು ಇಳಿಸುತ್ತದೆ, ಅವರ ಉಳಿತಾಯವನ್ನು ಕಡಿಮೆ ಮಾಡುವ ಮೂಲಕ. ಆದರೆ ಅನೌಪಚಾರಿಕ ವಲಯದ ವಸ್ತುಗಳನ್ನು ಖರೀದಿಸುವವರಲ್ಲಿ ದುಡಿಯುವ ಜನವಿಭಾಗಗಳವರೂ ಇದ್ದಾರೆ. ಅವರಿಗೆ ಬೆಲೆ ಏರಿಕೆ ಆದಾಗ ತಮ್ಮ ಬೇಡಿಕೆಗಳಲ್ಲಿ ಬದಲಾವಣೆ ಮಾಡದಿರಲು ಸಾಧ್ಯವಾಗುವದಿಲ್ಲ, ಏಕೆಂದರೆ ತಮ್ಮ ನಗದನ್ನು ಕಡಿಮೆ ಮಾಡಿಕೊಳ್ಳ ಸಾಧ್ಯವಾಗುವಷ್ಟು ಉಳಿತಾಯ ಅವರಲ್ಲಿರುವುದಿಲ್ಲ. ಹಾಗಾಗಿ, ಅವಶ್ಯವಾಗಿ ಬೆಲೆ ಏರಿಕೆ ಬೇಡಿಕೆಯ ಇಳಿಕೆಗೆ ಕಾರಣವಾಗುತ್ತದೆ, ಆಮೂಲಕ ಆರ್ಥಿಕ ಹಿಂಜರಿತಕ್ಕೂ.

ಆದರೆ, ಅನೌಪಚಾರಿಕ ವಲಯದಲ್ಲಿ, ಜಿ.ಎಸ್.ಟಿ ಪದ್ಧತಿಯ ಬದಲಾವಣೆಯಿಂದ, ಆರ್ಥಿಕ ಹಿಂಜರಿತ ಇದ್ದರೂ ಸಹ, ಇದರಿಂದಾಗಿ ಇಡೀ ಆರ್ಥಿಕ ವ್ಯವಸ್ಥೆ ಯಾಕೆ ಹಿಂಜರಿತಕ್ಕೆ ಒಳಗಾಗಬೇಕು? ಈ ಪ್ರಶ್ನೆಗೆ ಸರಳ ಉತ್ತರ ಹೀಗಿದೆ. ಅನೌಪಚಾರಿಕ ವಲಯದಲ್ಲಿನ ಬೇಡಿಕೆಯ ಕುಸಿತ, ಆಮೂಲಕ ಅಲ್ಲಿನ ಉತ್ಪಾದನೆಗಳ ಕುಸಿತವನ್ನು ಸರಿದೂಗಿಸುವಷ್ಟು, ಉತ್ಪಾದನಾ ಹೆಚ್ಚಳ ಔಪಚಾರಿಕ ವಲಯದಲ್ಲಿ ಜಿ.ಎಸ್ ಟಿ ಪದ್ಧತಿಯ ಬದಲಾವಣೆಯಿಂದಾಗಿ ಈ ವಲಯದಲ್ಲಿ ಬೆಲೆ ಇಳಿಕೆ ಆದರೂ ಸಹ, ಸಮರ್ಪಕವಾಗಿ ಆಗುವುದಿಲ್ಲ.

ಇದಕ್ಕೆ ಮುಖ್ಯ ಕಾರಣ ಎಂದರೆ, 'ಔಪಚಾರಿಕ ಆರ್ಥಿಕತೆಯಲ್ಲಿ' ಗಮನಾರ್ಹ ಪ್ರಮಾಣದ ಗ್ರಾಹಕರು ಬೆಲೆ-ಅಸಂವೇದಿ ಆಗಿರುವ ವಸ್ತುಗಳು ಬೇಕಾಗಿರುತ್ತವೆ. ಅಂತಹ ವಸ್ತುಗಳ ಬೆಲೆ ಇಳಿಕೆ ಆದಾಗ (ಇಂತಹ ಬೆಲೆ ಇಳಿಕೆ ಆಗದಿದ್ದರೆ ಅನೌಪಚಾರಿಕ ವಲಯದ ಹಿಂಜರಿತವನ್ನು ಸರಿದೂಗಿಸಲಾಗುವುದಿಲ್ಲ ತಾನೇ?) ಬೇಡಿಕೆಯ ಪ್ರಮಾಣ ಏರಿಕೆ ಆಗುವುದಿಲ್ಲ ಬದಲಾಗಿ, ಗ್ರಾಹಕರ ಬಳಿ ನಗದು ಸಂಗ್ರಹ ಹೆಚ್ಚಾಗುತ್ತದೆ. ಅಂದರೆ ಉಳಿತಾಯದ ಏರಿಕೆ. ಹಾಗಾಗಿ ಅನೌಪಚಾರಿಕ ವಲಯದಲ್ಲಿನ ಹಿಂಜರಿತ ಇಡೀ ಆರ್ಥಿಕ ವ್ಯವಸ್ಥೆಗೆ ಹರಡುತ್ತದೆ, ಇಂದು ನಾವಿದನ್ನು ಕಾಣುತ್ತಿದ್ದೇವೆ. ನಿಜ, ಇದಕ್ಕೆ ಜಿಎಸ್‌ಟಿ ಮಾತ್ರವೇ ಕಾರಣವಲ್ಲ.

ಹಾಗಾಗಿ ಜಿ.ಎಸ್.ಟಿ ಯಿಂದ ಉಂಟಾದ ಆರ್ಥಿಕ ಹಿಂಜರಿತ ಹೊಸ ತೆರಿಗೆ ಪದ್ದತಿಯ 'ಆರಂಭಿಕ ತೊಡಕುಗಳ' ನಿವಾರಣೆಯ ನಂತರ ಮರೆಯಾಗಿ ಸರಿಹೋಗಬಹುದಾದ ಒಂದು ತಾತ್ಕಾಲಿಕ ತೊಡಕು ಅಲ್ಲ. ಇದು ಈ ತೆರಿಗೆ ಪದ್ದತಿಯ ಒಂದು ಅನಿವಾರ್ಯ ಭಾಗವೇ ಆಗಿದೆ, ಇದು "ಅನೌಪಚಾರಿಕ ವಲಯದ" ಮೇಲೆ ಹೆಚ್ಚಿನ ತೆರಿಗೆ ವಿಧಿಸುವದರಿಂದಲೇ ಉಂಟಾಗುವಂತದ್ದು. ಆರ್ಥಿಕ ಹಿಂಜರಿಕೆ ಎಂಬುದು ಆದಿಮ ಬಂಡವಾಳ ಸಂಚಯ-ಬಂಡವಾಳದ ಕೇಂದ್ರೀಕರಣದ ಪ್ರಕ್ರಿಯೆ ಸಾಕಾರಗೊಳ್ಳುವ ಒಂದು ವಿಧಾನ.

ಆಗ ಹೀಗೆ ಕೇಳಬಹುದು: ಜಿ.ಎಸ್.ಟಿಯು ಬಂಡವಾಳದ ಕೇಂದ್ರೀಕರಣ ಮಾಡುವ (ಸಣ್ಣ ಬಂಡವಾಳಿಗರನ್ನು ಬಲಿಗೊಟ್ಟು) ಮತ್ತು ಆದಿಮ ಬಂಡವಾಳ ಸಂಚಯವನ್ನು ಹೇರುವ ಸಾಧನವಾಗಿದ್ದರೆ, ಯಾಕೆ ಏಕಸ್ವಾಮ್ಯತ್ವ-ಪರ ವಕ್ತಾರರು ಇದನ್ನು ಟೀಕಿಸುತ್ತಿದ್ದಾರೆ?

ಈ ಪ್ರಶ್ನೆಗೆ ಉತ್ತರ "ಅನೌಪಚಾರಿಕ ವಲಯದ" ಆರ್ಥಿಕ ಹಿಂಜರಿತ ಮತ್ತು ಸಂಪೂರ್ಣ ಆರ್ಥಿಕ ವ್ಯವಸ್ಥೆ ಮೇಲೆ ಉಂಟಾಗುವ ಅದರ ಪರಿಣಾಮದಲ್ಲಿ ಅಡಗಿದೆ, ಈ ಹಿಂಜರಿತ "ಔಪಚಾರಿಕ ವಲಯ"ದ ಮೇಲೆಯೇ 'ಎರಡನೇ ಹಂತ'ದ ಅಥವ 'ಹೆಚ್ಚಳಿಕೆ' ಪರಿಣಾಮವನ್ನು ಕೂಡ ಉಂಟು ಮಾಡುತ್ತದೆ. ದೊಡ್ಡ ಬಂಡವಾಳದಾರರ ಹಲವು ವಿಭಾಗಗಳು ಇಂತಹ ಹಿಂಜರಿತವನ್ನು ಇಷ್ಟಪಡುವದಿಲ್ಲ, ಹಾಗಾಗಿ, ಈ ಹಿಂದೆ ಎಷ್ಟು ತೀವ್ರವಾಗಿ ಜಿ.ಎಸ್.ಟಿಯನ್ನು ಹಂಬಲಿಸಿ ಅದನ್ನು ಕಾರ್ಯರೂಪಕ್ಕೆ ತರಲು ಬಯಸಿದ್ದರೂ, ಅವರು ಜಿ.ಎಸ್.ಟಿಯನ್ನು ಟೀಕಿಸಲು ಆರಂಭಿಸುತ್ತಾರೆ.

ಜಿ.ಎಸ್.ಟಿಯು, ಸಂಕ್ಷಿಪ್ತವಾಗಿ ಹೇಳುವದಾದರೆ, ಈ ಹಿಂದೆ ಮಾಡಿದ ನೋಟುರದ್ದತಿಯಂತೆ ಸಣ್ಣ ಬಂಡವಾಳಿಗರು ಮತ್ತು ಸಣ್ಣ ಉತ್ಪಾದಕರ ವೆಚ್ಚದಲ್ಲಿ ಬಂಡವಾಳದ ಕೇಂದ್ರೀಕರಣವನ್ನು ಮುಂದೊಯ್ಯುವ ಒಂದು ಸಾಧನ. ಒಂದು ಕಡೆಯಲ್ಲಿ ಇದು ರಾಜ್ಯ ಸರ್ಕಾರಗಳ ಸಂವಿಧಾನಾತ್ಮಕ ಅಧಿಕಾರವನ್ನು ಕಸಿದುಕೊಂಡು, ಎಲ್ಲವನ್ನೂ ನಿರ್ಧರಿಸುವ ಜಿಎಸ್‌ಟಿ ಮಂಡಳಿಯಲ್ಲಿ ಕೇಂದ್ರದಲ್ಲಿರುವ ಪಕ್ಷದ್ದೇ ಸರಕಾರಗಳಿರುವ ರಾಜ್ಯಗಳೊಂದಿಗೆ ನಿರ್ಣಾಯಕ ದನಿ ಹೊಂದಿ ನಮ್ಮ ರಾಜಕಾರಣದ ಒಕ್ಕೂಟ ರಚನೆಯನ್ನು ದುರ್ಬಲಗೊಳಿಸುತ್ತದೆ. ಆದರೆ ಇಷ್ಟೇ ಅಲ್ಲ, ಅದೇ ವೇಳೆಯಲ್ಲಿ ಇನ್ನೊಂದೆಡೆಯಲ್ಲಿ ಅದು ಆರ್ಥಿಕ ವ್ಯವಸ್ಥೆಯ ಪರಿಧಿಯಲ್ಲೂ ಬಂಡವಾಳದ ಕೇಂದ್ರೀಕರಣದ ಒಂದು ಸಮಾನಾಂತರ ಪ್ರಕ್ರಿಯೆಯನ್ನು ಹುಟ್ಟಿಸುತ್ತದೆ.

ರಾಜಕೀಯ ಅಧಿಕಾರದ ಕೇಂದ್ರೀಕರಣ ಮತ್ತು ಬಂಡವಾಳದ ಕೇಂದ್ರೀಕರಣ ಇವೆರಡು ತೆರಿಗೆ ಪದ್ದತಿಯ ಬದಲಾವಣೆ ಹರಿಯ ಬಿಟ್ಟಿರುವ ಅವಳಿ ಪ್ರಕ್ರಿಯೆಗಳು. ಇವು ಒಂದನ್ನೊಂದು ಬಲಪಡಿಸುತ್ತವೆ. ಇದನ್ನು ಒಂದು ಬಿಜೆಪಿ- ನೇತೃತ್ವದ ಸರಕಾರ ಜಾರಿಗೆ ತಂದಿರುವದು ಆಶ್ಚರ್ಯಕರ ಸಂಗತಿಯಲ್ಲ, ಏಕೆಂದರೆ ಅದು ಕಟ್ಟಾ ಕೋಮುವಾದಿ-ಸರ್ವಾಧಿಕಾರಶಾಹಿ, ಮಾತ್ರವೇ ಅಲ್ಲ, ಅದು ಬಹಿರಂಗವಾಗಿ ಏನೇ ಹೇಳಿಕೊಂಡರೂ ಪ್ರಜಾಪ್ರಭುತ್ವ, ಹಕ್ಕುಗಳು, ಜಾತ್ಯಾತೀತತೆ ಮತ್ತು ಒಕ್ಕೂಟವಾದಿ ತತ್ವಗಳನ್ನು ಒಳಗೊಂಡಿರುವ ಭಾರತೀಯ ಸಂವಿಧಾನದ "ಮೂಲ ರಚನೆ' ಅದಕ್ಕೆ ಅಸಹನೀಯವಾಗಿರುವಂತದ್ದು.

ಜಿ.ಎಸ್.ಟಿ ಯಿಂದ ಉಂಟಾದ ಆರ್ಥಿಕ ಹಿಂಜರಿತ ಹೊಸ ತೆರಿಗೆ ಪದ್ದತಿಯ 'ಆರಂಭಿಕ ತೊಡಕುಗಳ' ನಿವಾರಣೆಯ ನಂತರ ಮರೆಯಾಗಿ ಸರಿಹೋಗಬಹುದಾದ ಒಂದು ತಾತ್ಕಾಲಿಕ ತೊಡಕು ಅಲ್ಲ. ಇದು ಈ ತೆರಿಗೆ ಪದ್ದತಿಯ ಒಂದು ಅನಿವಾರ್ಯ ಭಾಗವೇ ಆಗಿದೆ.

ಹಿಮಾಚಲ ಪ್ರದೇಶ, ಗುಜರಾತ್ ಚುನಾವಣೆಗಳು: ಚುನಾವಣಾ ಆಯೋಗದ ವಿಚಿತ್ರ ಪ್ರಕಟಣೆ



–ಸಿಪಿಐ(ಎಂ) ಪೊಲಿಟ್‌ಬ್ಯುರೊ

ಅಕ್ಟೋಬರ್ 13ರಂದು ಚುನಾವಣಾ ಆಯೋಗ ಹಿಮಾಚಲ ಪ್ರದೇಶದ ವಿಧಾನಸಭಾ ಚುನಾವಣೆಗಳ ದಿನಾಂಕವನ್ನು ಪ್ರಕಟಿಸಿದೆ, ಆದರೆ ಅದೇ ಸಮಯದಲ್ಲಿ ನಡೆಯಬೇಕಾಗಿರುವ ಗುಜರಾತ್ ವಿಧಾನಸಭಾ ಚುನಾವಣೆಗಳ ಪ್ರಕಟಣೆಯನ್ನು ತಡೆದಿಟ್ಟಿದೆ. ಇದೊಂದು ವಿಚಿತ್ರ ಸಂಗತಿ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಸಾಮಾನ್ಯವಾಗಿ ವಿವಿಧ ರಾಜ್ಯಗಳಲ್ಲಿ ಆರು ತಿಂಗಳೊಳಗೆ ಚುನಾವಣೆಗಳು ನಡೆಯಬೇಕಾಗಿದ್ದಲ್ಲಿ ಅವುಗಳ ಚುನಾವಣೆಗಳ ದಿನಾಂಕಗಳನ್ನು ಒಟ್ಟಾಗಿ ಪ್ರಕಟಿಸಲಾಗುತ್ತದೆ. ಈಗ ಹಿಮಾಚಲ ಪ್ರದೇಶದಲ್ಲಿ 'ಮಾದರಿ ನೀತಿ ಸಂಹಿತೆ' ಜಾರಿಗೆ ಬರುತ್ತದೆ, ಆದರೆ ಗುಜರಾತಿನಲ್ಲಿ ಇಲ್ಲ. ಹಿಮಾಚಲ ಪ್ರದೇಶದ ಚುನಾವಣೆಗಳ ಫಲಿತಾಂಶಗಳನ್ನು ಡಿಸೆಂಬರ್ 18ರಂದು ಘೋಷಿಸಲಾಗುವುದು ಎನ್ನಲಾಗಿದೆ. ಮತ್ತು ಅದರ ಮೊದಲು ಗುಕರಾತ್ ವಿಧಾನಸಭೆಗೆ ಚುನಾವಣೆಗಳು ನಡೆಯುತ್ತವೆ ಎಂದೂ ಮುಖ್ಯ ಚುನಾವಣಾ ಆಯುಕ್ತರು ಹೇಳಿದ್ದಾರೆ. ಇದು ಇನ್ನಷ್ಟು ವಿಚಿತ್ರ, ಏಕೆಂದರೆ ಡಿಸೆಂಬರ್ 18ರ ಮೊದಲು ಗುಜರಾತಿನಲ್ಲಿ ಚುನಾವಣೆ ಪೂರ್ಣಗೊಳ್ಳಬೇಕಾದರೆ ಮಾದರಿ ನೀತಿ ಸಂಹಿತೆ ಅಲ್ಲಿಗೂ ಅನ್ವಯವಾಗಬೇಕು ಎಂದು ಪೊಲಿಟ್‌ಬ್ಯುರೊ ಹೇಳಿದೆ.



ವ್ಯಂಗ್ಯಚಿತ್ರ: ಇ.ಪಿ.ಉನ್ನಿ, ಇಂಡಿಯನ್ ಎಕ್ಸ್‌ಪ್ರೆಸ್

ಸಂದೇಹಗಳನ್ನು ಎಬ್ಬಿಸಿದೆ– ಮಾಜಿ ಮುಖ್ಯ ಚುನಾವಣಾ ಆಯುಕ್ತರು

ಇತ್ತೀಚೆಗೆ ನಿವೃತ್ತರಾಗಿರುವ ಮುಖ್ಯ ಚುನಾವಣಾ ಆಯುಕ್ತ ಎಸ್.ವೈ.ಖುರೇಶಿಯವರು ಕೂಡ ಈ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸಿದ್ದಾರೆ. "ಗುಜರಾತ್ ವಿಧಾನ ಸಭೆಯ ಅವಧಿಯೂ ಹಿಮಾಚಲ ಪ್ರದೇಶದ ವಿಧಾನಸಭೆಯ ಅವಧಿಯ ಸುಮಾರಿಗೆ ಮುಗಿಯುತ್ತದೆ. ಆದರೂ ಇವನ್ನು ಏಕೆ ಒಟ್ಟಿಗೆ ನಡೆಸುತ್ತಿಲ್ಲ ಎಂಬ ಬಗ್ಗೆ ನನಗೆ ಆಶ್ಚರ್ಯವಾಗಿದೆ" ಎಂದಿರುವ ಅವರು ಚುನಾವಣಾ ಆಯೋಗದ ಈ ನಡೆ ಹಲವು ಸಂದೇಹಗಳನ್ನು ಎಬ್ಬಿಸಿದೆ ಎಂದು ಹೇಳಿದ್ದಾರೆ.

"ಚುನಾವಣಾ ಆಯೋಗ ಹಿಮಾಚಲ ಪ್ರದೇಶದ ಚುನಾವಣೆಗಳನ್ನು ಪ್ರಕಟಿಸುವಾಗ ಗುಜರಾತಿನ ಚುನಾವಣೆಗಳನ್ನು ಪ್ರಕಟಿಸದಿರಲು ಇರುವ ಒತ್ತಡಗಳೇನು? ಇದನ್ನು ಸಮರ್ಥಿಸಿಕೊಳ್ಳಲು ಅವರಿಗೆ ಕೆಲವು ಒಳ್ಳೆಯ ಕಾರಣಗಳಿರಬೇಕು. ಮುಂದಿನ ವಾರ ಗುಜರಾತಿಗೆ ಮೋದಿಯವರ ಭೇಟಿ ಅನುಮಾನಗಳಿಗೆ ಎಡೆಮಾಡಿದೆ. ಇದು ದುರದೃಷ್ಟಕರ" ಎಂದು ಅವರು ಹೇಳಿದ್ದಾರೆ.

ಚುನಾವಣಾ ಆಯೋಗ ಚುನಾವಣಾ ಕಾರ್ಯಕ್ರಮವನ್ನು ಪ್ರಕಟಿಸಿದ ಮೇಲೆ ಸರಕಾರ ಯಾವ ಹೊಸ ಯೋಜನೆಗಳ ಪ್ರಕಟಣೆಯನ್ನೂ ಮಾಡುವಂತಿಲ್ಲ ಎಂಬುದನ್ನು ಇಲ್ಲಿ ಗಮನಿಸಬಹುದು. ಪ್ರಧಾನ ಮಂತ್ರಿಗಳು ಮುಂದಿನ ವಾರ ಗುಜರಾತಿನ ರಾಜಧಾನಿ ಗಾಂಧಿನಗರದ ಹೊರವಲಯದಲ್ಲಿ ಬಿಜೆಪಿಯ ಬೂತ್ ಮಟ್ಟದ ಕಾರ್ಯಕರ್ತರನ್ನು ಭೇಟಿಯಾಗಲಿದ್ದಾರಂತೆ.

ಕೇರಳ: ದ್ವೇಷಟ್ರಾಲ್‌ಗಳನ್ನು ಕಕ್ಕಾಬಿಕ್ಕಿಯಾಗಿಸಿದ ಎಡ–ಪ್ರಗತಿಪರ ಯುವಜನರ ಹಾಸ್ಯ,–ವ್ಯಂಗ್ಯ

ಕೇರಳದಲ್ಲಿ ಬಿಜೆಪಿ ಅಧ್ಯಕ್ಷರು ಉದ್ಘಾಟಿಸಿದ 'ಜನರಕ್ಷಾ ಯಾತ್ರಾ'ದ ಹಿನ್ನೆಲೆಯಲ್ಲಿ ಬಿಜೆಪಿ ಮುಖಂಡರುಗಳ ಹಿಂಸಾಚಾರ ಪ್ರಚೋದನೆಯ ಭಾಷಣಗಳು ಆರೆಸ್ಸೆಸ್–ಬಿಜೆಪಿಗೇ ತಿರುಗುಬಾಣವಾಗಿವೆ. ಇದು ಇಡೀ ದೇಶದ ಪ್ರಜಾಪ್ರಭುತ್ವವಾದಿಗಳ ಗಮನ ಸೆಳೆದಿದೆ.

ಈ ಯಾತ್ರೆಗೆ ಎಲ್ಲೂ ಸಿಪಿಐ(ಎಂ) ನೇತೃತ್ವದ ಅಡ್ಡಿ ಕಾಣದೆ, ಜನ ಶಾಂತಿಯುತವಾಗಿ ಅದನ್ನು ನಿರ್ಲಕ್ಷಿಸಿದ್ದೇ ಬಿಜೆಪಿ ಅಧ್ಯಕ್ಷರು ಮೂರನೇ ದಿನವೇ "ಪ್ರಧಾನಿಗಳ ತುರ್ತು ಕರೆ"ಯ ಮೇಲೆ ದಿಲ್ಲಿಗೆ ಮರಳುವಂತೆ ಮಾಡಿತು ಎನ್ನಲಾಗಿದೆ. ರಾಜ್ಯದ ಬಿಜೆಪಿಗೆ 'ಗ್ಯಾಸ್' ತುಂಬಲು ಬಂದ ಸಂಘ ಪರಿವಾರದ 'ಬಿರುಗಾಳಿ' ಎನಿಸಿದ ಉತ್ತರಪ್ರದೇಶದ ಮುಖ್ಯಮಂತ್ರಿಗಳ ಪಾಲ್ಗೊಳ್ಳುವಿಕೆಯಂತೂ ಎಡ ಮತ್ತು ಪ್ರಜಾಪ್ರಭುತ್ವವಾದಿಗಳಿಗೆ ಬಿಜೆಪಿಯನ್ನು ಬಯಲು ಮಾಡಲು ವರದಾನವೇ ಆಯಿತು.

ಇದರಲ್ಲಿ ಕೇರಳದಲ್ಲಿ ಎಡ ಮತ್ತು ಪ್ರಗತಿಪರ ಶಕ್ತಿಗಳು ಸಾಮಾಜಿಕ ಮಾಧ್ಯಮಗಳನ್ನು ಪರಿಣಾಮಕಾರಿಯಾಗಿ ಬಳಸಿರುವುದು ಒಂದು ಪ್ರಮುಖ ಪಾತ್ರವನ್ನು ವಹಿಸಿತು. ಯುವಜನರ ಸೃಜನಶೀಲತೆ ಈ 'ಯಾತ್ರೆ'ಯ ಮೊದಲು ಮತ್ತು ಅದು ಕೇರಳದಲ್ಲಿ ಸಂಚರಿಸುತ್ತಿರುವ ಸಮಯದಲ್ಲಿ ಪೂರ್ಣವಾಗಿ ಅರಳಿದೆ ಎಂದು ಒಬ್ಬ ಪತ್ರಕರ್ತರು ಹೇಳಿದ್ದಾರೆ. ಹಾಸ್ಯ,ವ್ಯಂಗ್ಯ ಭರಿತ ಹಾಡುಗಳು, ವೀಡಿಯೋಗಳು, ಮೆಮೆಗಳು, ಸಂಗೀತ ಇವುಗಳೆಲ್ಲ ಕೇವಲ ಬೆದರಿಕೆ, ಹೊಲಸುಭಾಷೆಯ ಬಳಕೆಯಲ್ಲಿ, ದ್ವೇಷ ಉಗುಳುವಲ್ಲಿ ಮಾತ್ರ ತರಬೇತಿ ಪಡೆದ ಬಲಪಂಥೀಯ ಅಜ್ಞಾನಿ ಟ್ರಾಲ್ ಪಡೆಗಳನ್ನು ಕಕ್ಕಾಬಿಕ್ಕಿಯಾಗಿಸದೆ ಎಂದು ಅವರು ವಿಶ್ಲೇಷಿಸಿದ್ದಾರೆ.

ಆರು ತಿಂಗಳ 'ಸಾಧನೆ' ಆಸ್ಪತ್ರೆಯಲ್ಲಿ ಮಕ್ಕಳ ಸಾವುಗಳ ಸಂಖ್ಯೆಯಲ್ಲಿ ಮಾತ್ರವಲ್ಲ, ಅತ್ಯಾಚಾರಗಳ ಸಂಖ್ಯೆಯಲ್ಲೂ

ಕಳೆದ ತಿಂಗಳು ತನ್ನ ಅಧಿಕಾರದ ಆರು ತಿಂಗಳ ಸಾಧನೆಗಳ ಪಟ್ಟಿ ಕೊಡುತ್ತ ಉತ್ತರಪ್ರದೇಶದ ಮುಖ್ಯಮಂತ್ರಿಗಳು 431 ಎನ್‌ಕೌಂಟರ್‌ಗಳನ್ನು ನಡಸಿರುವುದಾಗಿಯೂ, ಇದರಲ್ಲಿ 17 ಮಂದಿ ಸತ್ತಿರುವುದಾಗಿ ಹೇಳಿಕೊಂಡಿದ್ದರು. ಅದಾದ ಮೇಲೆ ನೋಯ್ಡಾ ಬಳಿ ನಡೆಸಿರುವ ಮತ್ತೊಂದು ಎನ್‌ಕೌಂಟರ್ ಬಗ್ಗೆ ನಾಲ್ಕು ವಾರಗಳಲ್ಲಿ ವರದಿ ನಿಡುವಂತೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಸರಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಮತ್ತು ರಾಜ್ಯದ ಪೋಲೀಸ್ ಮಹಾನಿರ್ದೇಶಕರಿಗೆ ನೋಟೀಸು ಜಾರಿ ಮಾಡಿದೆ. ಇದೊಂದು ಹುಸಿ ಎನ್‌ಕೌಂಟರ್ ಎಂಬ ಸತ್ತವನ ಕುಟುಂಬದವರ ಆರೋಪವನ್ನು ಯಥಾಪ್ರಕಾರ ನಿರಾಕರಿಸಲಾಗಿದೆ.

ಬಿಜೆಪಿ ರಾಜ್ಯದಲ್ಲಿ ಅಪರಾಧಗಳನ್ನು ಮಟ್ಟ ಹಾಕುವುದಾಗಿ ಚುನಾವಣೆಗಳಲ್ಲಿ ಭಾರೀ ಪ್ರಚಾರ ನಡೆಸಿತ್ತು. ಈ ಎನ್‌ಕೌಂಟರ್‌ಗಳು ಕ್ರಿಮಿನಲ್‌ಗಳನ್ನು ಮಟ್ಟ ಹಾಕಲಿಕ್ಕಾಗಿ ಎನ್ನಲಾಗಿದೆ. ಆದರೆ ಆರು ತಿಂಗಳ ದಾಖಲೆಗಳು ಬೇರೆ ಕತೆಯನ್ನೇ ಹೇಳುತ್ತಿವೆ. ಜನವರಿಯಿಂದ ಆಗಸ್ಟ್ ನಡುವೆ ಕಳೆದ ವರ್ಷ 2376 ಅತ್ಯಾಚಾರ ಪ್ರಕರಣಗಳು ದಾಖಲಾಗಿದ್ದರೆ, ಈ ವರ್ಷ ಅದೇ ಅವಧಿಯಲ್ಲಿ ದಾಖಲಾಗಿರುವ ಸಂಖ್ಯೆ 3000.

ಈ ನಡುವೆ ಮತ್ತೊಂದು ವರದಿಯ ಪ್ರಕಾರ, ಆಗಸ್ಟ್ ತಿಂಗಳಲ್ಲಿ 48 ಗಂಟೆಗಳಲ್ಲಿ 42 ಮಕ್ಕಳ ಸಾವಿನಿಂದ ದೇಶದ ಗಮನ ಸೆಳೆದಿರುವ ಮುಖ್ಯಮಂತ್ರಿಗಳ ಲೋಕಸಭಾ ಕ್ಷೇತ್ರದಲ್ಲಿರುವ ದೊಡ್ಡ ಆಸ್ಪತ್ರೆಯಲ್ಲಿ ಈ ಘಟನೆಯಿಂದ ಎಚ್ಚೆತ್ತುಕೊಂಡು ಕೆಲವು ಕ್ರಮಗಳನ್ನು ಕೈಗೊಂಡಂತೆ ಪ್ರದರ್ಶಿಸಿದ್ದರೂ, ಸಪ್ಟಂಬರ್‌ನಲ್ಲಿ 433 ಮಕ್ಕಳು ಸಾವಪ್ಪಿದ್ದಾರೆ. ಇದು ಕಳೆದ ನಾಲ್ಕು ವರ್ಷಗಳಲ್ಲೇ ಅತಿ ಹೆಚ್ಚು ಎನ್ನಲಾಗಿದೆ. ಅಕ್ಟೋಬರ್‌ನ ಮೊದಲ 12 ದಿನಗಳಲ್ಲೇ ಮತ್ತೆ 175 ಮಕ್ಕಳ ಸವು ಉಂಟಾಗಿದೆ. ಕಳೆದ ಮೂರು ತಿಂಗಳಲ್ಲಿ 1000ಕ್ಕೂ ಹೆಚ್ಚು ಮಕ್ಕಳು ಪ್ರಾಣ ಕಳಕೊಂಡಿದ್ದಾರೆ.

ಆದರೂ ಈ ಮುಖ್ಯಮಂತ್ರಿಗಳು ಕೇರಳಕ್ಕೆ ಹೋಗಿ ಆಸ್ಪತ್ರೆಗಳನ್ನು ಹೇಗೆ ನಡೆಸಬೇಕು ಎಂದು ಉತ್ತರಪ್ರದೇಶದಿಂದ ಕಲಿಯಬೇಕು ಎಂದು ಹೇಳಿ ನಗೆಪಾಟಲಾಗಿದ್ದರೂ, ಅದರ ಪರಿವೆಯಿಲ್ಲದೆ ತಮ್ಮ ಮುಖ್ಯ ಅಜೆಂಡಾದಲ್ಲಿ ಮಗ್ನರಾಗಿದ್ದಾರೆ. ಸರಯೂ ನದಿತೀರದಲ್ಲಿ 100 ಮೀಟರ್ ಎತ್ತರದ ಶ್ರೀರಾಮನ ಪ್ರತಿಮೆ ನಿಲ್ಲಿಸಿ ಬಿಜೆಪಿಯ 'ಪ್ರತಿಮೆಗಳ ರಾಜಕೀಯ'ಕ್ಕೆ ಮತ್ತೊಂದನ್ನು ಸೇರಿಸಿದ್ದಾರೆ. ಇದಕ್ಕೆ ಮೊದಲು ಜಗತ್ಪ್ರಸಿದ್ಧ ತಾಜ್‌ಮಹಲ್‌ನ್ನು ರಾಜ್ಯದ ಪ್ರವಾಸೋದ್ಯಮ ಪಟ್ಟಿಯಿಂದ ತೆಗೆದು (ಇತ್ತೀಚೆಗೆ ಕಾಂಗ್ರೆಸಿನಿಂದ ಪಕ್ಷಾಂತರ ಮಾಡಿ ಬಂದಿರುವ) ತಮ್ಮದೇ ಮಂತ್ರಿಗಳಿಗೆ ಮುಜುಗರ ಉಂಟುಮಾಡಿದ್ದರು ಎಂಬುದನ್ನು ಗಮನಿಸಬಹುದು.

ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಯೋಗಿ ಸರಕಾರದ ಇನ್ನೆರಡು ಮಹತ್ಸಾಧನೆಗಳು ವರದಿಯಾಗಿವೆ. ಒಂದು,ಮಕ್ಕಳಿಗೆ ಕೊಡುವ ಶಾಲಾ ಬ್ಯಾಗುಗಳ ಬಣ್ಣವನ್ನು ಕೇಸರಿಗೊಳಿಸಿದ್ದು, ಮತ್ತು ಇನ್ನೊಂದು ಸರಕಾರೀ ಬಸ್ಸುಗಳ ಬಣ್ಣವನ್ನು ಕೂಡ ಕೇಸರಿಗೊಳಿಸಿದ್ದು!

ಬಿಹಾರದ ಮುಖ್ಯಮಂತ್ರಿಗಳ ಪೇಚು: ಅರ್ಧದಷ್ಟು ಜಿಲ್ಲೆಗಳಲ್ಲಿ ಕೋಮು ಉದ್ವಿಗ್ನತೆ, ಕೇಂದ್ರ ಮಂತ್ರಿಗಳ 'ಅವಮಾನಕರ' ಹೇಳಿಕೆ ಟೀಕಿಸಲಾಗದ ಸ್ಥಿತಿ

ತಮ್ಮನ್ನು ಗೆಲ್ಲಿಸಿದ ಮೈತ್ರಿಕೂಟವನ್ನು ತ್ಯಜಿಸಿ ತಮ್ಮನ್ನು ಸೋಲಿಸ ಹೊರಟು ಜನರಿಂದ ತಿರಸ್ಕರಿಸಲ್ಪಟ್ಟವರೊಂದಿಗೆ ಕೈಜೋಡಿಸಿ ಮತ್ತೆ ಸರಕಾರ ರಚಿಸಿದ ನಿತಿಶ್ ಕುಮಾರ್ ಅದರ ಫಲವನ್ನು ಉಣ್ಣುತ್ತಿದ್ದಾರೆ ಎಂದು ರಾಜಕೀಯ ವೀಕ್ಷಕರು ಅಭಿಪ್ರಾಯ ಪಡುತ್ತಿದ್ದಾರೆ. ಇತ್ತೀಚಿನ ಎರಡು ಘಟನೆಗಳು ಇದನ್ನು ದೃಢಪಡಿಸುವಂತಿವೆ.

ಸಪ್ಟಂಬರ್ ತಿಂಗಳಿಡೀ ದಸರಾ–ಮೊಹರ್‍ರಂ ಸಂದರ್ಭದಲ್ಲಿ ರಾಜ್ಯದ ಅರ್ಧದಷ್ಟು ಜಿಲ್ಲೆಗಳನ್ನು ಕೋಮು ಉದ್ವಿಗ್ನತೆ ಆವರಿಸಿದ್ದು ಈ ಜಿಲ್ಲೆಗಳ ಆಡಳಿತಗಳು ಶಾಂತಿ ಕಾಪಾಡಲು ಹರಸಾಹಸ ಮಾಡಬೇಕಾಗಿ ಬರುತ್ತಿದೆ.

ಗಂಭೀರ ಕೋಮು ಗಲಭೆಗಳು ನಡೆಯಲಿಲ್ಲ, ಆದರೆ ಸುಳ್ಳು ವದಂತಿಗಳ ಮೂಲಕ ಕೋಮು ಉದ್ವಿಗ್ನತೆಯನ್ನು ಸೃಷ್ಟಿಸಿ ಕೋಮುಧ್ರುವೀಕರಣದ ಪ್ರಯತ್ನ ಸರಾಗವಾಗಿ ಸಾಗಿದೆ ಎಂದು ಹೇಳಲಾಗಿದೆ.

ಸಪ್ಟಂಬರ್ ಆರಂಭದಲ್ಲಿ ರಾಜ್ಯವನ್ನು ಪೀಡಿಸಿದ ಭಾರೀ ಪ್ರವಾಹದ ಸಂದರ್ಭದಲ್ಲಿ ರೈತರ ಹಸು–ಕರುಗಳ ಹೆಣಗಳು ನೀರಲ್ಲಿ ತೇಲುತ್ತಿದ್ದಾಗ ಅವನ್ನು 'ಗೋರಕ್ಷಣೆ'ಯ ವಾತಾವರಣದಲ್ಲಿ ತಿರುಚುವ ಪ್ರಯತ್ನಗಳಿಂದಾಗಿ ಕೋಸಿ ಮತ್ತು ಪೂರ್ಣಿಯ ವಿಭಾಗಗಳ ಏಳು ಜಿಲ್ಲೆಗಳಲ್ಲಿ ಊಹಾಪೋಹಗಳನ್ನು ಹರಡಿ ಉದ್ವಿಗ್ನತೆಯನ್ನು ಸೃಷ್ಟಿಸಿದ್ದರೆ, ಸಪ್ಟಂಬರ್ ಕೊನೆಯ ವೇಳೆಗೆ ದಸರಾ– ಮೊಹರ್‍ರಂ ಆಚರಣೆ–ಯ ಹಿನ್ನೆಲೆಯಲ್ಲಿ ಇಂತಹ ಇನ್ನೊಂದು ಅಲೆ ಕಟಿಹಾರ್, ಮಾಧೇಪುರ, ಸಹರಸಾ, ಅರಾರಿಯ ಮುಂತಾದವುಗಳನ್ನು ಅಪ್ಪಳಿಸಿದೆ.

ಈ ಎರಡೂ ಸಂದರ್ಭಗಳಲ್ಲಿ ನಿತಿಶ್ ಕುಮಾರ್ ನೆರವಿನಿಂದ ಅಧಿಕಾರ ಪಡೆದಿರುವ ಕೋಮು ಶಕ್ತಿಗಳದ್ದೇ ಕಾರುಬಾರು ಮುಖ್ಯಮಂತ್ರಿಗಳ ಕೈಕಟ್ಟಿದೆ, ಬಿಜೆಪಿ ಈಗ 2019ರ ಲೋಕಸಭಾ ಚುನಾವಣೆಗೆ, ನಿತಿಶ್ ಕುಮಾರ್ ಪ್ರತಿಪಕ್ಷಗಳಿಗೆ ಕೈಕೊಟ್ಟಂತೆ ಅವರಿಗೇ ಕೈಕೊಡಲು ತಯಾರಿ ನಡೆಸುತ್ತಿದೆ ಎಂದು ಕಟಿಹಾರ್‌ನಿಂದ ಲೋಕಸಭೆಗೆ ಗೆದ್ದು ಬಂದಿರುವ ಎನ್‌ಸಿಪಿ ಮುಖಂಡ ತಾರಿಕ್ ಅನ್ವರ್ ಮತ್ತಿತರ ಪ್ರತಿಪಕ್ಷಗಳ ಮುಖಂಡರು ಹೇಳುತ್ತಿರುವುದಾಗಿ ವರದಿಯಾಗಿದೆ.

ಕೇಂದ್ರ ಮಂತ್ರಿಗಳಿಂದ ಬಿಹಾರಿಗಳಿಗೆ 'ಅವಮಾನ'– 'ಕಾನೂನುಬಾಹಿರ' ನಿರ್ದೇಶನ

ಅಕ್ಟೋಬರ್ 9ರಂದು ಬಿಹಾರದ ಮುಝಫ್ಫರ್‌ಪುರ್‌ನಲ್ಲಿ ಕೇಂದ್ರ ಸಂಪುಟದಲ್ಲಿ ಆರೋಗ್ಯ ಇಲಾಖೆಯ ರಾಜ್ಯದರ್ಜೆಯ ಮಂತ್ರಿ ಅಶ್ವಿನಿ ಚೌಬೆಯವರ ವಿರುದ್ಧ ದೂರು ದಾಖಲಾಗಿದೆ. ಈ ಮಂತ್ರಿಗಳು ಇತ್ತೀಚೆಗೆ ಸಮಾರಂಭವೊಂದರಲ್ಲಿ "ನಾನು ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ(ಏಮ್ಸ್) ನಿರ್ದೇಶಕರಿಗೆ ಪಾಟ್ನಾದಲ್ಲಿ ಚಿಕಿತ್ಸೆ ನೀಡಬಹುದಾದವರನ್ನು ಅಲ್ಲಿಗೇ ಹೋಗುವಂತೆ ಹೇಳಬೇಕು... ಅವರು ಇಲ್ಲಿ(ದಿಲ್ಲಿಯಲ್ಲಿ) ಜನಜಂಗುಳಿಯನ್ನು ಹೆಚ್ಚಿಸಬೇಕಾಗಿಲ್ಲ" ಎಂದು ಬಿಹಾರದ ಜನತೆಗೆ ಅವಮಾನ ಮಾಡಿದ್ದಾರೆ ಎಂಬುದು ಈ ದೂರು.

ಈತ ಬಿಹಾರದ ಬಕ್ಸಾರ್‌ನಿಂದ ಚುನಾಯಿತರಾದವರು. ಬಿಹಾರದ ಜನ ಸಣ್ಣಪುಟ್ಟ ಕಾಯಿಲೆಗಳಿಗೂ ದಿಲ್ಲಿಯ ಈ ಮಹಾಸಂಸ್ಥೆಗೆ ಹೋಗಿ ಅಲ್ಲಿ ಗದ್ದಲ ಹೆಚ್ಚಿಸುತ್ತಾರೆ ಎಂದು ಇವರು ಹೇಗೆ ಹೇಳುತ್ತಾರೆ ಎಂಬುದೇ ಜನಗಳ ಪ್ರಶ್ನೆ. **ಹೀಗೆ ಯಾವುದೇ ಒಂದು ಪ್ರದೇಶದ, ಸಮುದಾಯದ ಜನಗಳಿಗೆ ಚಿಕಿತ್ಸೆ ನೀಡಬಾರದು ಎಂದು ಡಾಕ್ಟರುಗಳಿಗೆ ಹೇಳುವುದು ಸರಿಯಲ್ಲ, ಮಾತ್ರವಲ್ಲ ಅದು ಕಾನೂನುಬಾಹಿರ, ಅದನ್ನು ಪಾಲಿಸಲು ಸಾಧ್ಯವಿಲ್ಲ ಎಂದು ಏಮ್ಸ್‌ನ ಒಬ್ಬ ವೈದ್ಯರು ಮಂತ್ರಿಗಳಿಗೆ ಬಹಿರಂಗ ಪತ್ರವನ್ನೂ ಬರೆದಿದ್ದಾರೆ.**

ಬಿಹಾರದ ಮಂತ್ರಿಯೊಬ್ಬರು ಇಂತಹ ಹೇಳಿಕೆ ನೀಡಿರುವುದು ಮುಖ್ಯಮಂತ್ರಿಗಳಿಗೆ ಮುಜುಗರ ಉಂಟು ಮಾಡಿದಂತೆ ಕಾಣುತ್ತದೆ. ಆದರೆ ಅದನ್ನು ತೋರಿಸಿಕೊಡಲಾಗದ ಅವರು ನಾವು ಬಿಹಾರದಲ್ಲೇ ಅತ್ಯುತ್ತಮ ಚಿಕಿತ್ಸೆ ದೊರೆಯುವಂತಹ ಆರೋಗ್ಯ ವ್ಯವಸ್ಥೆಯನ್ನು ನಿರ್ಮಿಸುವ ಯೋಜನೆ ಹಾಕಿದ್ದೇವೆ ಎಂದಿದ್ದಾರೆ.

ಆದರೆ ಅವರ ಬಿಜೆಪಿ ಉಪಮುಖ್ಯಮಂತ್ರಿಗಳು ಈ ಮಂತ್ರಿಗಳ ಹೇಳಿಕೆಯನ್ನು ಎಂದಿನಂತೆ 'ಅಪಾರ್ಥ ಮಾಡಿಕೊಳ್ಳಲಾಗಿದೆ" ಎಂದು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಈ ಹಿಂದೆ ಇಲ್ಲಿ ಎನ್‌ಡಿಎ ಸರಕಾರ ಇದ್ದಾಗಲೂ, ಈಗಲೂ ಕೂಡ ಬಿಜೆಪಿ ಮಂತ್ರಿಮಂಡಲದಲ್ಲಿ ಆರೋಗ್ಯ ಇಲಾಖೆ ಬಿಜೆಪಿ ಮಂತ್ರಿಗಳ ಕೈಯಲ್ಲೇ ಇತ್ತು ಎಂಬ ಸಂಗತಿಯನ್ನೂ ಹೇಳಲಾಗದಂತಹ ಪರಿಸ್ಥಿತಿಯಲ್ಲಿ ಬಿಹಾರದ ಮುಖ್ಯಮಂತ್ರಿಗಳು ಇದ್ದಾರಂತೆ.

ಇದು ಸಾಲದೆಂಬಂತೆ ಈಗ ಜಯ್ ಷಾ ಪ್ರಕರಣ ಬಿಹಾರದಲ್ಲಿ ಅವರು ತಮ್ಮ 'ಒಳದನಿ'ಗೆ ಓಗೊಡುವಂತೆ ಮಾಡಿದ ಲಾಲೂ ಯಾದವ್ ಅವರ ಮಗನ ಪ್ರಕರಣವನ್ನೂ ಮೀರುವಂತಿರುವುದು ಅವರ ಮುಜುಗರವನ್ನು ಇನ್ನೂ ಹೆಚ್ಚಿಸಿದೆ.

ವೆನೆಜುವೆಲಕ್ಕೆ ಟ್ರಂಪ್ ಬೆದರಿಕೆಗೆ ಪ್ರತಿಸವಾಲು ಕಾರಕಾಸ್ ಜಾಗತಿಕ ಶೃಂಗ ಸಭೆಯಲ್ಲಿ ಒಕ್ಕೊರಲ ಘೋಷಣೆ: 'ವೆನೆಜುವೆಲ ಒಂಟಿಯಲ್ಲ"

ಜಗದ ಸುತ್ತ

ನಾಗರಾಜ ನಂಜುಂಡಯ್ಯ



ವೆನೆಜುವೆಲಾದಲ್ಲಿ ಕಳೆದ ಜುಲೈ 30 'ಸಂವಿಧಾನ ಸಭೆ'ಗೆ ಚುನಾವಣೆ ನಡೆದ ನಂತರ, ಅಮೆರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆ ದೇಶದಲ್ಲಿ ಮಿಲಿಟರಿ ಹಸ್ತಕ್ಷೇಪ ಮಾಡುವ ಬೆದರಿಕೆಯನ್ನು ಒಡ್ಡಿದ್ದರು. ಅಂತರ ರಾಷ್ಟ್ರೀಯವಾಗಿ ಹಾಗೂ ಲ್ಯಾಟಿನ್ ಅಮೆರಿಕದ ಸಾಕಷ್ಟು ರಾಷ್ಟ್ರಗಳು ಟ್ರಂಪ್ ರ ಈ ಧೋರಣೆಯ ವಿರುದ್ಧ ಧ್ವನಿ ಎತ್ತಿ, ವೆನೆಜುವೆಲಾದ ಅಧ್ಯಕ್ಷರಾದ ನಿಕೊಲಸ್ ಮಡೊರೋ ರವರಿಗೆ ಸೌಹಾರ್ದ ಬೆಂಬಲ ವ್ಯಕ್ತಪಡಿಸಿದ್ದಾರೆ.

ಅಮೆರಿಕ ಅಧ್ಯಕ್ಷರ ಬೆದರಿಕೆ ಈ ರೀತಿ ಇತ್ತು:. "ನಾವು ಅಂದರೆ ನಮ್ಮ ಅಮೆರಿಕಾದ ಮಿಲಿಟರಿ ಪ್ರಪಂಚದಾದ್ಯಂತ ಆವರಿಸಿದೆ ಹಾಗೆಯೇ ವಿಶ್ವದಾದ್ಯಂತ ನಮ್ಮ ಸೈನಿಕ ನೆಲೆಗಳಿವೆ. ಇವೆಲ್ಲಾ ದೂರ ದೂರ ದೇಶಗಳಲ್ಲಿಯೂ ನೆಲೆ ಹೊಂದಿವೆ. ಆದರೆ ವೆನೆಜುವೆಲಾ ಬಹಳ ದೂರವೇನು ಇಲ್ಲ. ಅವರ ಮೇಲೆ ಯಾವಾಗ ಬೇಕಾದರೂ ಆಕ್ರಮಣ ಮಾಡಬಹುದು. ನಿಕೊಲಸ್ ಮಡೊರೋ ಆಡಳಿತದಲ್ಲಿ ಜನರು ನರಳುತ್ತಿದ್ದಾರೆ ಮತ್ತು ಅನೇಕರು ಸಾಯುತ್ತಿದ್ದಾರೆ. ಇನ್ನು ನಾವು ಸುಮ್ಮನಿರಲು ಸಾಧ್ಯವಿಲ್ಲ. ವೆನೆಜುವೆಲದ ಮೇಲೆ ಪ್ರಯೋಗಿಸಲು ಹಲವು ಆಯ್ಕೆಗಳಿವೆ. ಅಗತ್ಯ ಬಿದ್ದರೆ 'ಮಿಲಿಟರಿ ಆಯ್ಕೆಯು ಅದರಲ್ಲಿ ಒಂದು'. ಆಗ ಜತೆಯಲ್ಲಿದ್ದ ಅವರ ವಿದೇಶಾಂಗ ಕಾರ್ಯದರ್ಶಿ ರೆಕ್ಸ್ ಟಿಲ್ಲರ್ಸನ್ ಮತ್ತು ವಿಶ್ವ ಸಂಸ್ಥೆಯಲ್ಲಿ ಅಮೆರಿಕಾದ ರಾಯಭಾರಿ ನಿಕ್ಕಿ ಹ್ಯಾಲೆ ಕೂಡ ಜೊತೆಗಿದ್ದು, ಟ್ರಂಪ್‌ರ ಹೇಳಿಕೆಗಳನ್ನು ಬೆಂಬಲಿಸುತ್ತ ವೆನೆಜುವೆಲ್ಲ ವಿರುದ್ಧ ಮಿಲಿಟರಿ ಆಯ್ಕೆಯು ತುಂಬಾ ಸೂಕ್ತವಾಗಿದೆ ಎಂದಿದ್ದರು.

ಟ್ರಂಪ್‌ರ ವಿಶ್ವ ಸಂಸ್ಥೆಯ 72ನೇ ಅಧಿವೇಶನದಲ್ಲಿಯೂ ಇದೇ ರೀತಿ ಬಹಿರಂಗವಾಗಿಯೇ ಸಾಮ್ರಾಜ್ಯಶಾಹಿ ಯುದ್ಧದ ಧೋರಣೆಯನ್ನೆ ಪ್ರತಿಪಾದನೆ ಮಾಡುತ್ತ ತಮ್ಮ ಭಾಷಣ ಮುಗಿಸಿದ್ದರು.

ಅಮೆರಿಕಾ ಸಂಯುಕ್ತ ಸಂಸ್ಥಾನ ಮತ್ತು ಈ ಪ್ರದೇಶದಲ್ಲಿನ ಅದರ ಮಿತ್ರ ದೇಶಗಳು ವೆನೆಜುವೆಲವು "ಹೊಸ ಸಂವಿಧಾನ ಸಭೆ ರೂಪಿಸುತ್ತಿರುವುದು ಕಾನೂನು ಬಾಹಿರ ಇದು ಮುಂದುವರಿದಿದ್ದೆ ಆದರೆ, ಹೆಚ್ಚು ದಂಡನಾತ್ಮಕ ಕ್ರಮಗಳನ್ನು ಕೈಗೊಳ್ಳುತ್ತೇವೆ" ಎಂದು ಚುನಾವಣೆಗೆ ಮುನ್ನ ಬೆದರಿಕೆಯೊಡ್ಡಿದರು. ಆದರೆ ವೆನೆಜುವೆಲದಲ್ಲಿ 'ರಾಷ್ಟ್ರೀಯ ಸಂವಿಧಾನ ಸಭೆಯನ್ನು ಕರೆಯುವ ಹಕ್ಕಿಗೆ ಬೆಂಬಲ ದೊರೆಯಿತು. ಅದರಂತೆ ಚುನಾವಣೆಯನ್ನು ಜುಲೈ 30, 2017 ರಂದು ನಡೆಸಲಾಯಿತು. ಬಲಪಂಥೀಯ ವಿರೋಧ ಪಕ್ಷಗಳು ಸಾಕಷ್ಟು ಹಿಂಸಾತ್ಮಕ ಕೃತ್ಯಗಳನ್ನು ಕಳೆದ 4 ವರ್ಷಗಳಿಂದ ಅಂದರೆ ಹ್ಯೂಗೋ ಚವಾಜ್ ಮರಣಹೊಂದಿದ ನಂತರದಿಂದ ನಡೆಸಿಕೊಂಡು ಬರುತ್ತಿದ್ದಾರೆ. ಇದರಿಂದಾಗಿ ನೂರಾರು ಜನರು ಸತ್ತಿದ್ದಾರೆ. ಚುನಾವಣಾ ಸಂದರ್ಭದಲ್ಲಿಯೂ ಸಾಕಷ್ಟು ದೌರ್ಜನ್ಯ, ಹಿಂಸೆಗಳನ್ನು ನಡೆಸಿದ್ದರು. ಹಲವು ಜನರು ಇದಕ್ಕೆ ಬಲಿಯಾಗಿದ್ದರು. ಈ ಎಲ್ಲಾ ಹಿಂಸೆಗಳಿಗೆ ಅಮೆರಿಕಾದ ಪರೋಕ್ಷ ಕುಮ್ಮಕ್ಕು ಇರುವುದು ಜಗಜಾಹಿರವಾಗಿದೆ. ಇಷ್ಟೆಲ್ಲಾ ಹಿಂಸೆಗಳು ವಿರೋಧ ಪಕ್ಷದವರಿಂದ ನಡೆಯುತ್ತಿದ್ದರೂ ವೆನೆಜುವೆಲದ ಜನ ಅಲ್ಲಿನ ಅಧ್ಯಕ್ಷರಾದ ನಿಕೋಲಸ್ ಮಡೊರೋ ರವರ ಪ್ರಜಾಪ್ರಭುತ್ವ ನಿಲುವಿಗೆ ಹಾಗೂ ಬೋಲಿವಿರಿಯನ್ ಕ್ರಾಂತಿಯ ರಕ್ಷಣೆಗೆ ಬೆಂಬಲವಾಗಿ ನಿಂತಿದ್ದಾರೆ.

ವೆನೆಜುವೆಲಾದ ಚುನಾವಣಾ ಆಯೋಗದ ಪ್ರಕಾರ 8 ದಶಲಕ್ಷಕ್ಕೂ ಅಧಿಕ ನಾಗರಿಕರು, ಅಂದರೆ ಶೇ.41 ರಷ್ಟು ಮತದಾರರು ತಮ್ಮ ಹಕ್ಕು ಚಲಾವಣೆಯ ಪ್ರಕ್ರಿಯೆಯಲ್ಲಿ ಭಾಗವಹಿಸಿ, 541 ಸದಸ್ಯರನ್ನು 'ಸಂವಿಧಾನ ಸಭೆ' ಗೆ ಆಯ್ಕೆ ಮಾಡಿದ್ದಾರೆ. ಇದು ಟ್ರಂಪ್'ರನ್ನು ಮತ್ತಷ್ಟು ಕೆರಳಿಸಿದೆ.

ಹೊಸದಾಗಿ ಚುನಾಯಿತವಾದ ಈ ಸದಸ್ಯರಿಗೆ ಎರಡು ವರ್ಷದೊಳಗೆ ದೇಶದ ಸಂವಿಧಾನವನ್ನು ಪುನಃ ಬರೆಯಲು ಅವಕಾಶವಿದೆ. ಇದರ ಜೊತೆ–ಗೆ ಹಿಂಸಾತ್ಮಕ ಕೃತ್ಯಗಳ ಹಿಂದಿರುವ ವಿರೋಧ ಪಕ್ಷದವರನ್ನು ಜವಾಬ್ದಾರರನ್ನಾಗಿ ಮಾಡುವ ಒಂದು 'ಸತ್ಯ ಶೋಧನಾ ಆಯೋಗವನ್ನು' ಸ್ಥಾಪಿಸಲು ಕೂಡ ಅವಕಾಶದ ಲಭ್ಯವಿದೆ. ಹಾಗೆಯೇ ಬೊಲಿವೇರಿಯನ್ ಕ್ರಾಂತಿಯ ರಕ್ಷಣೆಯ ಹೋರಾಟಕ್ಕೆ ಮತ್ತಷ್ಟು ಬಲ ಸಿಗುತ್ತದೆ.

ಈ ಹಿನ್ನೆಲೆಯಲ್ಲಿ ವೆನೆಜುವೆಲ್ಲದ ರಾಜಧಾನಿಯಾದ ಕ್ಯಾರಕಾಸ್ ನಲ್ಲಿ ಕಳೆದ ಸೆಪ್ಟೆಂಬರ್ 16 ರಿಂದ 19 ರವರೆಗೆ ನಾಲ್ಕು ದಿನಗಳ ಕಾಲ ಜಾಗತಿಕ ಸೌಹಾರ್ದ ಶೃಂಗಸಭೆ ನಡೆದಿದೆ. "ನಾವೆಲ್ಲ ವೆನೆಝುವೆಲ: ಶಾಂತಿ, ಸಾರ್ವಭೌಮತೆ ಮತ್ತು ಬೊಲಿವೇರಿಯನ್ ಪ್ರಜಾಪ್ರಭುತ್ವಕ್ಕೆ ಸಂವಾದ" ಎಂಬ ಈ ಶೃಂಗ ಸಭೆಯಲ್ಲಿ ಭಾರತ ಸೇರಿದಂತೆ, 5 ಖಂಡಗಳ 60 ರಾಷ್ಟ್ರಗಳಿಂದ 200 ಕ್ಕೂ ಹೆಚ್ಚು ಪ್ರತಿನಿಧಿಗಳು, ಶಾಂತಿ ಕಾರ್ಯಕರ್ತರು, ಸಾಮಾಜಿಕ ಕಾರ್ಯಕರ್ತರು, ಬುಡಕಟ್ಟಿನ ಸಂಘಟನೆಗಳ, ರಾಜಕೀಯ ಸಂಘಟನೆಗಳಲ್ಲಿ ದುಡಿಯುತ್ತಿರುವವರು, ಕಲಾವಿದರು, ಬುದ್ಧಿಜೀವಿಗಳು ಭಾಗವಹಿಸಿದ್ದರು. ಲ್ಯಾಟಿನ್ ಅಮೆರಿಕಾದ ವಿಮೋಚನಕಾರನಾಗಿದ್ದ 'ಸೈಮನ್ ಬೊಲಿವಾರ್' ಮತ್ತು ಬೊಲಿವೇರಿಯನ್ ಕ್ರಾಂತಿಯ ಶಿಲ್ಪಿ ಹ್ಯೂಗೋ ಚವೆಜ್‌ರ ಪರಂಪರೆಯನ್ನು ನಾಶಮಾಡಲು ಉದ್ದೇಶಿಸಿರುವ ಟ್ರಂಪ್ ಧೋರಣೆಯನ್ನು ವಿರೋಧಿಸಿ, ವೆನೆಜುವೆಲದ ಅಧ್ಯಕ್ಷರಾದ ನಿಕೊಲಸ್ ಮಡೊರೋ ರವರಿಗೆ 'ಸೌಹಾರ್ದ ಬೆಂಬಲ ವ್ಯಕ್ತಪಡಿಸುವ ಉದ್ದೇಶವನ್ನು ಈ ಶೃಂಗಸಭೆ ಹೊಂದಿತ್ತು. ಭಾಗವಹಿಸಿದ್ದು ವಿಶೇಷವಾಗಿತ್ತು.

ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೀಡಿದ್ದ ಮಿಲಿಟರಿ ಹಸ್ತಕ್ಷೇಪದ ಬೆದರಿಕೆಯನ್ನು ಹಾಗೂ ಅವರ ಭಾಷಣ, ಟ್ವೀಟ್‌ಗಳನ್ನು ಬಲವಾಗಿ ಈ ಶೃಂಗಸಭೆ ಖಂಡಿಸಿತು. ಅಮೆರಿಕನ್ ಆಡಳಿತದ 'ಆಳ್ವಿಕೆ ಬದಲಾವಣೆ' ಹಾಗೂ ಹಣಕಾಸು ನಿರ್ಬಂದನೆಗಳನ್ನು ಹೇರುವ ಧೋರಣೆಗಳನ್ನು ಉಗ್ರವಾಗಿ ಶೃಂಗಸಭೆಯಲ್ಲಿ ಭಾಗವಹಿಸಿದ್ದ ಹಲವಾರು ನಾಯಕರು ಖಂಡಿಸಿದರು. ಬೊಲಿವೇರಿಯನ್ ಕ್ರಾಂತಿಯನ್ನು ಮುನ್ನಡೆಸುತ್ತಿರುವ ವೆನೆಜುವೆಲ ಅಧ್ಯಕ್ಷ ಮಡೋರೋ ಸರ್ಕಾರವನ್ನು ಅಸ್ಥಿರಗೊಳಿಸಲು ಯುರೋಪಿಯನ್ ಮತ್ತು ಲ್ಯಾಟಿನ್ ಅಮೆರಿಕದ ಪ್ರತಿಗಾಮಿ ಶಕ್ತಿಗಳೊಂದಿಗೆ ಕೈಜೋಡಿಸಿರುವ ಅಮೆರಿಕವು, ಕಳೆದ 4 ವರ್ಷಗಳಿಂದ ಬಹಿರಂಗವಾಗಿಯೇ ಕಾರ್ಯ ನಿರ್ವಹಿಸುತ್ತಿದೆ.

ಸಾಮ್ರಾಜ್ಯಶಾಹಿ ಶಕ್ತಿಯ ವಿರುದ್ಧ ವೆನೆಜುವೆಲ ಜನರು, ತಮ್ಮ ಸಾರ್ವಭೌಮತ್ವದ ರಕ್ಷಣೆಗಾಗಿ, ವಿರೋಧಿಗಳ ದಾಳಿಗಳನ್ನು ಧೈರ್ಯದಿಂದಲೇ ಎದುರಿಸುತ್ತಿದ್ದಾರೆ. ಹ್ಯೂಗೋ ಚವೆಜ್‌ರ ಹೋರಾಟದ ಪರಂಪರೆಯನ್ನು ಮುಂದುವರೆಸಿಕೊಂಡು ಅವರ ಉತ್ತರಾಧಿಕಾರಿ ಮಡೊರೋ ನೇತೃತ್ವದಲ್ಲಿ ಎದೆಗುಂದದೆ ಅಮೆರಿಕಾಕ್ಕೆ ಉತ್ತರಿಸುತ್ತಿದ್ದಾರೆ. ಎಂಬ ಅಂಶವನ್ನು ಶೃಂಗಸಭೆಯಲ್ಲಿ ಭಾಗವಹಿಸಿದವರು ಮುಕ್ತಕಂಠದಿಂದ ಶ್ಲಾಘಿಸಿದರು. ಇದು ಅಧ್ಯಕ್ಷ ಟ್ರಂಪ್‌ಗೆ ನುಂಗಲಾರದ ತುತ್ತಾಗಿದೆ. ಶೃಂಗ ಸಭೆಯಲ್ಲಿ ಭಾಗವಹಿಸಿದ್ದವರು "ನಾವೆಲ್ಲರೂ ವೆನಿಜುವೆಲ ಜನರ ಶಾಂತಿಗಾಗಿ, ಸಾರ್ವಭೌಮತ್ವ ಮತ್ತು ಬೊಲಿವೇರಿಯನ್‌ರ ಪ್ರಜಾಪ್ರಭುತ್ವದ ರಕ್ಷಣೆಗಾಗಿ ಸಂವಾದ ನಡೆಸಲು ಶೃಂಗ ಸಭೆಗೆ ಆಗಮಿಸಿದ್ದೇವೆ" ಎಂದು ಒಕ್ಕೊರಲಿನಿಂದ ಬೆಂಬಲ ಸೂಚಿಸಿದ್ದಾರೆ.

ವೆನೆಜುವೆಲ ಒಂಟಿಯಲ್ಲ, ಸ್ಪಷ್ಟವಾದ, ಜೋರಾಗಿ ಮೂಡಿಬಂದ ಸಂದೇಶ

ವೆನಿಜುವೆಲಾದ ಆಂತರಿಕ ವ್ಯವಹಾರದಲ್ಲಿ ಯಾವುದೇ ಇತರ ದೇಶಗಳ ಹಸ್ತಕ್ಷೇಪದ ಬಗ್ಗೆ ತೀವ್ರವಾದ ವಿರೋಧ ಶೃಂಗ ಸಭೆಯಲ್ಲಿ ವ್ಯಕ್ತವಾದ ನಂತರ, ವೆನೆಜುವೆಲ ಒಂಟಿಯಲ್ಲ ಎಂಬ ಸ್ಪಷ್ಟವಾದ ಸಂದೇಶವನ್ನು ನೀಡಿದ ಈ ಜಾಗತಿಕ ಸಭೆ "ಬೊಲಿವೇರಿಯನ್ ಕ್ರಾಂತಿಯ ರಕ್ಷಣೆ ಲ್ಯಾಟಿನ್ ಅಮೆರಿಕ, ಕೆರಿಬಿಯನ್ ಮತ್ತು ಇಡೀ ಜಗತ್ತಿನ ಜನಗಳ ಕರ್ತವ್ಯ, ವೆನೆಝುವೆಲ ದಲ್ಲಿ ನಾವು ಸಾರ್ವಭೌಮತೆ, ಸ್ವಾತಂತ್ರ್ಯ, ಸ್ವಯಂನಿರ್ಧಾರ ಮತ್ತು ನಮ್ಮೆಲ್ಲ ಜನಗಳ ಸಮಗ್ರೀಕರಣದ ಹಕ್ಕಿನ ರಕ್ಷಣೆ–ಯ ಬಗ್ಗೆ ಪ್ರಜ್ಞಾಶೀಲರಾಗಿದ್ದೇವೆ" ಎಂದು ಸಾರಿದ 'ಕ್ಯಾರಕಾಸ್ ಘೋಷಣೆ'ಯನ್ನು ಅಂಗೀಕರಿಸಿತು. ಅದರೊಂದಿಗೆ "ಬೊಲಿವೇರಿಯನ್ ಕ್ರಾಂತಿಯೊಂದಿಗೆ ಸೌಹಾರ್ದವನ್ನು ಬಲಪಡಿಸುವ, ಜನಗಳ ಉದ್ಧಾರದ ಹೋರಾಟಗಳನ್ನು ಪೋಷಿಸುವ ಒಂದು 'ಕಾರ್ಯಯೋಜನೆ' ಕೂಡ ಅಂಗೀಕರಿಸಲಾಯಿತು. ಟ್ರೇಡ್ ಯೂನಿಯನ್, ಮಹಿಳಾ ಸಂಘಟನೆಗಳು, ಸಹಕಾರಿ ಸಂಘಗಳು, ಧಾರ್ಮಿಕ ಸಂಘಟನೆಗಳು ಇತ್ಯಾದಿಗಳಲ್ಲಿ ಬೊಲಿವೇರಿಯನ್ ಕ್ರಾಂತಿಗೆ ಬೆಂಬಲ ಕ್ರೋಢೀಕರಿಸುವುದು ಇದರ ಉದ್ದೇಶ.

ವೆನಿಜುವೆಲದ ಬಗ್ಗೆ ಅಮೆರಿಕ ಮತ್ತು ಅದರ ಬಹುರಾಷ್ಟ್ರೀಯ ಬಲಪಂಥೀಯ ಮಿತ್ರ ಹರಡುತ್ತಿರುವ ಸುಳ್ಳು–ಮಾಹಿತಿಗಳನ್ನು, ಸುದ್ದಿಗಳನ್ನು ವಿಶ್ವಕ್ಕೆ ತಿಳಿಸಿ, ಮನವರಿಕೆ ಮಾಡುವ ಸಲುವಾಗಿ "ವೆನಿಜುವೆಲ ಬಗ್ಗೆ ಸತ್ಯ" (Truth about Venezuvela) ಎಂಬ ಪ್ರಚಾರವನ್ನು ಅಂತರಾಷ್ಟ್ರೀಯವಾಗಿ ನಡೆಸಲು ಕಾರ್ಯಯೋಜನೆಯಲ್ಲಿ ತೀರ್ಮಾನಿಸಲಾಯಿತು. ಅಮೆರಿಕಾದ ಬಣ್ಣವನ್ನು ಬಯಲುಗೊಳಿಸಲು ಸಾಮಾಜಿಕ ಜಾಲತಾಣಗಳ ಯೋಜನೆಯಲ್ಲಿ ಡಿಜಿಟಲ್ ಅಭಿಯಾನವನ್ನೂ ಸಕ್ರಿಯಗೊಳಿಸಲು ನಿರ್ಧರಿಸಲಾಯಿತು.

ಈ ಶೃಂಗ ಸಭೆಯಲ್ಲಿ ವೆನೆಜುವೆಲದ ಅಧ್ಯಕ್ಷ ಮಡುರೊ ಮತ್ತು ಬೊಲಿವಿಯಾದ ಅಧ್ಯಕ್ಷ ಇವೊ ಮೊರೆಲೆಸ್‌ರೊಂದಿಗೆ 'ಸಂಭಾಷಣೆ'ಯ ಕಾರ್ಯಕ್ರಮವೂ ಇತ್ತು. ಇದರಲ್ಲಿ ಲ್ಯಾಟಿನ್ ಅಮೆರಿಕಾದ ಈ ಎರಡು ಮುಖಂಡರು ಪ್ರಸಕ್ತ ಜಗತ್ತಿನ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

ಜಾಗತಿಕ ಸೌಹಾರ್ದತೆಯ ಶೃಂಗಸಭೆಯು ಮುಗಿದ ನಂತರ, ಸೆಪ್ಟೆಂಬರ್ 20 ರಂದು ಕಾರಕಾಸ್ ನಗರದಲ್ಲಿ ಸಾಮ್ರಾಜ್ಯಶಾಹಿ ವಿರೋಧಿ ರ್‍ಯಾಲಿಯನ್ನೂ ಸಂಘಟಿಸಲಾಯಿತು. ಅಂದು ಇಡೀ ಕಾರಕಾಸ್ ನಗರದ ಎಲ್ಲ ಬೀದಿಗಳು ಕಿಕ್ಕಿರಿದ – ಜನಸ್ತೋಮದಿಂದ ತುಂಬಿ ಹೋಗಿತ್ತು.

ಈ ರ್‍ಯಾಲಿಯಲ್ಲಿ ಮೂಡಿಬಂದ ಒಮ್ಮತದ ಸಂದೇಶ ಸ್ಪಷ್ಟವಾಗಿತ್ತು. ಹಾಗೂ ತುಂಬಾ ಜೋರಾಗಿ–ತ್ತು– "ವೆನೆಜುವೆಲ ಒಂಟಿಯಲ್ಲ".

ಈ ನಡುವೆ ವಿಶ್ವಸಂಸ್ಥೆಯ 72ನೇ ಸಾಮಾನ್ಯ ಅಸೆಂಬ್ಲಿ ಚರ್ಚೆಯ ಭಾಗವಾಗಿ ಸಪ್ಟಂಬರ್ 26 ರಂದು ಸಭೆ ಸೇರಿದ ಅಲಿಪ್ತ ಆಂದೋಲನದ 120 ಸದಸ್ಯ ರಾಷ್ಟ್ರಗಳು ಆರು ಪುಟಗಳ 'ನ್ಯೂಯಾರ್ಕ್ ರಾಜಕೀಯ ಘೋಷಣೆ'ಗೆ ಸಹಿ ಹಾಕಿವೆ. ಇದರಲ್ಲಿ ಏಕಪಕ್ಷೀಯ ನಿರ್ಬಂಧಗಳು ಬಲವಂತ ಹೇರುವ ಕ್ರಮಗಳನ್ನು ವಿರೋಧಿಸಲಾಗಿದೆ. ಎರಡು ದಿನಗಳ ನಂತರ ಸಪ್ಟಂಬರ್ 28ರಂದು ಭಾರತವೂ ಸೇರಿದಂತೆ 57 ದೇಶಗಳು ಕ್ಯೂಬಾದ ವಿಶ್ವಸಂಸ್ಥೆ ರಾಯಭಾರಿ ಪೆದ್ರೊ ಲೂಯಿ ಪೆದ್ರೊಸೊ ಪ್ರಸ್ತುಪಡಿಸಿದ ವೆನೆಜುವೆಲ್ ಸಾರ್ವಭೌಮತೆಯನ್ನು ಬೆಂಬಲಿಸುವ ಘೋಷಣೆಗೆ ಜಿನೇವಾದಲ್ಲಿ ವಿಶ್ವ ಸಂಸ್ಥೆ ಮಾನವ ಹಕ್ಕುಗಳ ಮಂಡಳಿಯ ಕಚೇರಿಯಲ್ಲಿ ಸಹಿ ಹಾಕಿವೆ.

ಉಸ್ಸೆಂದ ಬಿಜೆಪಿ ಮುತ್ತಿಗೆ–ರಾಜ್ಯಾದ್ಯಂತ ಪ್ರತಿಭಟನೆ.... ಪುಟ 16 ರಿಂದ

ಕರಂದ್ಲಾಜೆ, ಮಾಜಿ ಉಪಮುಖ್ಯಮಂತ್ರಿ ಆರ್. ಅಶೋಕ್ ನೇತೃತ್ವದಲ್ಲಿ ಬಿಜೆಪಿ ಗೂಂಡಾ ಪಡೆ ಲಾಲ್ ಬಾಗ್ ವೆಸ್ಟ್ ಗೇಟ್ ನಿಂದ ಹೊರಟಿತ್ತು. ಪೊಲೀಸರು ಈ ಯಾತ್ರೆಯನ್ನು ತಡೆದು ಮುಖಂಡರನ್ನು ವಶಕ್ಕೆ ಪಡೆದಿದ್ದು, ಬಿಜೆಪಿಯ ಮುತ್ತಿಗೆ ಯೋಜನೆ ವಿಫಲಗೊಂಡಿದೆ.

ಅಕ್ಟೋಬರ್ 9 ರಂದು ರಾಷ್ಟ್ರೀಯ ಕರೆಯ ಮೇರೆಗೆ ಬಿಜೆಪಿ ಹಿಂಸಾಚಾರವನ್ನು ಪ್ರತಿಭಟಿಸಿ ಬೆಂಗಳೂರಲ್ಲಿ ಮೈಸೂರು ಬ್ಯಾಂಕ್ ಸರ್ಕಲ್ ನಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆಯನ್ನು "ಜ್ಯೋತಿ ಬಸು ಭವನ"ಕ್ಕೆ ಸ್ಥಳಾಂತರಿಸಲಾಯಿತು. "ಜ್ಯೋತಿ ಬಸು ಭವನ"ಕ್ಕೆ ಬಿಜೆಪಿ ಮುತ್ತಿಗೆ ಸುದ್ದಿ ಹರಡುತ್ತಿದ್ದಂತೆ ಕಾರ್ಮಿಕರು ನೂರಾರು ಸಂಖ್ಯೆಯಲ್ಲಿ ಕಾರ್ಮಿಕರ ಕೇಂದ್ರವನ್ನು ರಕ್ಷಿಸಲು ಬೆಳಿಗ್ಗೆಯಿಂದಲೇ ಬರತೊಡಗಿದರು. ನೂರಾರು ಸಂಖ್ಯೆಯಲ್ಲಿ ಸೇರಿದ್ದ ಕಾರ್ಮಿಕರು "ಜ್ಯೋತಿ ಬಸು ಭವನ"ದ ಸುತ್ತ ಭದ್ರತಾ ತಡೆಗೋಡೆಯಾಗಿದ್ದರು. ಆ ಮೇಲೆ ನಡೆದ ಪ್ರತಿಭಟನಾ ಸಭೆಯಲ್ಲಿ ಜಿ.ವಿ.ಶ್ರೀರಾಮರೆಡ್ಡಿ, ಜಿ.ಎನ್. ನಾಗರಾಜ್, ಕೆ.ಎನ್. ಉಮೇಶ್, ಸಿದ್ದನಗೌಡ ಪಾಟೀಲ, ಮೀನಾಕ್ಷಿ ಸುಂದರಂ, ವಿಮಲಾ ಮುಂತಾದ ನಾಯಕರು ಸಭೆಯಲ್ಲಿ ಮಾತನಾಡಿದರು. ಪೋಲಿಸರು ಬಿಜೆಪಿ ಗೂಂಡಾ ಪಡೆಯನ್ನು ಬಂಧಿಸಲಾಗಿದೆ ಎಂದು ಹೇಳಿದ ಮೇಲೂ ಕಾರ್ಮಿಕರು ಬಹು ಕಾಲ "ಜ್ಯೋತಿ ಬಸು ಭವನ" ಬಿಟ್ಟು ಕದಲಲಿಲ್ಲ.

ರಾಜ್ಯಾದ್ಯಂತ "ಜ್ಯೋತಿ ಬಸು ಭವನ"ಕ್ಕೆ ಮುತ್ತಿಗೆಯ ಬಿಜೆಪಿ ಬೆದರಿಕೆ ಪ್ರತಿಭಟಿಸಿ ಪ್ರದರ್ಶನಗಳು ನಡೆದಿವೆ. ಮಂಗಳೂರು, ತುಮಕೂರು, ದಾವಣಗೆರೆ, ಮಂಡ್ಯ, ಕಲಬುರ್ಗಿ, ಹೊಸಪೇಟೆ ಮುಂತಾದ ಕಡೆ ಪ್ರತಿಭಟನೆಗಳು ನಡೆದ ವರದಿಗಳು ಬಂದಿವೆ.

JANASHAKTHI KANNADA VARA PATRIKE OCTOBER 16-22, 2017 Price : Rs. 10/- Date of Publication: 13 OCTOBER 2017 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ಕ್ರಾಂತಿಯ ಕಿಚ್ಚು ಹೊತ್ತಿಸಿದ ತಾಯಿ

– ಪ್ರಸನ್ನಕುಮಾರ್ ಕೆರಗೋಡು

ಶ್ರೇಷ್ಠ ಕಾದಂಬರಿಕಾರ ಮ್ಯಾಕ್ಸಿಂ ಗಾರ್ಕಿ 'ತಾಯಿ'. ಇದರ ನಾಟಕರೂಪ ಈಚೆಗೆ ಮೈಸೂರು, ಬೆಂಗಳೂರುಗಳಲ್ಲಿ ಪ್ರದರ್ಶನಗೊಂಡಿತು. ನಾಟಕದ ವಿಮರ್ಶೆ ಇಲ್ಲಿದೆ.



ಜಗತ್ತಿನಲ್ಲಿ ಅನೇಕ ಕ್ರಾಂತಿಗಳು ಆಗಿ ಹೋಗಿವೆ. ಆದರೆ, 1905 ಮತ್ತು 1917ರ ರಷ್ಯನ್ ಕ್ರಾಂತಿಗಳು ಮಾತ್ರ ಎಲ್ಲಕ್ಕಿಂತ ಭಿನ್ನವಾಗಿ ನಿಂತು ಕ್ರಾಂತಿಯ ನೈಜ ಅರ್ಥವನ್ನು ವ್ಯಾಖ್ಯಾನಿಸುವಂಥವು. ಈ ಅಕ್ಟೋಬರ್ ಕ್ರಾಂತಿ ಝಾರ್ ದೊರೆಗಳ ಅವಮಾನವೀಯ ಆಡಳಿತವನ್ನು ಕೊನೆಗಾಣಿಸಿ ಲೆನಿನ್‌ನ ಬೋಲ್ಶೆವಿಕ್ ಪಕ್ಷದ ನೇತೃತ್ವದ ಜಗತ್ತಿನ ಮೊದಲ ಸಮಾಜವಾದೀ ಹಿನ್ನೆಲೆಯ ಗಣರಾಜ್ಯವನ್ನು ಸ್ಥಾಪಿಸುತ್ತದೆ.

ಈ ಹಿನ್ನೆಲೆಯಲ್ಲಿ ಸ್ಫೂರ್ತಿಗೊಂಡು ರಷ್ಯಾದ ಶ್ರೇಷ್ಠ ಕಾದಂಬರಿಕಾರ ಮ್ಯಾಕ್ಸಿಂ ಗಾರ್ಕಿ 'ತಾಯಿ' ಕಾದಂಬರಿ ರಚಿಸಿದ್ದಾರೆ. ರಷ್ಯಾದ ತಳಸ್ತರದ ಜನರ ಬದುಕು ಮತ್ತು ಅವರೊಳಗಿನ ಕಿಚ್ಚನ್ನು ಪರಿಚಯಿಸಿದರು. ಕ್ರಾಂತಿಕಾರಿ ಮಗನೊಬ್ಬನ ಕ್ರಾಂತಿ ವಿರೋಧಿ ತಾಯಿ ಎಂದು ಆರಂಭದಲ್ಲಿ ಕಾಣಿಸಿಕೊಳ್ಳುವ ತಾಯಿಯ ಒಳ-ಹೊರಗನ್ನು ಚಿತ್ರಿಸಿರುವ ರೀತಿ ಅನನ್ಯವಾಗಿದೆ. ಇಂತಹ ಚಿತ್ರಣ ನೀಡುವ ಬೆರ್ಟೋಲ್ಟ್ ಬ್ರೆಕ್ಟ್‌ನ 'ತಾಯಿ' ನಾಟಕ ಇತ್ತೀಚೆಗೆ ಮೈಸೂರಿನ ಕಲಾಮಂದಿರದಲ್ಲಿ ಪ್ರದರ್ಶನ ಕಂಡಿತು. ಬಡ ಕೂಲಿ ಕಾರ್ಮಿಕರ ನೋವಿನ ತುಡಿತಗಳನ್ನು ಬಿಚ್ಚಿಡುತ್ತಾ ಅವರೊಳಗಿನ ಕ್ರಾಂತಿಯ ಕಿಚ್ಚನ್ನು ಅವರ ಸಂಭಾಷಣೆಗಳಲ್ಲಿ ಕೇಳುವಾಗ ನಿಜವಾಗಿಯೂ ಇಪ್ಪತ್ತನೇ ಶತಮಾನದ ಆದಿ ಭಾಗದ ರಷ್ಯಾ ದೇಶವೇ ಪ್ರೇಕ್ಷಕ ಗಣದ ಕಣ್ಣ ಮುಂದೆ ತೆರೆದುಕೊಂಡಿತ್ತು.

ಮಾತೃ ಹೃದಯ

ಜಗತ್ತಿನಲ್ಲಿ ಒಂದು ರೆವೆಲ್ಯೂಷನರಿ ಸೆನ್ಸೇಷನ್ ಸೃಷ್ಟಿಸಿದ್ದ ಮ್ಯಾಕ್ಸಿಂ ಗಾರ್ಕಿಯ ತಾಯಿಯನ್ನು ಜರ್ಮನಿಯ ಎಪಿಕ್ ಥಿಯೇಟರ್‌ನ ಪ್ರವರ್ತಕ ಬ್ರೆಕ್ಟ್ ರಂಗದ ಮೇಲೆ ತಂದಾಗ ಸಿಕ್ಕಿದ ಪ್ರತಿಕ್ರಿಯೆ ಐತಿಹಾಸಿಕವಾದದ್ದು. ಮಗನಿಗೆ ಪೌಷ್ಟಿಕವಾದ ಸೂಪ್ ಮಾಡಿಕೊಡಲಾಗದ ಅಸಹಾಯಕ ಮಾತೃ ಹೃದಯದ ತೊಳಲಾಟವನ್ನು ತನಗೆ ತಾನೆ ಬಡಬಡಿಸಿಕೊಳ್ಳುತ್ತಾ ತನ್ನ ಪುಟ್ಟ ಮನೆಯಲ್ಲಿ ಹೆಣಗಾಡುವ ತಾಯಿಯ ಮಾತುಗಳಿಂದ ಆರಂಭ ಕಾಣುವ ನಾಟಕ ಪೆಲಿಜಿಯಾಳ ಪಾತ್ರದ ಸಹಜಾಭಿನಯದಿಂದ ಗಮನ ಸೆಳೆಯುತ್ತದೆ. ಕಾರ್ಮಿಕರನ್ನು ಜಾಗೃತಿಗೊಳಿಸುವ ಉದ್ದೇಶಕ್ಕಾಗಿ ಮನೆಯಲ್ಲೆ ಮುದ್ರಿಸುವ ಕರಪತ್ರ, ಅದಕ್ಕೆ ಅಂತಿಮ ರೂಪು-ರೇಷೆಗಳನ್ನು ಹೆಣೆಯಲು ತನ್ನ ಮನೆಯಲ್ಲೆ ಸೇರುವ ರಹಸ್ಯ ಸಭೆಗಳನ್ನು ವಿರೋಧಿಸುತ್ತಾ ತನ್ನ ಮಗನಾದ ಪಾವೆಲ್‌ನನ್ನು ಎಚ್ಚರಿಸುವಾಗ ಪೆಲಿಜಿಯಾ ನಮಗೆ ಕ್ರಾಂತಿ ಮತ್ತು ಅದರ ಪ್ರಕ್ರಿಯೆಯನ್ನು ವಿರೋಧಿಸುವ ಅಪ್ಪಟ ತಾಯಿಯಾಗಿ ಗೋಚರಿಸುತ್ತಾಳೆ. ಅಚ್ಚಾದ ಕರಪತ್ರಗಳನ್ನು ಫ್ಯಾಕ್ಟರಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ರಹಸ್ಯವಾಗಿ ತಲುಪಿಸುವ ಹೊಣೆಗಾರಿಕೆ ತನ್ನ ಮಗನದು ಎಂದು ತಿಳಿದಾಗ ಕಂಗಾಲಾಗುತ್ತಾಳೆ. ಅದರ ಗಾಂಭೀರ್ಯತೆಯನ್ನು ಅರಿತು ಮಗನ ಬದಲಿಗೆ ತಾನೇ ಕರಪತ್ರ ಹಂಚುವ ಅಪಾಯಕಾರಿ ಕೆಲಸವನ್ನು ಒಪ್ಪಿಕೊಳ್ಳುತ್ತಾಳೆ. ಇಂತಹ ಒಂದು ಗಂಭೀರ ಸನ್ನಿವೇಶವನ್ನು ನಿರ್ದೇಶಕರು ಹಾಸ್ಯದ ದಾಟಿಯಲ್ಲಿ ಕಟ್ಟಿಕೊಡುವುದರ ಮೂಲಕ ಪ್ರೇಕ್ಷಕರಿಗೆ ಕಾಮಿಕ್ ರಿಲೀಫ್ ಕೊಡುವಲ್ಲಿ ಸಫಲರಾಗುತ್ತಾರೆ.

ಕ್ರಾಂತಿಯನ್ನು ಸದಾ ವಿರೋಧಿಸುವ ತಾಯಿ ಮಗನನ್ನು ಕರಪತ್ರ ಹಂಚುವ ಕೆಲಸದಿಂದ ಪಾರು ಮಾಡಲು ಹೋಗಿ ಬಡವರ ಮತ್ತು ಕಾರ್ಮಿಕರ ನೈಜ ದಾರುಣ ಚಿತ್ರವನ್ನು ಕಾಣುತ್ತಾ ತಾನೇ ತನ್ನೊಳಗೆ ಕ್ರಾಂತಿಯ ಕಿಚ್ಚು ಹೊತ್ತಿಸಿಕೊಳ್ಳುತ್ತಾಳೆ. ತನಗಾಗಿ, ಮಗನಿಗಾಗಿ ಮಾತ್ರವಲ್ಲದೆ ಇಡೀ ಬಡ ಕಾರ್ಮಿಕರ ಪರವಾಗಿ ಹೋರಾಟ ಪ್ರಾರಂಭಿಸುತ್ತಾಳೆ. ಇದಕ್ಕಾಗಿ ತನಗೆ ಆಶ್ರಯ ನೀಡಿದ್ದ ಮೇಷ್ಟ್ರ ಮನೆಯಲ್ಲಿ ರಹಸ್ಯ ಸಭೆಗಳನ್ನು ಆಯೋಜಿಸುವ ಮಟ್ಟಕ್ಕೂ ಹೋಗುತ್ತಾಳೆ. ಅಷ್ಟೊತ್ತಿಗೆ ಮಗನ ಸಾವಿನ ಸುದ್ದಿಯನ್ನು ಬರಸಿಡಿಲಿನ ಹಾಗೆ ಬಡಿಸಿಕೊಳ್ಳುವ ತಾಯಿ ದುಃಖಿಸುವ ಬದಲು ಕುದಿದು ಹೋಗುತ್ತಾಳೆ. ತನ್ನ ಮಗನನ್ನು ಬಲಿ ತೆಗೆದುಕೊಂಡ ಪ್ರಭುತ್ವದ ವಿರುದ್ಧ ಊರಿಂದ ಊರಿಗೆ ಅಲೆದು ಕ್ರಾಂತಿಯ ಸಂಘಟನೆ ಕಟ್ಟುತ್ತಾಳೆ. ತನ್ನ ಈ ಪ್ರಯಾಣದುದ್ದಕ್ಕೂ ಧೈರ್ಯ ಸಾಹಸ ಮನೋಬಾವನೆ, ಕ್ರಿಯಾಶೀಲತೆ, ಸಂಘಟನಾ ಚತುರತೆಯನ್ನು ಪ್ರದರ್ಶಿಸುವ ಅವಳು ಅಕ್ಟೋಬರ್ ಕ್ರಾಂತಿಯಲ್ಲಿ ಮುಂಚೂಣಿಯಾಗಿ ನಿಂತು ಕ್ರಾಂತಿಯ ಕೆಂಪು ಬಾವುಟ ಹಾರಿಸಿ ಬಿಡುತ್ತಾಳೆ. ಆ ಮೂಲಕ ಬದಲಾಗುವ ವ್ಯವಸ್ಥೆಯ ಮೂಲವಾಗುತ್ತಾಳೆ.

ಇಡೀ ನಾಟಕದುದ್ದಕ್ಕೂ ಪಾತ್ರಧಾರಿಗಳ ತಲ್ಲಣಗಳು, ಕ್ರಾಂತಿಕಾರಕ ನುಡಿಗಳು ಹಾಗೂ ಆವೇಶಭರಿತ ನಟನೆ ಹಾಡುಗಳು 1970-80 ದಶಕದ ಬಂಡಾಯ ಗೀತೆಗಳನ್ನು ನೆನಪಿಸುತ್ತವೆ. ಸಂಗೀತ ನೀಡಿರುವ ಜನಾರ್ದನ್(ಜನ್ನಿ), ಹಾಡಿರುವ ದೇವಾನಂದ ವರಪ್ರಸಾದ್ ಮತ್ತು ನರಸಿಂಹನ್ ತಂಡ ತಮ್ಮ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿದ್ದಾರೆ. ಕ್ರಾಂತಿಕಾರಕ ಮತ್ತು ಗಂಭೀರ ಸನ್ನಿವೇಶಗಳಲ್ಲಿ ಕೃಷ್ಣಕುಮಾರ್ ನಾರ್ಣಕಜೆ ಅವರ ಬೆಳಕು ಸಮರ್ಪಕವಾಗಿ ಕಾರ್ಯ ನಿರ್ವಹಿಸಿದೆ. ಅನುಷಾ, ಸತೀಶ್ ಬಿ.ಎನ್. ಮತ್ತು ಶೈಲೇಶ್ ಅವರ ವಸ್ತ್ರ ವಿನ್ಯಾಸ ರಷ್ಯಾದ ಆ ಕಾಲವನ್ನು ಪ್ರತಿಬಿಂಬಿಸುತ್ತದೆ. ಪ್ರಸಾದನ ಚೆನ್ನಾಗಿದೆ. ಬ್ರೆಕ್ಟ್‌ನ ಮೂಲ ನಾಟಕವನ್ನು ನಿದೇಶಿಸಿರುವ ಅನುಭವ ರಂಗ ನಿರ್ದೇಶಕ ಬಿ.ಆರ್. ರಮೇಶ ಅವರ ನಿರ್ದೇಶನ ಎಂದಿನಂತೆ ಅಚ್ಚುಕಟ್ಟಾಗಿದೆ.

ತಾಯಿ ಪಾತ್ರಧಾರಿ ತೇಜಸ್ವಿನಿ ಜೋಯಿಸ್ ಉತ್ತಮವಾಗಿ ನಟಿಸಿದ್ದಾರೆ. ಜನಾರ್ಧನರ ಪಾವೆಲ್ ಪಾತ್ರಕ್ಕೆ ಅಷ್ಟೇನೂ ವಿಶಾಲ ವ್ಯಾಪ್ತಿ ಇಲ್ಲದಿದ್ದರೂ ಪಾತ್ರ ಮನಸ್ಸಿನಲ್ಲಿ ನಿಲ್ಲುತ್ತದೆ. ದ್ವಾರಕಾನಾಥ್ ನಿರ್ವಹಿಸಿರುವ ಮೇಷ್ಟ್ರು ಪಾತ್ರ ನಾಟಕಕ್ಕೆ ಅತಿ ಮುಖ್ಯ ಪಾತ್ರವಾಗಿ ಗೋಚರವಾಗುತ್ತದೆ.

(ಕೃಪೆ : ವಿಜಯ ಕರ್ನಾಟಕ)

ತುಸ್ಸೆಂದ ಬಿಜೆಪಿ ಮುತ್ತಿಗೆ – ರಾಜ್ಯಾದ್ಯಂತ ಪ್ರತಿಭಟನೆ


ಬೆಂಗಳೂರು


ಬೆಂಗಳೂರು


ತುಮಕೂರು


ಮಂಗಳೂರು


ಗುಲ್ಬರ್ಗಾ


ಮಂಡ್ಯ

ಬಿಜೆಪಿ ಅಕ್ಟೋಬರ್ 8 ರಂದು ಪಾದಯಾತ್ರೆ ನಡೆಸಿ ಸಿಪಿಐ(ಎಂ) ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ ಕಚೇರಿ ಇರುವ ಬಸವನಗುಡಿಯಲ್ಲಿರುವ "ಜ್ಯೋತಿ ಬಸು ಭವನ"ಕ್ಕೆ ಮುತ್ತಿಗೆ ಹಾಕುವುದಾಗಿ ಘೋಷಿಸಿತ್ತು. ಅದಕ್ಕಾಗಿ ಅಕ್ಟೋಬರ್ 9ರಂದು 'ಜ್ಯೋತಿಬಸು ಭವನ'ದತ್ತ ಬಿಜೆಪಿ ಮಾಜಿ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ, ಸಂಸದೆ ಶೋಭಾ

ಪುಟ 15 ಕ್ಕೆ

JANASHAKTHIKANNADAVARAPATRIKE: Printed, Published by **G.V.SRIRAMAREDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**